ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಮಾರ್ಚ್ 3, 2010 ರೂ. 12/-



ಹೊಳೆಗೆ ಹೊಸ ನೀರು

ಪ್ರಭಾಕರ್ ಎ.ಎಸ್



ನಿತ್ಯಾನಂದ ಸ್ವಾಮಿಯ ...ಲಾಟಗಳು

...ಿವಮೊಗ್ಗ ...ವಿಎಸ್ ...ಾಲೇಜಿನ ...ರ್ಮಕಾಂಡ

ಮಂಡ್ಯದ ಪಾತಕಿ ರಫೀವುಲ್ಲಾನ ಹಿಂದೆ ಯಾರ್ಯಾರು?

ಜ್ಯೋತಿಷಿಯ ಕಿಡ್ನಾಪ್ ಪ್ರಸಂಗ

ಮಂಗಳೂರು ಚೆಡ್ಡಿ PSI ಪ್ರಮೋದ್ ಕುಮಾರ್


...ಪ್ರಕಾಶ್

...ಾಲದ ಸಂಕಟ-ಸಾಯುವ ನಾಟಕ



Civil Liability Of Nuclear Damage Bill

ಉಂಡೂ ಹೋಗಲಿ, ಕೊಂಡೂ ಹೋಗಲಿ ಕೊಂದೂ ಹೋಗಲಿ!!



ಮುಠಾಳರು ಆತಿಥ್ಯ ನಡೆಸುವಾಗ ಕುತಂತ್ರಿ ಅತಿಥಿಗಳು ಮನೆ ಹೊಕ್ಕರೆ ಉಂಡೂ ಹೋಗುತ್ತಾರೆ. ಹೋಗುವಾಗ ಸಿಕ್ಕಿದ್ದನ್ನೆಲ್ಲಾ ಕೊಂಡೂ ಹೋಗುತ್ತಾರೆ. ಆದರೆ ಭಾರತ ಸರ್ಕಾರ ಈಗ ಅಮೆರಿಕಕ್ಕೆ ಕೊಡುತ್ತಿರುವ ಆತಿಥ್ಯದಲ್ಲಿ ಅಮೆರಿಕ ಉಂಡೂಹೋಗುತ್ತಿದೆ, ಭಾರತದ ತಿಜೋರಿಯನ್ನು ಕೊಂಡೂ ಹೋಗುತ್ತಿದೆ. ಅದರ ಜೊತೆಗೆ ಭಾರತೀಯರನ್ನು ಕೊಂದೂ ಹೋಗುತ್ತಿದೆ. ಅಮೆರಿಕ ಇಷ್ಟೆಲ್ಲಾ ಮಾಡಿದರೂ ಅವರ ಮೇಲೆ ಸಣ್ಣ ಕೇಸನ್ನೂ ದಾಖಲಿಸಬಾರದೆಂಬ ಹೊಸ ಮಸೂದೆಯೊಂದನ್ನು ಸಹ ಇದೇ ಅಧಿವೇಶನದಲ್ಲಿ ಸರ್ಕಾರ ಜಾರಿಗೆ ತರುತ್ತಿದೆ.

ಭಾರತವು ಅಮೆರಿಕದೊಂದಿಗೆ ನಾಗರಿಕ ಪರಮಾಣು ಒಪ್ಪಂದ ಮಾಡಿಕೊಂಡಿದ್ದು ಈ ದೇಶದ ಅಭಿವೃದ್ಧಿಯಲ್ಲಿ ದೊಡ್ಡ ಮೈಲಿಗಲ್ಲು ಎಂದು ಯುಪಿಎ ಸರ್ಕಾರ ಈಗಲೂ ಪ್ರತಿಪಾದಿಸುತ್ತಿದೆ. ಈ ಒಪ್ಪಂದದಂತೆ ಭಾರತ ತನ್ನೆಲ್ಲಾ ಅಣುಸ್ಥಾವರಗಳನ್ನು ಅಮೆರಿಕ ನೇತೃತ್ವದ ಪರಿಶೀಲನಾ ಸಂಸ್ಥೆ ಐಎಇಎಗೆ ಒಪ್ಪಿಸಲು ಸಮ್ಮತಿಸಿದೆ. ಈ ಅತ್ಯಂತ ಅಪಮಾನಕಾರಿ ಒಪ್ಪಂದದಂತೆ ವಿಶ್ವದ ದೊಡ್ಡಣ್ಣ ಅಮೆರಿಕವು ಸ್ವತಂತ್ರ ಭಾರತದಲ್ಲಿರುವ ನಮ್ಮೆಲ್ಲಾ ಅಣುಸ್ಥಾವರಗಳ ಮೇಲೆ ನಿಗಾ ಇಟ್ಟು ನಾವದನ್ನು ಅಣುಬಾಂಬ್ ತಯಾರಿಸಲು ಬಳಸದಂತೆ ಉಸ್ತುವಾರಿ ನಡೆಸಬಹುದು. ಅಷ್ಟರಮಟ್ಟಿಗೆ ನಮ್ಮ ಸಾರ್ವಭೌಮತೆಯನ್ನು ನಾವು ಅಮೆರಿಕಕ್ಕೆ ಅಡ ಇಟ್ಟಂತೆ!

ಇದಕ್ಕೆ ಪ್ರತಿಯಾಗಿ ಭಾರತ ಪಡೆಯುವುದೇನು? ಭಾರತವು ಅಪಾರ ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆಯಾದ್ದರಿಂದ ಈ ಒಪ್ಪಂದಕ್ಕೆ ಬದಲಿಗೆ ಅಮೆರಿಕ ಮತ್ತು ಇನ್ನಿತರ ಶ್ರೀಮಂತ ದೇಶಗಳು ಅಣುವಿದ್ಯುತ್ ಉತ್ಪಾದನೆಮಾಡಲು ಅಣುಸ್ಥಾವರಗಳನ್ನು ಮತ್ತು ಯುರೇನಿಯಂ ಉರುವಲನ್ನು ಸರಬರಾಜು ಮಾಡುತ್ತವಂತೆ! ಪುಕ್ಕಟೆಯೇನಲ್ಲ, ಮಾರುಕಟ್ಟೆ ದರಕ್ಕಿಂತ ಎರಡುಪಟ್ಟು ಹೆಚ್ಚಿನ ದರದಲ್ಲಿ. ಹಾಗೆ ನೋಡಿದರೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಣುವಿದ್ಯುತ್ ಉದ್ಯಮ ನಷ್ಟವನ್ನೇ ಅನುಭವಿಸುತ್ತದೆ. ಏಕೆಂದರೆ ಅಣುವಿದ್ಯುತ್ತಿನ ಉತ್ಪಾದನೆಗಾಗುವ ವೆಚ್ಚ ಮತ್ತು ಅದರ ನಿರ್ವಹಣೆಯಲ್ಲಿರುವ ಅಪಾಯಗಳಿಂದಾಗಿ ಅಣುಸ್ಥಾವರಗಳಿಗೆ ಮಾರುಕಟ್ಟೆಯೇ ಕಡಿಮೆಯಾಗಿತ್ತು. ಆದರೆ ಭಾರತ ಅಮೆರಿಕದೊಡನೆ ನಾಗರಿಕ ಅಣು ಒಪ್ಪಂದ ಮಾಡಿಕೊಂಡ ಮೇಲೆ ನಷ್ಟದಲ್ಲಿದ್ದ ಈ ಉದ್ಯಮಕ್ಕೆ 1,40,000 ಕೋಟಿ ರೂ.ಗಳಷ್ಟು ಮಾರುಕಟ್ಟೆ ಸಿಕ್ಕಂತಾಗಿದೆ. ಅಷ್ಟು ಮಾತ್ರವಲ್ಲ, ಭಾರತ ಇವನ್ನು ಮಾರುಕಟ್ಟೆಯ ಮೂಲಕ ಖರೀದಿಸದೆ ಒಪ್ಪಂದಗಳ ಮೂಲಕ ಖರೀದಿಸುತ್ತಿರುವುದರಿಂದ ದುಪ್ಪಟ್ಟು ಬೆಲೆಯನ್ನು ನೀಡುತ್ತಿದೆ. ಅಮೆರಿಕ ದೇಶ ಒಂದರಿಂದಲೇ 80,000 ಕೋಟಿಗೂ ಹೆಚ್ಚು ಮೌಲ್ಯದ 8000 ಮೆಗಾವ್ಯಾಟ್ ಉತ್ಪಾದನೆ ಸಾಮರ್ಥ್ಯವುಳ್ಳ ಅಣುಸ್ಥಾವರಗಳನ್ನು ಕೊಳ್ಳುವ ಯೋಜನೆ ಅನುಷ್ಠಾನದ ವಿವಿಧ ಹಂತದಲ್ಲಿದೆ. ಈಗಾಗಲೇ ತೀವ್ರ ನಷ್ಟ ಅನುಭವಿಸುತ್ತಿರುವ ಅಮೆರಿಕದ ಡುಪಾಂಟ್‌ನಂಥ ಹಲವಾರು ಅಣುವಿದ್ಯುತ್ ಬಹುರಾಷ್ಟ್ರೀಯ ಕಂಪನಿಗಳಿಗೆ ಇದು ಬಯಸದೇ ಬಂದ ಭಾಗ್ಯವಾಗಿ ಪರಿಣಮಿಸಿದೆ.





ಇದೂ ಉಂಡೂ ಹೋಗುತ್ತಿರುವ ಅಮೆರಿಕ ಕೊಂಡೂ ಹೋಗುತ್ತಿರುವ ರೀತಿ.

ಈಗ ಅದೆಲ್ಲಕ್ಕಿಂತಲೂ ಮಿಗಿಲಾಗಿ ಅಮೆರಿಕದ ಕಂಪನಿಗಳ ಕಾವಲು ನಾಯಿಯ ತರಹ ಕೆಲಸ ಮಾಡುವ ಒಂದು ಕಾಯಿದೆಯನ್ನು ಸರ್ಕಾರ ಪಾರ್ಲಿಮೆಂಟಿನಲ್ಲಿ ಮಂಡಿಸುತ್ತಿದೆ. ಇಂದು ಅಣುವಿದ್ಯುತ್ತಿನ ಬಗ್ಗೆ ಜಗತ್ತಿನಲ್ಲಿ ಉತ್ಸಾಹವಿಲ್ಲದಿರಲು ಮುಖ್ಯ ಕಾರಣ ಅದು ದುಬಾರಿಯೆಂಬುದು ಮಾತ್ರವಲ್ಲ, ಅದಕ್ಕಿಂತ ಹೆಚ್ಚಾಗಿ ಅದು ಅತ್ಯಂತ ಅಪಾಯಕಾರಿಯೂ ಹೌದು ಎಂಬುದು. 35 ವರ್ಷಗಳ ಕೆಳಗೆ ಅಮೆರಿಕದ ತ್ರೀಮೈಲ್ ಐಲೆಂಡ್, 1985ರಲ್ಲಿ ರಷ್ಯಾದ ಚೆರ್ನೋಬಿಲ್ ಹಾಗೂ ಪ್ರತಿವರ್ಷ ಜಗತ್ತಿನ ಹಲವಾರು ಅಣುಸ್ಥಾವರಗಳಲ್ಲಿ ಆಲ್ಲಲ್ಲಿ ಸಂಭವಿಸುತ್ತಲೇ ಇರುವ ಅವಘಡಗಳು ಅಣುಸ್ಥಾವರಗಳು ಎಷ್ಟು ಅಪಾಯಕಾರಿ ಎಂಬುದನ್ನು ಸಾರುತ್ತಲೇ ಇವೆ. ಇಂಥ ಅವಘಡಗಳು ತತ್‌ಕ್ಷಣಕ್ಕೆ ಎಷ್ಟು ಜನರನ್ನು ಸಾಯಿಸುತ್ತವೆಯೋ ಅದಕ್ಕಿಂತ ನೂರುಪಟ್ಟು ಹೆಚ್ಚಿಗೆಯಾದ ಅಪಾಯಗಳು ಮುಂದಿನ ನೂರಾರು ವರ್ಷಗಳ ತನಕ ಸಂಭವಿಸುತ್ತಲೇ ಇರುತ್ತವೆ. ತ್ರೀಮೈಲ್ ಐಲೆಂಡ್ ಮತ್ತು ಚೆರ್ನೋಬಿಲ್ ಸುತ್ತಮುತ್ತಲೂ ಮುಂದಿನ ಹಲವು ನೂರು ವರ್ಷಗಳವರೆಗೆ ಜನವಸತಿಯಾಗಲೀ, ಕೃಷಿ ಚಟುವಟಿಕೆಯಾಗಲೀ ಸಾಧ್ಯವಾಗುವುದಿಲ್ಲ.

ಇಂಥ ಅವಘಡಗಳು ಹಲವಾರು ಬಾರಿ ಸಂಭವಿಸುವುದು ವಿಜ್ಞಾನದ ಮಿತಿಗಿಂತಲೂ ಹೆಚ್ಚಾಗಿ ಅಲ್ಲಿ ಪಾಲಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳನ್ನು ಸರಿಯಾಗಿ ಪಾಲಿಸದೇ ಇರುವುದರಿಂದ ಅಥವಾ ಅಂಥ ಮುನ್ನೆಚ್ಚರಿಕಾ ಕ್ರಮಗಳನ್ನು ವ್ಯವಸ್ಥೆಗೊಳಿಸಲು ಬೇಕಾದ ಹಣವನ್ನು ಆ ಅಣುಸ್ಥಾವರವನ್ನು ನಿರ್ಮಿಸುವ ಸರ್ಕಾರ ಅಥವಾ ಖಾಸಗಿ ಕಂಪನಿ ವೆಚ್ಚಮಾಡಲು ನಿರ್ಲಕ್ಷ್ಯ ತೋರುವುದರಿಂದ. ಈಗಾಗಲೇ ಅಮೆರಿಕದ ಯೂನಿಯನ್ ಕಾರ್ಬೈಡ್ ಕಂಪನಿ ಭೂಪಾಲ್‌ನಲ್ಲಿ ಸ್ಥಾಪಿಸಿದ್ದ ತನ್ನ ಘಟಕದಲ್ಲಿ ಕೇವಲ 2 ಕೋಟಿ ರೂಪಾಯಿ ವೆಚ್ಚ ಮಾಡಿ ಒಂದು ಮುನ್ನೆಚ್ಚರಿಕಾ ವ್ಯವಸ್ಥೆ ಮಾಡಿಕೊಳ್ಳದಿದ್ದಕ್ಕೆ 10,000 ಕ್ಕೂ ಹೆಚ್ಚು ಜನ ಸತ್ತು ಈಗಲೂ 4 ಲಕ್ಷಕ್ಕೂ ಹೆಚ್ಚು ಭಾರತೀಯರು ಪಡಬಾರದ ಪಾಡು ಅನುಭವಿಸುತ್ತಿರುವುದು ನಮಗೆಲ್ಲರಿಗೂ ಗೊತ್ತಿರುವ ವಿಷಯವೇ! ಆದರೆ ಆ ಕಂಪನಿಯ ಮೇಲೆ ಕನಿಷ್ಠ ಒಂದು ಸಣ್ಣ ಕ್ರಿಮಿನಲ್ ಕೇಸನ್ನು ಹಾಕುವ ಧೈರ್ಯವನ್ನು ಸರ್ಕಾರ ತೋರಲಿಲ್ಲ. ಇದೇ ಅವಘಡ ಅಮೆರಿಕದಲ್ಲಿ ಸಂಭವಿಸಿದ್ದರೆ ಈ ಕಂಪನಿ 4000 ಕೋಟಿ ರೂ.ಗಳಿಗೂ ಹೆಚ್ಚು ಪರಿಹಾರ ತೆರಬೇಕಾಗುತ್ತಿತ್ತು. ಆದರೆ ಭಾರತೀಯರ ಜೀವ ಅಗ್ಗವಲ್ಲವೇ! ಹೀಗಾಗಿ 4 ಲಕ್ಷ ಜನರ ಬದುಕು ಹಾಳು ಮಾಡಿದ್ದಕ್ಕೆ ಕೇವಲ 744 ಕೋಟಿ ರೂಪಾಯಿ ಪರಿಹಾರ ಸಾಕೆಂದು ಭಾರತದ ಸುಪ್ರೀಂಕೋರ್ಟೇ ತೀರ್ಮಾನ ಮಾಡಿತು! ಈಗ ಭಾರತದ ಜನತೆಯ ಒಕ್ಕೊರಲ ಹೋರಾಟಕ್ಕೆ ಮಣಿದಿರುವ ಸರ್ಕಾರ ಮತ್ತು ನ್ಯಾಯಾಲಯಗಳು ಭೂಪಾಲ್ ದುರಂತ ಸಂಭವಿಸಿದ 25 ವರ್ಷಗಳ ನಂತರ ಆ ಕಂಪನಿ ಮಾಲೀಕ ಆಂಡರ್ಸನ್ ಮೇಲೆ ಕ್ರಿಮಿನಲ್ ಕೇಸ್ ಹಾಕುವ ಪ್ರಯತ್ನದಲ್ಲಿದೆ.

ಈಗ ಭಾರತದಲ್ಲಿ ಅಣುಸ್ಥಾವರ ಹೂಡಬಯಸುತ್ತಿರುವ ಅಮೆರಿಕದ ಖಾಸಗಿ ಕಂಪನಿಗಳು ಹೆದರುತ್ತಿರುವುದು ಇದಕ್ಕೆ. ಒಂದು ವೇಳೆ ಯಾವುದಾದರೂ ಅವಘಡ ಸಂಭವಿಸಿದರೆ ಆಗ ಪರಿಹಾರಕ್ಕಾಗಿ ತೆರಬೇಕಾಗುವ ಹಣ ಅವರೆಗೆ ಮಾಡಿದ ತಮ್ಮೆಲ್ಲಾ ಲಾಭವನ್ನು ತೆರಬೇಕಾಗಿ ಬರುತ್ತದಲ್ಲ ಎಂಬ ಅಪಾಯಕ್ಕೆ.

ಈಗ ನಮ್ಮ ಸ್ವತಂತ್ರ ಭಾರತದ ಘನ ಸರ್ಕಾರ ಅಮೆರಿಕನ್ ಕಂಪನಿಗಳ ಆ ಆತಂಕವನ್ನು ನಿವಾರಿಸಲು ಮುಂದಾಗಿದೆ. ಈ ಅಧಿವೇಶನದಲ್ಲಿ "Civil Liability Of Nuclear Damage Bill" ಎಂಬ ಮಸೂದೆಯನ್ನು ಮಂಡಿಸುತ್ತಿದೆ. ಈ ಮಸೂದೆ ಜಾರಿಗೆ ಬಂದರೆ ಅವಘಡ ಸಂಭವಿಸಿದ ಅಣುಸ್ಥಾವರವನ್ನು ನಿರ್ಮಾಣ ಮಾಡಿದ ಅಥವಾ ಸರಬರಾಜು ಮಾಡಿದ ಅಮೆರಿಕನ್ ಕಂಪನಿಯ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವಂತಿಲ್ಲ. ಕೇವಲ ಸಿವಿಲ್ ಮೊಕದ್ದಮೆಯನ್ನು ಹೂಡಿ ಪರಿಹಾರವನ್ನಷ್ಟೇ ಕೇಳಬಹುದು. ಆದರೆ ಈ ಕಂಪನಿ ಉತ್ಪಾದನೆ ಮಾಡಿದ ವಿದ್ಯುತ್ತನ್ನು "ಅಣು ವಿದ್ಯುತ್ ನಿಗಮ" ಕೊಂಡುಕೊಳ್ಳುವುದರಿಂದ ಪರಿಹಾರವನ್ನು ನೀಡುವ ಪ್ರಧಾನ ಜವಾಬ್ದಾರಿ ಈ ಸರ್ಕಾರಿ ನಿಗಮದ್ದೇ ಹೊರತು ಅಮೆರಿಕದ ಖಾಸಗಿ ಕಂಪನಿಗಳದ್ದಲ್ಲ ಎಂದು ಈ ಕಾಯಿದೆ ರಕ್ಷಣೆಯನ್ನು ಒದಗಿಸುತ್ತದೆ. ಒಂದು ವೇಳೆ ಅವಘಡ ಸಂಭವಿಸಿದ್ದೇ ಆದರೆ ಅಮೆರಿಕನ್ ಕಂಪನಿಗಳು ಹೆಚ್ಚೆಂದರೆ 300 ಕೋಟಿ ರೂಗಳನ್ನೂ ಮತ್ತು ಸರ್ಕಾರಿ ಅಣು ವಿದ್ಯುತ್ ನಿಗಮ 2300 ಕೋಟಿ ರೂಗಳನ್ನೂ ಭರಿಸಬೇಕೆಂದೂ ಸಹ ಮಸೂದೆಯಲ್ಲಿ ಸೇರಿಸಲಾಗಿದೆ. ಅಂದರೆ ಲಾಭ ಅಮೆರಿಕದ ಕಂಪನಿಗಳಿಗೆ. ಆದರೆ ಅಪಾಯ ಮತ್ತು ಅದಕ್ಕೆ ಭರಿಸುವ ಹಣ ಎಲ್ಲಾ ಜನರದ್ದೇ!

ಅಮೆರಿಕದ ಅಣು ಉದ್ಯಮಿಗಳಿಗೆ ಇಂಥಾ ಶಾಸನಾತ್ಮಕ ರಕ್ಷಣೆ ಜಗತ್ತಿನಲ್ಲಿ ಬೇರೆಲ್ಲೆಡೆಯೂ ಸಿಕ್ಕಿಲ್ಲ. ಆದ್ದರಿಂದಲೇ ಭಾರತ ಸರ್ಕಾರವನ್ನು ಅಮೆರಿಕದ ತನ್ನ ಅತ್ಯುತ್ತಮ ಸ್ನೇಹಿತನೆಂದೇ ಹೊಗಳಾಡುತ್ತಿದೆ. ಆದ್ದರಿಂದಲೇ ಭಾರತ ಸರ್ಕಾರವೇ ಭಾರತೀಯರ ಪ್ರಪ್ರಥಮ ಶತ್ರುವೂ ಆಗಿದೆ. ●

ಮೂತ್ರದಲ್ಲೂ ಮೀನು ಹಿಡಿಯುವವರು ನೆರೆ ಸಂತ್ರಸ್ತರಿಗೆ ಕಣ್ಣೀರು ಸುರಿಸುತ್ತಾರೆಂದರೇ!

ನೆರೆ ಬಂದಾಗ ಮೊಸಳೆ ಕಣ್ಣೀರು ಸುರಿಸಿ ಸಂತ್ರಸ್ತರಿಗೆ ಲಕ್ಷಾಂತರ ಮನೆ ಕಟ್ಟಿಕೊಡುವ ಭರವಸೆಯ ಪ್ರವಾಹವನ್ನೇ ಸುರಿಸಿದ ಇನ್ಫೋಸಿಸ್ ಇನ್ನಿತ್ಯಾದಿ ಖಾಸಗಿ ಕಂಪನಿಗಳ ಅಸಲಿ ಬಣ್ಣ ಈಗ ಬಯಲಾಗುತ್ತಿದೆ. ವಸತಿ ಇಲಾಖೆ ಕಾರ್ಯದರ್ಶಿ ಕೊಂಗವಾಡರ ಪ್ರಕಾರ ಮನೆ ಕಳೆದುಕೊಂಡ ಸಂತ್ರಸ್ತರಿಗೆ 76,399 ಮನೆಗಳನ್ನು ಕಟ್ಟಿಕೊಡಲು 53 ಸಂಸ್ಥೆಗಳು ಭರವಸೆ ನೀಡಿದ್ದವು. ಆದರೆ ನಾಲ್ಕು ತಿಂಗಳು ಕಳೆದರೂ 10 ಸಂಸ್ಥೆಗಳನ್ನು ಬಿಟ್ಟರೆ ಬೇರೆ ಯಾರೂ ಕಾರ್ಯ ಆರಂಭಿಸಿಲ್ಲ. ಅವರನ್ನು ಯಾಕೆ ಮನೆ ಕಟ್ಟಿಕೊಟ್ಟಿಲ್ಲ ಎಂದು ಕೇಳಲೂ ಆಗುವುದಿಲ್ಲ. ಏಕೆಂದರೆ ಅವರು ಉದಾರತೆ ತೋರಿ ಮನೆ ಕಟ್ಟಿಕೊಡಿಸುತ್ತೇವೆ ಎಂದು ಹೇಳಿರುವುದೇ ಹೆಚ್ಚು. ಹೀಗಾಗಿ ಮನವಿಯಷ್ಟೇ ಮಾಡಬಹುದು ಎಂದು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಒಂದು ಪ್ರಜಾಪ್ರಭುತ್ವದಲ್ಲಿ ಇಂಥಾ ಔದಾರ್ಯದ ಉರುಳಿನ ಅಗತ್ಯವಿರಲಿಲ್ಲ. ನೆರೆ ಸಂತ್ರಸ್ತರಿಗೆ ಪರಿಹಾರ ಒಂದು ಹಕ್ಕು ಆಗಬೇಕೇ ವಿನಃ ಹಂಗಿನ ಸಂಗತಿಯಾಗಬಾರದು. "ಖಾಸಗಿ" ಕಂಪನಿಗಳ ಔದಾರ್ಯವನ್ನೇ ನೆಚ್ಚಿಕೊಂಡು ಸರ್ಕಾರ ಮಾಡಿರುವ ಆಸರೆ ಜನರನ್ನು ದೀನರನ್ನಾಗಿಸಬಾರದು. ಆಸರೆಗಾಗಿ ಭಿಕ್ಷುಕರ ಮಟ್ಟಕ್ಕೆ ಇಳಿಸಬಾರದು. ಇಷ್ಟಾಗಿ ಈ ಖಾಸಗಿ ಕಂಪನಿಗಳು ನೆರೆ ಸಂತ್ರಸ್ತರಿಗಾಗಿ ವೆಚ್ಚ ಮಾಡುತ್ತಿರುವುದು ತಾವು ಪಡೆಯುತ್ತಿರುವ ಲಾಭದ ಶೇ. 0.5-3 ಪಾಲಿಗಿಂತಲೂ ಕಡಿಮೆ. ಉದಾಹರಣೆಗೆ ಕಳೆದ ಮೂರು ತಿಂಗಳಲ್ಲಿ 3000 ಕೋಟಿ ರೂ. ಲಾಭ ಮಾಡಿದ ಇನ್ಫೋಸಿಸ್ ಕಂಪನಿ ಮನೆಕಟ್ಟಿಸಿಕೊಡಲು ಕೊಡುತ್ತಿರುವುದು 30 ಕೋಟಿ ರೂ. ಮಾತ್ರ. ಆದರೆ ಈ ಕಂಪನಿಗೆ 3,000 ಕೋಟಿ ಲಾಭ ಮಾಡಲು ಸಾಧ್ಯವಾದದ್ದೇ ಈ ನಾಡಿನ ನೆಲ, ಜಲ, ವಿದ್ಯುತ್ತನ್ನು ಪುಕ್ಕಟೆಯಾಗಿಯೂ ಹಾಗೂ ಸಾವಿರಾರು ಕೋಟಿ ತೆರಿಗೆ ರಿಯಾಯತಿಯನ್ನೂ ಸರ್ಕಾರ ಕೊಟ್ಟಿದ್ದಕ್ಕೇ ಅಲ್ಲವೇ? ಈಗಲಾದರೂ 53 ಕಂಪನಿಗಳು ಮನೆಕಟ್ಟಿಕೊಡುವ ಭರವಸೆ ನೀಡಿದ್ದು ಇಂತಹದ್ದೇ ಇತರ ರಿಯಾಯತಿಗಳನ್ನು ತಮ್ಮ ಮುಂದಿನ ಪ್ರಾಜೆಕ್ಟುಗಳಿಗೆ ಪಡೆದುಕೊಳ್ಳಲು.

ಹೀಗಾಗಿ ನಿಜವಾದ ಭಿಕ್ಷುಕರನ್ನು ಸರ್ಕಾರ ದೊರೆಗಳಂತೆ ನಡೆಸಿಕೊಳ್ಳುತ್ತದೆ. ಈ ನಾಡಿನ ನಿಜವಾದ ದೊರೆಗಳನ್ನು ಭಿಕಾರಿಗಳ ಮಟ್ಟಕ್ಕೆ ಇಳಿಸಿಬಿಟ್ಟಿದೆ. ಈ ದೇಶದಲ್ಲಿ ಪ್ರಜಾಪ್ರಭುತ್ವ ಮೊದಲಿಂದ ನಿಂತಿರುವುದೇ ತಲೆಕೆಳಗಾಗಿ! ●

ನೋ ಕಾಮೆಂಟ್ಸ್

"ನನ್ನ ಸಾಹಿತ್ಯಿಕ ಅಭಿವ್ಯಕ್ತಿಗೆ ನಾನು ಜಾನಪದ ಕಥಾ ಮಾದರಿಯನ್ನು ಉದ್ದೇಶಪೂರ್ವಕವಾಗಿ ಆಯ್ದು ಕೊಂಡೆ. ಅದು ನೀತಿಬೋಧೆಯ ರೂಪದಲ್ಲಿ ಇರುತ್ತದೆ ಎಂಬುದು ನಿಜವಾದರೂ ಅದೇ ಸಮಯದಲ್ಲಿ ರೂಢಿಗತ ಮೌಲ್ಯಗಳನ್ನೂ ಜನರದ್ದೇ ಆದ ಭಾಷೆಯಲ್ಲಿ ಪ್ರಶ್ನಿಸುತ್ತದೆ."

-ಸುನೀತಿ ನಾಮಜೋಶಿ, ವಿವಾದಕ್ಕೊಳಗಾಗಿಯವ ಮಕ್ಕಳ ಲೇಖಕಿ

"ಶಿವಸೇನಾ ಈಗ ಶಕ್ತಿ ಕಳೆದುಕೊಂಡಿದೆ. ಆದರೆ ತಾನಿನ್ನೂ ಪ್ರಬಲವಾಗಿಯೇ ಇದ್ದೇನೆ ಎಂದು ತೋರಿಸಿಕೊಳ್ಳಲು ಅದು ಕಾಲಕಾಲಕ್ಕೆ ಹೈಪ್ರೊಫೈಲ್ ಸ್ಟಂಟ್‌ಗಳನ್ನು ಮಾಡುತ್ತಿರುತ್ತದೆ. ಅದು 'ಸಾಮ್ನಾ'ದಲ್ಲಿ ಠಾಕ್ರೆಯ ಸಹಿ ಇರುವ ಸಂಪಾದಕೀಯದಲ್ಲಿ ತಾನು ಮೊದಲು ಭಾರತೀಯ ಎಂದು ಕರೆದುಕೊಂಡ ಸಚಿನ್ ತೆಂಡೂಲ್ಕರ್‌ನನ್ನು ಬೈದು ಬರೆದ ಮಾತ್ರಕ್ಕೆ ತೆಂಡೂಲ್ಕರ್‌ನನ್ನು ಕ್ರಿಕೆಟ್ ಆಡದಂತೆ ತಡೆಗಟ್ಟಲು ಸಾಧ್ಯವಿಲ್ಲ. ಮುಖೇಶ್ ಅಂಬಾನಿ ಮುಂಬೈನಲ್ಲಿ ಟ್ಯಾಕ್ಸಿ ಡ್ರೈವರ್‌ಗಳು ಉತ್ತರಪ್ರದೇಶದವರಾಗಿದ್ದರೆ ತಪ್ಪೇನು ಎಂದು ಕೇಳಿದ್ದಕ್ಕೆ, ರಿಲಯನ್ಸ್ ಕಚೇರಿಯ ಮೇಲೇನೂ ದಾಳಿ ನಡೆಸುವುದಿಲ್ಲ. ಅಥವಾ ಅಂಬಾನಿಯಿಂದ ತಮ್ಮ ಪಕ್ಷಕ್ಕೆ ಹಣ ಪಡೆದುಕೊಳ್ಳುವುದನ್ನೂ ನಿಲ್ಲಿಸುವುದಿಲ್ಲ. ಅವರು ಉದ್ದೇಶಪೂರ್ವಕವಾಗಿಯೇ 'ಸಾಮ್ನಾ'ದಲ್ಲಿ ಖ್ಯಾತನಾಮರ ಬಗ್ಗೆ ಬೇಕಾಬಟ್ಟೆಯಾಗಿ ಬರೆಯುತ್ತಾರೆ. ಏಕೆಂದರೆ ಅದರಲ್ಲಿ ಬರೆದ ಎಲ್ಲದರ ಬಗ್ಗೆಯೂ ಮೈನ್‌ಸ್ಟ್ರೀಮ್ ಮೀಡಿಯಾ ದೊಡ್ಡ ಪ್ರಚಾರ ಕೊಡುತ್ತಾರೆ ಎಂದು ಗೊತ್ತಿದೆ. ಈ ಪ್ರಚಾರಗಳು ಶಿವಸೇನಾ ಇನ್ನು ಪ್ರಬಲವಾಗಿದೆ ಎಂಬ ಭ್ರಮೆಯನ್ನು ಜನರಲ್ಲಿ ಬಿತ್ತುತ್ತದೆ. ಮಾಧ್ಯಮಗಳು ಪ್ರಚಾರದ ಆಕ್ಸಿಜನ್ ಕೊಡುವುದನ್ನು ನಿಲ್ಲಿಸಿದರೆ ಶಿವಸೇನೆಯ ನಿಜಬಣ್ಣ ತಾನಾಗಿಯೇ ಬಯಲಾಗುತ್ತದೆ."

-ವೀರ್ ಸಾಂಘ್ವಿ, ಅಂಕಣಕಾರ

"ಯೂರೋಪಿನಲ್ಲಿ ಪ್ರತಿ ಹಸುವಿಗೆ ದಿನಕ್ಕೆ 2 ಡಾಲರ್ ಸಬ್ಸಿಡಿ ನೀಡಲಾಗುತ್ತದೆ. ಆದರೆ ಜಾಗತೀಕರಣ ನೀತಿ ಅನುಸರಿಸಲು ಶುರುಮಾಡಿದ ನಂತರದಲ್ಲಿ ಭಾರತದಂತ ಕೃಷಿ ಪ್ರಧಾನ ದೇಶಗಳಲ್ಲಿ ರೈತರ ಪ್ರತಿದಿನದ ಆದಾಯ ದಿನಕ್ಕೆ 2 ಡಾಲರ್‌ಗಳಿಗಿಂತಲೂ ಕಡಿಮೆಯಾಗಿದೆ. ಹೀಗಾಗಿ ಇಂದು ಬಡದೇಶಗಳಲ್ಲಿ ರೈತರಾಗಿ ಹುಟ್ಟುವುದಕ್ಕಿಂತ ಶ್ರೀಮಂತ ದೇಶಗಳಲ್ಲಿ ದನವಾಗಿ ಹುಟ್ಟುವುದೇ ಲೇಸು ಎಂಬಂತಾಗಿದೆ."

-ಜೋಸೆಫ್ ಸ್ಟಿಗ್ಲಿಟ್ಜ್, ವಿಶ್ವಬ್ಯಾಂಕಿನ ಮಾಜಿ ಅಧ್ಯಕ್ಷ.

"ಭಾರತದ ಸಂವಿಧಾನದಲ್ಲಿ ಗೋರಕ್ಷಣೆಯ ಬಗ್ಗೆ ನಿರ್ದೇಶನವಿರುವುದು ನಿಜ. ಆದರೆ ಅದರ ಅರ್ಥ ಸಂಪೂರ್ಣ ಗೋಹತ್ಯೆ ನಿಷೇಧವಲ್ಲ. ಸಂಪೂರ್ಣ ಗೋಹತ್ಯೆ ನಿಷೇಧದ ಪ್ರಶ್ನೆ ಹಲವಾರು ಬಾರಿ ಭಾರತದ ಸುಪ್ರೀಂ ಕೋರ್ಟ್ ಎದುರು ಬಂದಿರುವುದು ನಿಜವಾದರೂ, 'ಸಂಪೂರ್ಣ ಗೋಹತ್ಯಾ ನಿಷೇಧ' ಇತರರ 'Right to Livelihood' (ಜೀವನಾಧಾರದ ಹಕ್ಕನ್ನೇ) ಉಲ್ಲಂಘಿಸುತ್ತದೆಯಾದ್ದರಿಂದ ಅಂಥ ನಿಷೇಧ ಸಾಧ್ಯವಿಲ್ಲವೆಂಬುದೇ ಸುಪ್ರೀಂ ಕೋರ್ಟಿನ ಅಭಿಪ್ರಾಯವಾಗಿದೆ."

- ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್, ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶ (2009ರ ಏಪ್ರಿಲ್‌ನಲ್ಲಿ ವಿಯೆನ್ನಾದಲ್ಲಿ ನಡೆದ ಸಮ್ಮೇಳನದಲ್ಲಿ ಮಾಡಿದ ಭಾಷಣದಲ್ಲಿ)

ನಂಬಿದ್ರೆನಂಬಿ ಬಿಟ್ರೆಬಿಡಿ

"ಈ ವರ್ಷ ನಾನು ಯಾವ ಹೊಸ ಆಸ್ತಿಯನ್ನೂ ಖರೀದಿಸಿಲ್ಲ. ಆದರೆ ಸಂಸತ್ತಿನ ಜಂಟಿ ಅಧಿವೇಶನ ಆರಂಭಗೊಳ್ಳುವ ಮುನ್ನ ನಿಯಮಗಳ ಪ್ರಕಾರ ಲೋಕಸಭಾಧ್ಯಕ್ಷರಿಗೆ ಆಸ್ತಿ ವಿವರ ಸಲ್ಲಿಸುವೆ."

-ದೇವೇಗೌಡ

"ಮನೆ ಕಳೆದುಕೊಂಡ ಸಂತ್ರಸ್ತರಿಗೆ 76,399 ಮನೆಗಳನ್ನು ಕಟ್ಟಿಕೊಡಲು 53 ಸಂಸ್ಥೆಗಳು ಭರವಸೆ ನೀಡಿದ್ದವು. ಆದರೆ ನಾಲ್ಕು ತಿಂಗಳು ಕಳೆದರೂ 10 ಸಂಸ್ಥೆಗಳನ್ನು ಬಿಟ್ಟರೆ ಬೇರೆ ಯಾರೂ ಕಾರ್ಯ ಆರಂಭಿಸಿಲ್ಲ."

-ಜೆ.ವಿ.ಕೊಂಗವಾಡ, ವಸತಿ ಇಲಾಖೆ ಕಾರ್ಯದರ್ಶಿ

..ಮತ್ತು ಕುರಾನ್ ಎಂಬ ಪದವೇ ಕುರುಕ್ಷೇತ್ರ ಎಂಬ ಪದದಿಂದ ಹುಟ್ಟಿದೆ ಅಂದುಬಿಡಿ!

"ಖಾನ್ ಎಂಬ ಪದವು ಸಂಸ್ಕೃತದ "ಸ್ವಾಮಿನ್" ಎಂಬ ಪದದಿಂದ ಪ್ರಭಾವಿತವಾಗಿದೆ. ಸೈಯದ್ ಎಂಬ ಪದ ಸಂಸ್ಕೃತದ "ಶ್ರೇಷ್ಠ" ಎಂಬ ಪದದ ಜಾತಿ. ಅಫ್ರಿದಿ ಎಂಬ ಪದ ಸಂಸ್ಕೃತದ "ಅಪರಾಂತಕ" ಎಂಬ ಶಬ್ದ ಮೂಲದ್ದು!"

- 'ವಿಜಯ ಕರ್ನಾಟಕ'ದಲ್ಲಿ ಪ್ರಕಟವಾಗುವ 'ಪದೋನ್ನತಿ' ಎಂಬ ಅಂಕಣದಲ್ಲಿ

ರ್ವ ಜನಪರ ನ್ಯಾಯಾಧೀಶರನ್ನು ಕುರಿತು

ಮ್ಮ ಸುತ್ತಲೂ ಈಗ ಎಲ್ಲವೂ ಗಬ್ಬೆದ್ದು ರುವಾಗ, ಓರ್ವ ಪ್ರಾಮಾಣಿಕ ಮತ್ತು ಜನಪರ ಧೀಶರ ಮನಮುಟ್ಟುವ ಕತೆ ಹೇಳಿದರೆ, ಈ ಭವಿಷ್ಯದ ಬಗ್ಗೆ ನಮ್ಮಲ್ಲಿ ಇನ್ನೂ ಉಳಿದಿರುವ ರಣಗಳು ಜೀವಂತವಾಗಿರಲು ನೆರವಾಗುತ್ತದೆ ತ್ತಿದೆ. ಮೊನ್ನೆ ಈ ನ್ಯಾಯಾಧೀಶರನ್ನು ಕುರಿತು 'ದಿ ' ಪತ್ರಿಕೆಯಲ್ಲಿ ಒಂದು ಲೇಖನ ಪ್ರಕಟಗೊಂಡಿತ್ತು, ಓದಿ ಕುತೂಹಲಗೊಂಡ ನಾನು ಅವರ ಬಗ್ಗೆ ಮಾಹಿತಿಯನ್ನು ಕಲೆಹಾಕಿ ಅದನ್ನೆಲ್ಲ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ವರ ಹೆಸರು ಜಸ್ಟೀಸ್ ಅಜಿತ್ ಪ್ರಕಾಶ್ ತ್ತೀಚಿನ ತನಕ ದೆಹಲಿ ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಷಾ ಅವರು ಮೊನ್ನೆ ಹೊಂದಿದಾಗ ಅವರಿಗೆ ವಿದಾಯ ಲು, ಧನ್ಯವಾದಗಳನ್ನು ಹೇಳಲು ಾಯದಂತೆ ಬರೀ ಕೋರ್ಟಿನ ನ್ಯಾಯಾಧೀಶರು ಮತ್ತು ು ಹಾಜರಾಗಿರಲಿಲ್ಲ. ಗಿ ಅದೆಷ್ಟೋ ಮಾನ್ಯರು, ನೂರಾರು ರರು, ಜನಪರ ಾಟಗಾರರೂ ಹಾಜರಾಗಿದ್ದು ನ್ನು ಬೀಳ್ಕೊಟ್ಟರು.

ಮ್ಮ ದೇಶದಲ್ಲಿ ನೂರಾರು ಧೀಶರಿರುವಾಗ ಇವರು ಇಷ್ಟು ಸ್ಪೆಷಲ್ ಆಗಿದ್ದು ಹೇಗೆ ಪ್ರಶ್ನೆಗೆ ಜಸ್ಟೀಸ್ ಷಾ ಅವರು ಬಹಳಷ್ಟು ತೀರ್ಪುಗಳೇ ಎನ್ನಬಹುದು.

ಸ್ಟೀಸ್ ಷಾ ಅವರು ನೀಡಿರುವ ತೀರ್ಪುಗಳನ್ನೇ ನೋಡಿ. ಗೆ ದೇಶದ ರಾಜಧಾನಿ ು ಸೌಂದರ್ಯಕ್ಕೆ ಅಲ್ಲಿನ ಭಿಕ್ಷುಕರು ಕೈಯಂತಿದ್ದಾರೆ ಎಂದು ದೆಹಲಿ ಸರ್ಕಾರ ರನ್ನು ಹಿಡಿದು ಅವರವರ ಮೂಲ ಿಗೆ ವಾಪಸ್ಸು ಕಳುಹಿಸಬೇಕೆಂದು ಿಸಿತು. ಈ ನಿರ್ಧಾರವನ್ನು ಕುರಿತ ಳು ಪತ್ರಿಕೆಗಳಲ್ಲೂ ಪ್ರಕಟಗೊಂಡವು. ದೆಹಲಿ ಸರ್ಕಾರದ ಈ ಕ್ರಮ ವಿರೋಧಿಯೆಂದು ಕೆಲವರು ಕೋರ್ಟಿನ ೇರಿದರು. ಆ ದೂರಿನ ವಿಚಾರಣೆ ನಡೆಸಿದ ಷಾ ಅವರು ದೆಹಲಿ ಸರ್ಕಾರದ ವಿರುದ್ಧ ್ಟರು. ಅಷ್ಟೇ ಅಲ್ಲ, ಆ ತೀರ್ಪಿನಲ್ಲಿ "ಭಿಕ್ಷೆ ುದು ಅಪರಾಧವಲ್ಲ, ಭಿಕ್ಷುಕರು ಗಳಲ್ಲ. ಅಪರಾಧಿಗಳು ನಗರದಲ್ಲಿ ಾಗಿ ನೆಲೆಸಬಹುದಾದರೆ ಅಪರಾಧಿಗಳಲ್ಲದ ಭಿಕ್ಷುಕರನ್ನೇಕೆ ನಗರದಿಂದ ಬ್ಬಬೇಕು? ಭಿಕ್ಷುಕರನ್ನು ಬಲವಂತವಾಗಿ ಬ್ಬುವುದು ಮಾನವೀಯತೆ ವಿರೋಧಿ " ಎಂದು ಹೇಳಿದರು.

ಷ್ಟೇ ಅಲ್ಲ, ಕಳೆದ ತಿಂಗಳಲ್ಲಿ ಇಡೀ ಉತ್ತರ ಾದ್ಯಂತ ಮೈಕೊರೆಯುವ ಚಳಿಯಿಂದ ತತ್ತರಿಸಿ ಜನರು ಸತ್ತುಹೋದರು. ದೆಹಲಿಯಲ್ಲಂತೂ ಉಷ್ಣಾಂಶವು ನಾಲ್ಕು ಡಿಗ್ರಿ ಸೆಲ್ಸಿಯಸ್‌ಗೆ ಕುಸಿಯಿತು. ಅಂತಹ ಪರಿಸ್ಥಿತಿ ಇರುವಾಗಲೂ ದೆಹಲಿ ಸರ್ಕಾರ ಪುಶಾ ರಸ್ತೆಯಲ್ಲಿರುವ ಬಡಜನರ ಗುಡಿಸಲುಗಳನ್ನು ಧ್ವಂಸ ಮಾಡಿ ಅವರನ್ನು ಬೀದಿಪಾಲು ಮಾಡಿತು. ಕಾರಣ ಇಷ್ಟೇ: ಇನ್ನು ಹತ್ತು ತಿಂಗಳುಗಳಲ್ಲಿ ದೆಹಲಿಯಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟಗಳು ನಡೆಯಲಿವೆ. ಈ ಕ್ರೀಡಾಕೂಟಕ್ಕೆ ದೇಶವಿದೇಶಗಳಿಂದ ಬರುವ ಜನ ನಮ್ಮ ಬಡವರ ಗುಡಿಸಲುಗಳನ್ನು ನೋಡಿದರೆ 'ಮಹಾನ್' ಭಾರತಕ್ಕೆ ಅವಮಾನವಾಗುತ್ತದೆ. ಹಾಗಾಗಿ ಜೆಸಿಬಿ ಯಂತ್ರಗಳನ್ನು ಕಳುಹಿಸಿ ಆ ಗುಡಿಸಲುಗಳನ್ನು ನೆಲಸಮ ಮಾಡಿ ದೆಹಲಿಯ 'ಅಂದ'ವನ್ನು ಹೆಚ್ಚಿಸಿದರು. ಬಡತನ ನಿರ್ಮೂಲನೆ ಬಗ್ಗೆ ಇದು ಅಲ್ಲಿನ ಸರ್ಕಾರದ ಸೂತ್ರ.

ಹೀಗೆ ಬಡರನ್ನು ಗುಡಿಸಲುಗಳನ್ನು ಧ್ವಂಸ ಮಾಡಿ ಅವರನ್ನೆಲ್ಲ ಚಳಿಗಾಲದಲ್ಲಿ ಬೀದಿ ಪಾಲು ಮಾಡಿದ್ದರ ಕುರಿತೂ ಪತ್ರಿಕೆಗಳು ವರದಿ ಮಾಡಿದವು. ಅದನ್ನು ನೋಡಿದ್ದೇ ತಡ ಜಸ್ಟೀಸ್ ಷಾ ಅವರು ಯಾವ ಅರ್ಜಿಗಾಗಿಯೂ ಕಾಯದೇ "ಯಾರ್‍ಯಾರ ಗುಡಿಸಲುಗಳನ್ನು ನೆಲಸಮ ಮಾಡಲಾಗಿದೆಯೋ ಅವರೆಲ್ಲರಿಗೂ ಕೂಡಲೇ ಮನೆಕಟ್ಟಿಸಿಕೊಡಬೇಕು" ಎಂದು ದೆಹಲಿ ಮುನಿಸಿಪಲ್ ಕಾರ್ಪೋರೇಷನ್‌ಗೆ ಆದೇಶ ಕೊಟ್ಟರು.



ತಮ್ಮ ವೃತ್ತಿಜೀವನದ ಉದ್ದಕ್ಕೂ ಜಸ್ಟೀಸ್ ಷಾ ಅವರು ಸಾರ್ವಜನಿಕ ಹಿತಾಸಕ್ತಿ ಮತ್ತು ಬಂಡವಾಳಶಾಹಿ ಹಿತಾಸಕ್ತಿಗಳ ನಡುವೆ, ಸಾರ್ವಜನಿಕ ಹಿತಾಸಕ್ತಿ ಮತ್ತು ಪ್ರಭುತ್ವ ಹಿತಾಸಕ್ತಿಗಳ ನಡುವೆ ನಿಸ್ಸಂದೇಹವಾಗಿ ಸಾರ್ವಜನಿಕ ಹಿತಾಸಕ್ತಿಯ ಪರವಾಗಿಯೇ ನಿಂತರು. ಕಳೆದ ವರ್ಷದ ಕೊನೆಯ ಭಾಗದಲ್ಲಿ ಅಪೋಲೋ ಆಸ್ಪತ್ರೆ ಮತ್ತು ಸರ್ಕಾರೇತರ ಸಂಘಟನೆಯ ನಡುವೆ ಹನ್ನೆರಡು ವರ್ಷಗಳಿಂದ ನಡೆಯುತ್ತಿದ್ದ ವ್ಯಾಜ್ಯದ ವಿಚಾರಣೆ ನಡೆಸಿದ ಜಸ್ಟಿಸ್ ಷಾ ಅವರು ಬಹಳ ಮಹತ್ವಪೂರ್ಣ ತೀರ್ಪನ್ನಿತ್ತರು. "ಆರೋಗ್ಯ ಎಂಬುದು ಒಂದು ಮೂಲಭೂತ ಹಕ್ಕು. ಅದನ್ನು ಯಾರೂ ನಿರಾಕರಿಸುವಂತಿಲ್ಲ" ಎಂದು ಆದೇಶ ಕೊಟ್ಟರಲ್ಲದೇ, ಅಪೋಲೋ ಆಸ್ಪತ್ರೆಯ ಶೇ. 33ರಷ್ಟು ಹಾಸಿಗೆಗಳನ್ನು ಹಾಗೂ ಹೊರರೋಗಿ ಸೇವೆಯ ಶೇ. 44ರಷ್ಟು ಹಾಸಿಗೆಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ಒದಗಿಸಬೇಕೆಂದು ತಾಕೀತು ಮಾಡಿದರು.

ಅವರು ದೆಹಲಿಯ ಮುಖ್ಯ ನ್ಯಾಯಾಧೀಶರಾಗುವ ಮುನ್ನ ಮುಂಬೈ ಹೈಕೋರ್ಟಿನ ನ್ಯಾಯಾಧೀಶರಾಗಿದ್ದಾಗಲೂ ಮಹತ್ವದ ತೀರ್ಪುಗಳನ್ನು ನೀಡಿದ್ದರು. ಉದಾಹರಣೆಗೆ "ಯಾವುದೇ ರಾಜಕೀಯ ಪಕ್ಷ ಬಂದ್ ಕರೆನೀಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಏಕೆಂದರೆ ಅದು ಮುಂಬೈ ಜನತೆಯ ಮೂಲಭೂತ ಹಕ್ಕುಗಳಿಗೆ ಚ್ಯುತಿ ತರುತ್ತದೆ" ಎಂದಿದ್ದ ಅವರು ಬಲವಂತದ ಬಂದ್ ಆಚರಿಸುವ ಮೂಲಕ ಸಾರ್ವಜನಿಕರಿಗೆ ತೊಂದರೆ ಕೊಟ್ಟಿದ್ದಕ್ಕಾಗಿ ಬಿಜೆಪಿ ಮತ್ತು ಶಿವಸೇನೆಗೆ ಇಪ್ಪತ್ತು ಲಕ್ಷ ರೂಪಾಯಿಗಳ ದಂಡ ವಿಧಿಸಿದ್ದರು. ಜೊತೆಗೆ ಆ ಹಣ ಸಾರ್ವಜನಿಕ ಅಭಿವೃದ್ಧಿಗೆ ಬಳಕೆ ಆಗಬೇಕೆಂದು ಸರ್ಕಾರಕ್ಕೆ ತಾಕೀತು ಮಾಡಿದ್ದರು.

ಒಮ್ಮೆ ಪಂಜಾಬ್‌ನ ಭಯೋತ್ಪಾದನೆಯ ಕುರಿತ ಚಲನಚಿತ್ರವನ್ನು ಮತ್ತು ಅಯೋಧ್ಯ ವಿವಾದಕ್ಕೆ ಸಂಬಂಧಿಸಿದಂತೆ ಆನಂದ್ ಪಟವರ್ಧನ್‌ರ 'ರಾಮ್ ಕೆ ನಾಮ್' ಸಾಕ್ಷ್ಯಚಿತ್ರವನ್ನು ದೂರದರ್ಶನ ಪ್ರಸಾರ ಮಾಡದಂತೆ ಮಹಾರಾಷ್ಟ್ರ ಸರ್ಕಾರ ಷಡ್ಯಂತ್ರ ನಡೆಸಿತ್ತು. ಅದನ್ನು ತೀವ್ರವಾಗಿ ಖಂಡಿಸಿದ ಜಸ್ಟೀಸ್ ಷಾ ಅವರು ಮಹಾರಾಷ್ಟ್ರ ಸರ್ಕಾರದ ವಿರುದ್ಧ ತೀರ್ಪಿತ್ತು ಆ ಎರಡೂ ಚಿತ್ರಗಳ ಪ್ರದರ್ಶನಕ್ಕೆ ಅನುವು ಮಾಡಿಕೊಟ್ಟಿದ್ದರು.

ಅವರ ಇನ್ನೊಂದು ತೀರ್ಪು 30 ಅಮಾಯಕ ಪುಟ್ಟಪುಟ್ಟ ಮಕ್ಕಳಿಗೆ ಹೊಸ ಪ್ರಪಂಚವನ್ನು ತೋರಿಸಿತ್ತು. ಮುಂಬೈನ ಬೈಖಲಾ ಜೈಲಿನಲ್ಲಿ ಮೂವತ್ತು ಪುಟ್ಟ ಮಕ್ಕಳು ತಮ್ಮ ತಾಯಂದಿರೊಂದಿಗೆ ಇದ್ದರು. ಅವರಲ್ಲಿ ಬಹುತೇಕರು ಎಂದೂ ಜೈಲುಕೋಣೆಯ ಆಚೆಗಿನ ಪ್ರಪಂಚವನ್ನೇ ನೋಡಿರಲಿಲ್ಲ. ಈ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಜಸ್ಟೀಸ್ ಷಾ ಜೈಲು ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ನಿರ್ಮಿಸಲಾಗಿರುವ ಕ್ವಾಟ್ರಸ್ ಬಳಿಯೇ ಈ ಮಕ್ಕಳಿಗೂ ಓದುವುದಕ್ಕೆ ಅಂಗನವಾಡಿ ತೆರೆಯಬೇಕೆಂದೂ, ಜೈಲು ಆಡಳಿತ ವರ್ಗವೇ ಈ ಮಕ್ಕಳಿಗೆ ಆಟದ ಸಾಮಗ್ರಿಗಳನ್ನು, ಪೀಠೋಪಕರಣಗಳನ್ನು ಒದಗಿಸಬೇಕೆಂದೂ, ಮಕ್ಕಳಿಗೆ ಕಲಿಸುವುದಕ್ಕಾಗಿ ಬರುವ ಟೀಚರ್‌ಗಳಿಗೆ ಸಂಬಳವನ್ನು ಸರ್ಕಾರ ಭರಿಸಬೇಕೆಂದೂ ತೀರ್ಪಿತ್ತಿದ್ದರೆಂದರೆ ಅವರದ್ದು ಅದೆಂಥ ಸಂವೇದನಾಶೀಲ ಮನಸ್ಸಿರಬೇಕು ಯೋಚಿಸಿ.

ಜಸ್ಟೀಸ್ ಷಾ ಅವರು ಮದ್ರಾಸ್ ಹೈಕೋರ್ಟಿನಲ್ಲಿ ಎರಡು ವರ್ಷಗಳ ಕಾಲ ಮುಖ್ಯ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದಾಗಲೂ ಅವರು ಕೌಟುಂಬಿಕ ನ್ಯಾಯಾಲಯದಲ್ಲಿ ಮಕ್ಕಳ ಕೇಂದ್ರವನ್ನು, ಜಿಲ್ಲಾ ಕೇಂದ್ರಗಳಲ್ಲಿ ಸಂಧಾನ ಕೇಂದ್ರಗಳನ್ನು ಹಾಗೂ ನ್ಯಾಯಾಧೀಶರಿಗಾಗಿ ವಿಕೇಂದ್ರೀಕೃತ ತರಬೇತಿ ಶಿಬಿರಗಳನ್ನು ಸ್ಥಾಪಿಸುವ ಮೂಲಕ ನ್ಯಾಯಾಂಗ ವ್ಯವಸ್ಥೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಸುಧಾರಣಾ ಕ್ರಮಗಳಿಗೆ ಪ್ರಯತ್ನಿಸಿದ್ದರು.

ಕಳೆದ ಒಂದೂವರೆ-ಎರಡು ವರ್ಷಗಳಿಂದ ದೆಹಲಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದ ಅವರು ಸಮಯಕ್ಕೆ ಸರಿಯಾಗಿ ಬಡವರ, ತುಳಿತಕ್ಕೊಳಗಾದವರ ಹಾಗೂ ಸಾರ್ವಜನಿಕರ ಪರವಾಗಿ ತೀರ್ಪುಗಳನ್ನು ನೀಡುತ್ತಾ ಜನಪ್ರಿಯರಾದರು.



ಕಂಡಹಾಗೆ


ಗೌರಿ ಲಂಕೇಶ್

ಅವರು ನೀಡಿದ ತೀರ್ಪುಗಳಲ್ಲಿ ಅತ್ಯಂತ ಮುಖ್ಯವಾದದ್ದು, ಸಾರ್ವಜನಿಕ-ಮಾಧ್ಯಮ ಚರ್ಚೆಗೆ ಗ್ರಾಸವಾಗಿದ್ದು ಭಾರತೀಯ ದಂಡಸಂಹಿತೆಯ (ಐಪಿಸಿ) ಸೆಕ್ಷನ್ 377 ಪ್ರಕಾರ ಸಲಿಂಗಕಾಮ ಅಪರಾಧವಲ್ಲ ಎಂಬ ಚಾರಿತ್ರಿಕ ತೀರ್ಪು. ನೂರೈವತ್ತು ವರ್ಷಗಳಿಂದ ಭಾರತದಲ್ಲಿ ಸಲಿಂಗಕಾಮದ ಮೇಲೆ ಹೇರಿರುವ ನಿರ್ಬಂಧ ವಾಸ್ತವದಲ್ಲಿ ತಾರತಮ್ಯದಿಂದ ಕೂಡಿದ್ದರಿಂದ ಅದು ಪ್ರಜೆಗಳ ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ ಎಂದು ತೀರ್ಪಿನಲ್ಲಿ ಹೇಳಿದ್ದರು. ಹೀಗೆ ಈ ಚಾರಿತ್ರಿಕ ತೀರ್ಪಿನ ಮೂಲಕ ಜಸ್ಟೀಸ್ ಷಾ ಅವರು ಲೈಂಗಿಕ ವಿಚಾರವು ವ್ಯಕ್ತಿಯೊಬ್ಬನ/ಳ ವೈಯಕ್ತಿಕ ಆಯ್ಕೆಗೆ ಸಂಬಂಧಪಟ್ಟ ವಿಚಾರ ಎಂಬ ಮೂಲಭೂತ ವ್ಯಕ್ತಿಸ್ವಾತಂತ್ರ್ಯವನ್ನು, ಪ್ರಜಾತಾಂತ್ರಿಕ ನಿಲುವನ್ನು ಎತ್ತಿಹಿಡಿದಿದ್ದರು.

ಜಸ್ಟೀಸ್ ಷಾ ಅವರ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಲೇಬೇಕು. ಇಷ್ಟೊಂದು ಜನಪರವಾಗಿದ್ದ, ಪ್ರಗತಿಪರವಾಗಿದ್ದ, ನ್ಯಾಯಾಧೀಶರಾಗಿ ನಿಜಕ್ಕೂ ನ್ಯಾಯ ಒದಗಿಸುತ್ತಿದ್ದ ಜಸ್ಟೀಸ್ ಷಾ ಅವರಿಗೆ ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗುವುದಕ್ಕೆ ಎಲ್ಲಾ ಅರ್ಹತೆಗಳಿದ್ದರೂ ಅವರನ್ನು ಆ ಸ್ಥಾನಕ್ಕೆ ಯಾರೂ ಪರಿಗಣಿಸಲೇ ಇಲ್ಲ. ಆದರೆ ಬಗ್ಗೆ ಜಸ್ಟೀಸ್ ಷಾ ಹೀಗೆ ಹೇಳಿದ್ದಾರೆ: "ನನಗೆ ಆಗಿರುವ ನೋವನ್ನು ಬಚ್ಚಿಟ್ಟು ನನಗೆ ನೋವೇ ಆಗಿಲ್ಲ ಎಂದು ನಾನು ನಾಟಕ ಮಾಡುವುದಿಲ್ಲ. ನೋವು ಆಗಿದ್ದು ನಿಜ. ಆದರೆ ಆ ನೋವು ನ್ಯಾಯಕ್ಕಾಗಿನ ನನ್ನ ಬದ್ಧತೆಯನ್ನು ಎಂದೂ ಕಡಿಮೆ ಮಾಡಲಿಲ್ಲ. ಈಗ ನನ್ನ ಮಟ್ಟಿಗದು ಮುಗಿದ ಅಧ್ಯಾಯ. ನಮ್ಮ ದೇಶದಲ್ಲಿ ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯೇ ದೋಷಪೂರಿತವಾಗಿದೆ. ಅಮೆರಿಕ, ಬ್ರಿಟನ್‌ಗಳಂಥ ಮುಂದುವರಿದ ದೇಶಗಳಲ್ಲಿ ನ್ಯಾಯಾಧೀಶರ ನೇಮಕ ಬಹಳ ಮುಕ್ತವಾಗಿ, ಪಾರದರ್ಶಕವಾಗಿ ನಡೆಯುತ್ತದೆ. ಆದರೆ, ನಮ್ಮಲ್ಲಿ ಅದು ಮುಚ್ಚಿದ ಕೋಣೆಯೊಳಗೆ ನಡೆಯುತ್ತದೆ. ಇದು ಬದಲಾಗಬೇಕು."

ತಮ್ಮ ವೃತ್ತಿಜೀವನದುದ್ದಕ್ಕೂ ನಿಸ್ಸಂದೇಹವಾಗಿ ನ್ಯಾಯವನ್ನೇ ನೀಡಿದ ನ್ಯಾಯಾಧೀಶರಿಗೆ ಈ ರೀತಿ ಅನ್ಯಾಯವಾಗಿದ್ದು ದುರಂತ ಅಲ್ಲವೇ? ●

ೊಸ ಸ್ತಕಗಳ ಂಖ್ಯೆಯೇ ತ್ತು!



ಕಳೆದ ಮೂರ್‍ನಾಲ್ಕು ವಾರಗಳಿಂದ ಹೊಸ ಪುಸ್ತಕಗಳ ಕೆಲಸದಲ್ಲೇ ಮುಳುಗಿಹೋಗಿರುವ ನನಗೆ ಈಗ ಜಗತ್ತಿನಲ್ಲಿ ಏನಾಗುತ್ತಿದೆ ಎಂದು ತಲೆ ಎತ್ತಿ ನೋಡಲಿಕ್ಕಾಗಲಿ, ಯೋಚಿಸುವುದಕ್ಕಾಗಲಿ ಪುರುಸೊತ್ತೇ ಇಲ್ಲದಂತಾಗಿದೆ. ಬರುವ ಮಾರ್ಚ್ 6 ರ ಹೊತ್ತಿಗೆ ಬರೋಬ್ಬರಿ 14 ಪುಸ್ತಕಗಳು ಸಿದ್ಧಗೊಳ್ಳಬೇಕಿದೆ. ಅವುಗಳಲ್ಲಿ ಹೊಸ ಪುಸ್ತಕಗಳ ಸಂಖ್ಯೆಯೇ ಹತ್ತು!

ಇನ್ನುಳಿದ ನಾಲ್ಕು ಮರು ಮುದ್ರಣಗೊಳ್ಳುತ್ತಿರುವ ಅಪ್ಪನ ಕಿರು ನಾಟಕಗಳು. ಆದರೆ ವಿಶೇಷ ಏನೆಂದರೆ ಅವುಗಳಲ್ಲಿ ಅಪ್ಪನ 'ಬಿರುಕು' ನಾಟಕವೂ ಒಂದು. 1973 ರಲ್ಲಿ ಪ್ರಕಟಗೊಂಡಿದ್ದ ಈ ನಾಟಕ ಮತ್ತೆ ಮುದ್ರಣಗೊಂಡಿರಲಿಲ್ಲ. ಮಾತ್ರವಲ್ಲ ಅದರ ಪ್ರತಿಯೂ ನಮ್ಮ ಹತ್ತಿರ ಇರಲಿಲ್ಲ. ಕಷ್ಟಪಟ್ಟು ಪ್ರತಿಯೊಂದನ್ನು ಹುಡುಕಾಡಿ ಈಗ 27 ವರ್ಷಗಳ ನಂತರ ಮತ್ತೆ ಪ್ರಿಂಟ್ ಮಾಡಿಸುತ್ತಿದ್ದೇನೆ. ಇಲ್ಲಿ ಇನ್ನೊಂದು ವಿಷಯವನ್ನು ಹೇಳಲೇಬೇಕು. 1967 ರಲ್ಲಿ ಅಪ್ಪ ಇದನ್ನು ಕಾದಂಬರಿ ರೂಪದಲ್ಲಿ ಬರೆದಿದ್ದರು. ಆದರೆ ಆ ಕಾದಂಬರಿ 1973 ರಲ್ಲಿ ನಾಟಕವಾಯಿತು. ಅಷ್ಟೇ ಅಲ್ಲ, ಆ ಕಾದಂಬರಿ-ನಾಟಕದ ಹೆಣ್ಣು ಪಾತ್ರದ ದೃಷ್ಟಿಕೋನದಿಂದ ಮತ್ತೆ ಪರಿವರ್ತನೆಗೊಂಡು 1977 ರಲ್ಲಿ 'ಪಲ್ಲವಿ' ಎಂಬ ಚಿತ್ರವಾಯಿತು. ಆ ಚಿತ್ರಕ್ಕಾಗಿ ಅಪ್ಪ ಅತ್ಯುತ್ತಮ ನಿರ್ದೇಶನಕ್ಕೆ ಕೇಂದ್ರ ಪ್ರಶಸ್ತಿಯನ್ನೂ ಪಡೆದರು. ಆದಾಗಿ ಈಗ್ಗೆ ಹಲವು ದಶಕಗಳಾಗಿದ್ದರೂ ಇಲ್ಲಿಯತನಕ (ಗಿರೀಶ್ ಕಾಸರವಳ್ಳಿಯವರ ಸಿನಿಮಾಗಳು, 'ಸ್ವರ್ಣ ಕಮಲ' ಪ್ರಶಸ್ತಿಗಳನ್ನು ಪಡೆದಿದ್ದರೂ) ಅಪ್ಪನ ನಂತರ ಯಾವ ಕನ್ನಡ ಸಿನಿಮಾ ನಿರ್ದೇಶಕನೂ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಯನ್ನು ಪಡೆದಿಲ್ಲ ಎಂದರೆ ಅಚ್ಚರಿ ಆಗುತ್ತದಲ್ಲವೆ?

ಅದೆಲ್ಲ ಇರಲಿ, ಇದೇ ಮಾರ್ಚ್ 6 ಕ್ಕೆ ಬಿಡುಗಡೆಗೊಳ್ಳುತ್ತಿರುವ ಅಪ್ಪನ ಹೊಸ ಪುಸ್ತಕಗಳು ಯಾವುಗಳೆಂದರೆ: ಪಾಶ್ಚಿಮಾತ್ಯ ಸಾಹಿತಿಗಳ ಬದುಕು, ಬರಹವನ್ನು ಕುರಿತ 'ಮನಕೆ ಕಾರಂಜಿಯ ಸ್ಪರ್ಶ', ಕ್ರೀಡೆ ಮತ್ತು ಕ್ರೀಡಾಪಟುಗಳನ್ನು ಕುರಿತಂತೆ ಬರೆದಿರುವ 'ಆಟ, ಜೂಜು, ಮೋಜು', 'ಮರೆಯುವ ಮುನ್ನ'ದ ಎರಡನೆ ಸಂಗ್ರಹ ಮತ್ತು 'ನೀಲು ಕಾವ್ಯ'ದ ಮೂರನೆ ಸಂಗ್ರಹ.

ಮತ್ತೊಮ್ಮೆ ಮಾರ್ಚ್ 6 ಮತ್ತು 7 ರ ಕಾರ್ಯಕ್ರಮಕ್ಕೆ ಎಲ್ಲರಿಗೂ ಆಹ್ವಾನ.

● ಗೌರಿ

ಓದುಗರಿಗಾಗಿ

ಈ ಬಾರಿ ವಿಶೇಷ ಸಂಚಿಕೆಯನ್ನು ತರುವ ನಿರ್ಧಾರವನ್ನು ಕೊನೆ ಗಳಿಗೆಯಲ್ಲಿ ತೆಗೆದುಕೊಂಡಿದ್ದೇವೆ. ಆ ಸಂಚಿಕೆಗೆ ಓದುಗರಿಗಾಗಿ ನೀಡುತ್ತಿರುವ ವಿಷಯ:

"ಲಂಕೇಶ್ ಮತ್ತು ಪತ್ರಿಕೆಯಿಂದ ನಾನು ಪಡೆದದ್ದು"

ಲಂಕೇಶರ ಕತೆ, ಕಾದಂಬರಿ, ನಾಟಕ, ಲೇಖನ, ಕಾವ್ಯ, ವಿಚಾರ, ಇದ್ಯಾವುದೇ ಆಗಿರಲಿ, ಅದು ನಿಮ್ಮ ಮೇಲೆ ಯಾವ ರೀತಿಯ ಪ್ರಭಾವ ಬೀರಿತು ಎಂಬುದನ್ನು ಕುರಿತು ಇನ್ನೂರು ಪದಗಳಲ್ಲಿ ಬರೆದು ಕಳುಹಿಸಬೇಕೆಂದು ವಿನಂತಿ. ಸಮಯ ತುಂಬಾ ಕಡಿಮೆ ಇರುವುದರಿಂದ ಫೆಬ್ರವರಿ 26 ರೊಳಗೆ ನಿಮ್ಮ ಬರಹ ನಮ್ಮ ಕೈಸೇರಬೇಕು. ಎಂದಿನಂತೆ ನೀವು lankesh70@rediffmail.comಗೆ ಬರಹ/ನುಡಿಯಲ್ಲಿ ಇ-ಮೇಲ್ ಮಾಡಬಹುದು. ಬೇಗನೆ ಬರೆದು ಕಳುಹಿಸಿ ಪ್ಲೀಸ್.


ಶಹೀದ್ ಅಜ್ಮಿಯನ್ನು ನೆನೆಯುತ್ತಾ...

"ನಾನು ಹೇಗೆ ಸಾಯುತ್ತೇನೆಂಬುದು ಈಗಾಗಲೇ ನಿರ್ಧಾರವಾಗಿರುವ ವಿಚಾರ. ಪ್ರಾಯಶಃ ಇಂದಲ್ಲ ನಾಳೆ ಬುಲೆಟ್‌ಗಳು ನನ್ನ ಎದೆಯನ್ನು ಹೊಕ್ಕು ನನ್ನನ್ನು ಕೊಲ್ಲುತ್ತವೆ" ಎಂದು ಆಗಾಗ ಆತ ಹೇಳುತ್ತಿದ್ದ. ಅಕ್ಷರಶಃ ಆವನ ನಿರೀಕ್ಷೆಯಂತೆಯೇ ಆಗಿಹೋಯಿತು. ಮೊನ್ನೆ ಫೆಬ್ರವರಿ 11ರ ಸಂಜೆ ಮುಂಬೈನ ಕುರ್ಲಾ ಏರಿಯಾದಲ್ಲಿದ್ದ ತನ್ನ ಆಫೀಸಿನಲ್ಲಿ ಬಡ ಕಕ್ಷಿದಾರರೊಂದಿಗೆ ಚರ್ಚೆ ಮಾಡುತ್ತಾ ಕುಳಿತಿದ್ದಾಗ ನಾಲ್ಕು ಜನ ಬಂದೂಕು ಧಾರಿಗಳು ಆಫೀಸಿಗೆ ನುಗ್ಗಿ ಎದೆಗೆ ಪಾಯಿಂಟ್ ಬ್ಲಾಂಕ್ ರೇಂಜಿನಲ್ಲಿ ಗುಂಡು ಹಾರಿಸಿ ಆತನನ್ನು ಕೊಂದುಹಾಕಿದರು. ಅಲ್ಲಿಗೆ, ನೈಜ ಪ್ರಜಾತಾಂತ್ರಿಕ ವ್ಯವಸ್ಥೆಯೊಂದನ್ನು, ಸರ್ವರಿಗೂ ನ್ಯಾಯವೊದಗಿಸುವ ನ್ಯಾಯಾಂಗವನ್ನು, ಎಲ್ಲಾ ಸಮುದಾಯಗಳು ತಮ್ಮ ಸಾಂಸ್ಕೃತಿಕ ವೈವಿಧ್ಯತೆಗಳೊಂದಿಗೆ ನಿಜಾರ್ಥದಲ್ಲಿ ಐಕ್ಯವಾಗಿ, ನೆಮ್ಮದಿಯಿಂದ ಬದುಕುವ ಆರೋಗ್ಯಪೂರ್ಣ ಸಮಾಜವೊಂದನ್ನು ಸ್ಥಾಪಿಸುವುದಕ್ಕಾಗಿ ಕನಸುತ್ತಾ, ಅದನ್ನು ಸಾಕಾರಗೊಳಿಸುವುದಕ್ಕಾಗಿ ತಮ್ಮ ಜೀವವನ್ನೇ ಪಣಕ್ಕಿಟ್ಟು ಹಗಲಿರುಳು ದುಡಿದ ಮತ್ತೊಂದು ಯುವ ಕುಡಿ ಹೀಗೆ ವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾಗಿ ಕಮರಿಹೋದಂತಾಯಿತು.

ಆತನ ಹೆಸರು ಶಹೀದ್ ಆಜ್ಮಿ. ವಯಸ್ಸಿನ್ನೂ ಮೂವತ್ತೆರಡು ವರ್ಷ ಆಗಿತ್ತು, ವೃತ್ತಿಯಲ್ಲಿ ವಕೀಲ. ಇನ್ನೂ ಹದಿಹರೆಯದ ಬಾಲಕನಂತೆ ಕಾಣುವ ಅಂದವಾದ ಮೈಕಟ್ಟು, ಕಾಂತಿಯುತ ಮುಖ, ಪ್ರಖರವಾದ ತೇಜಸ್ಸು, ಮೆದು ಮಾತುಗಳು, ಸೌಮ್ಯ ಸ್ವಭಾವ, ಸ್ನೇಹಿತರನ್ನು ಹಚ್ಚಿಕೊಳ್ಳುವ ರೀತಿ, ಪ್ರಭುತ್ವದ ಹಿಂಸೆಗೆ ಬಲಿಯಾದ ದಮನಿತರಿಗೆ ತೋರುವ ಪ್ರೀತಿ, ನೋವಿಗೆ ಮಿಡಿಯುವ ಹೂವಿನಂತಹ ಹೃದಯ, ಭಾರತದ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಆಳವಾದ ಜ್ಞಾನ, ನಮ್ಮ ಸಂವಿಧಾನ, ಕಾನೂನುಗಳ ಬಗೆಗಿನ ಅಗಾಧ ಪಾಂಡಿತ್ಯ ಎಂಥಾ ಜಟಿಲ ಸಾಮಾಜಿಕಾರ್ಥಿಕ ಸ್ಥಿತ್ಯಂತರಗಳನ್ನೂ ಜನಸಾಮಾನ್ಯರೂ ಅರ್ಥಮಾಡಿಕೊಳ್ಳುವಂತೆ ವಿವರಿಸುವ ಕುಶಲತೆ - ಹೀಗೆ ಹತ್ತು ಹಲವು ಸದ್ಗುಣಗಳು, ಸಾಮರ್ಥ್ಯಗಳು, ಸ್ವಭಾವಗಳು, ನಡವಳಿಕೆಗಳು ಮೇಳೈಸಿ ರೂಪುಗೊಂಡಿರುವ ಆತನ ವ್ಯಕ್ತಿತ್ವ ಎಂಥವರನ್ನೂ ಕ್ಷಣಾರ್ಧದಲ್ಲಿ ಆಕರ್ಷಿಸಿಬಿಡುತ್ತಿತ್ತು, ಒಮ್ಮೆ ಆತನನ್ನು ಭೇಟಿಯಾಗಿ ಎರಡು ನಿಮಿಷ ಮಾತನಾಡಿದರೆ ಸಾಕು ಅವಕಾಶ ಸಿಕ್ಕಾಗಲೆಲ್ಲಾ ಆತನೊಂದಿಗೆ ಸಮಯ ಕಳೆಯಬೇಕೆನ್ನಿಸುವಂಥ ವ್ಯಕ್ತಿತ್ವ ಅದು.

ಹೊರ ಜಗತ್ತಿಗೆ ಶಹೀದ್ ಆಜ್ಮಿ ಗೊತ್ತಿರುವುದು "ಟೆರರಿಸ್ಟ್ ಲಾಯರ್" ಎಂಬ ಹೆಸರಿನಲ್ಲಿ, ಅದು ಮುಖ್ಯವಾಹಿನಿಯ ಮಾಧ್ಯಮಗಳು ಶಹೀದ್ ಅಜ್ಮಿ ಎಂಬ ಪುಣ್ಯಕೋಟಿ ಗೋವಿಗೆ ಕೊಟ್ಟ ಅನ್ವರ್ಥಕ ನಾಮ. ಅದಕ್ಕೆ ಕಾರಣವಿಷ್ಟೆ: ಪ್ರಭುತ್ವ ಯಾವ್ಯಾವ ಅಮಾಯಕರಿಗೆ ಟೆರರಿಸ್ಟ್ ಹಣೆಪಟ್ಟಿ ಕಟ್ಟಿ, ಅನ್ಯಾಯವಾಗಿ ಅವರ ಮೈತುಂಬಾ ಕೇಸುಗಳನ್ನು ಹಾಕಿ, ಅಮಾನುಷವಾಗಿ ಚಿತ್ರಹಿಂಸೆ ಕೊಡುತ್ತಿದೆಯೋ ಅವರೆಲ್ಲರಿಗೆ ನ್ಯಾಯ ಒದಗಿಸುವುದಕ್ಕಾಗಿ ಈತ ತನ್ನ ಜೀವನವನ್ನೇ ಮುಡುಪಾಗಿಟ್ಟಿರುವುದು; ಎಷ್ಟೇ ಪ್ರಾಣ ಬೆದರಿಕೆಗಳು ಬಂದಿದ್ದರೂ ಅದನ್ನು ಲೆಕ್ಕಿಸದೇ ನ್ಯಾಯಾಲಯದಲ್ಲಿ ಅವರ ಕೇಸುಗಳ ಪರವಾಗಿ ವಾದಿಸುತ್ತಾ ಕಾನೂನುಬದ್ಧ ಹೋರಾಟದಲ್ಲಿ ತೊಡಗಿರುವುದು. 2008ರ ಸೆಪ್ಟೆಂಬರ್ 26ರಂದು ಮುಂಬೈನ ತಾಜ್ ಹೋಟೆಲ್ ಮೇಲೆ ನಡೆದ ಭಯೋತ್ಪಾದಕ ದಾಳಿಯ ಪ್ರಕರಣದಲ್ಲಿ ದಾಳಿಕೋರರಿಗೆ ಸಹಾಯ ಮಾಡಿದ ಆರೋಪದ ಮೇಲೆ ಬಂಧಿತನಾಗಿದ್ದ ಫಾಯಿಮ್ ಅನ್ಸಾರಿಯ ಪರವಾಗಿ, 2006ರ ಜುಲೈ 11ರಂದು ಮುಂಬೈನ ಲೋಕಲ್ ಟ್ರೇನ್ ಬ್ಲಾಸ್ಟ್ ಪ್ರಕರಣದಲ್ಲಿ ಭಯೋತ್ಪಾದಕರೊಂದಿಗೆ ಕೈಜೋಡಿಸಿದ ಆರೋಪದ ಮೇಲೆ ಬಂಧಿತರ ಪರವಾಗಿಯೂ ಶಹೀದ್ ಅಜ್ಮಿ ವಕಾಲತ್ತು ವಹಿಸಿದ್ದ.

ನಮ್ಮಲ್ಲಿ ಎಲ್ಲೇ ಬಾಂಬ್ ಸ್ಫೋಟಗೊಂಡರೂ, ಎಲ್ಲೇ ಭಯೋತ್ಪಾದಕ ದಾಳಿ ನಡೆದರೂ ಯಾವುದೇ ತನಿಖೆಯಿಲ್ಲದೇ ಮುಸ್ಲಿಮ್ ಭಯೋತ್ಪಾದಕರೇ ಅದಕ್ಕೆ ಕಾರಣಕರ್ತರೆಂದು ಪರಿಗಣಿಸುವ ಪರಿಪಾಠವಿದೆ. ಇತ್ತೀಚಿನ ವರ್ಷಗಳಲ್ಲಿ ಭಜರಂಗದಳ ದವರು, ಆರೆಸ್ಸೆಸ್‌ನವರೂ ಬಾಂಬ್ ತಯಾರಿಸುತ್ತಿದ್ದ ವೇಳೆ ಆಕಸ್ಮಾತಾಗಿ ಸ್ಫೋಟಗೊಂಡು ಸತ್ತ ಘಟನೆಗಳು ಬಹಳಷ್ಟು ವರದಿಯಾಗಿವೆ. ಹಿಂದೂತ್ವವಾದಿಗಳೇ ಜನನಿಬಿಡ ಪ್ರದೇಶಗಳಲ್ಲಿ ಬಾಂಬ್ ಸ್ಫೋಟಿಸಿ ಅದನ್ನು ಮುಸ್ಲಿಂ ಭಯೋತ್ಪಾದಕರ ತಲೆಗೆ ಕಟ್ಟುವ ಉದ್ದೇಶದಿಂದ ಬಾಂಬ್ ತಯಾರಿಸಲಾಗುತ್ತಿತ್ತು ಎಂದು ಪೊಲೀಸ್ ತನಿಖೆಯಲ್ಲಿ ಸಾಬೀತಾಗಿವೆ. ಹೀಗಿದ್ದ ಮೇಲೂ, ಎಲ್ಲೇ ಬಾಂಬ್ ಸ್ಫೋಟಗೊಂಡರೂ ಕನಿಷ್ಠ ತನಿಖೆ ನಡೆಸದೆ ಅದನ್ನು ಮುಸ್ಲಿಂ ಭಯೋತ್ಪಾದಕರ ಅಕೌಂಟಿಗೆ ಹಾಕುವ ಪರಿಪಾಠ ಮಾತ್ರ ನಿಂತಿಲ್ಲ, ಅಂತೆಯೇ, ನಿಜವಾಗಿ ಬಾಂಬ್ ಸ್ಫೋಟಿಸಿದವರು ಮುಸ್ಲಿಂ ಭಯೋತ್ಪಾದಕರೇ ಆಗಿದ್ದರೂ ಅವರಂತೂ ಪೊಲೀಸರ ಕೈಗೆ ಸಿಗುವುದಿಲ್ಲ,ಅವರನ್ನು ಹಿಡಿಯಬೇಕೆಂದು ನಾಗರಿಕ ಸಮಾಜದಿಂದ ಒತ್ತಡ ಹೆಚ್ಚಾಗುತ್ತಿದ್ದಂತೆ ತಾವು ಏನೋ ಸಾಧನೆ ಮಾಡಿದ್ದೇವೆಂದು ತೋರಿಸಿಕೊಳ್ಳುವುದಕ್ಕೆ, ಅಮಾಯಕ ಮುಸ್ಲಿಂ ಯುವಕರನ್ನು ಬಂಧಿಸಿ ಅವರ ತಲೆಗೆ ಈ ಪ್ರಕರಣಗಳನ್ನು ಕಟ್ಟುವ ಪರಿಪಾಠಕ್ಕೂ, ನಮ್ಮಲ್ಲಿ ಕೊರತೆಯಿಲ್ಲ, ಹೀಗೆ, ಅಮಾಯಕರಾಗಿದ್ದರೂ ಭಯೋತ್ಪಾದಕರೆಂಬ ಹಣೆ ಪಟ್ಟಿಯನ್ನು ಹಚ್ಚಿಸಿಕೊಂಡು ಚಿತ್ರಹಿಂಸೆ ಅನುಭವಿಸುತ್ತಿರುವವರಿಗೆ ಕಾನೂನುಬದ್ಧವಾಗಿ ನ್ಯಾಯ ದೊರಕಿಸಿಕೊಡುವ ಕೆಲಸಕ್ಕೇನಾದರೂ ಯಾರಾದರೂ ಕೈಹಾಕಿದರೆ, ಅದರಲ್ಲೂ ವಿಶೇಷವಾಗಿ ಹೀಗೆ ಕೈ ಹಾಕುವವನು ಆಕಸ್ಮಾತ್ತಾಗಿ ಮುಸ್ಲಿಂಮನಾಗಿದ್ದರೆ ಆತ ಎರಡು ರೀತಿಯ ಅಪಾಯಗಳನ್ನು ಎದುರಿಸಬೇಕಾಗುತ್ತದೆ: ಒಂದು, ಭಯೋತ್ಪಾದಕರೆಂಬ ಆರೋಪ ಹೊತ್ತಿರುವವರಿಗೆ ಕಾನೂನು ನೆರವು ನೀಡಿದ ಕಾರಣಕ್ಕಾಗಿ ಆತನನ್ನೂ ಭಯೋತ್ಪಾದಕ ಎಂದು ಚಿತ್ರಿಸುವುದು. ಎರಡು, ಪೊಲೀಸರಿಂದ ಮತ್ತು ಹಿಂದೂತ್ವ ಉಗ್ರವಾದಿಗಳಿಂದ ಪ್ರಾಣಾಪಾಯವನ್ನು ಎದುರಿಸುವುದು. ಅಮಾಯಕರ ಪರವಾಗಿ ಗಟ್ಟಿಯಾಗಿ ವಾದ ಮಾಡಿ ಗೆದ್ದರೆ ಅಮಾಯಕರನ್ನು ಬಂಧಿಸಿ, ಅವರನ್ನೇ ಭಯೋತ್ಪಾದಕರೆಂದು ಹೊರಜಗತ್ತಿಗೆ ತೋರಿಸಿ, ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡ ಪೊಲೀಸರಿಗೆ ಮುಖಭಂಗವಾಗುತ್ತದೆಯಾದ್ದರಿಂದ ನ್ಯಾಯಾಲಯದಲ್ಲಿ ಬಂಧಿತರ ಪರವಾಗಿ ವಾದಿಸುವವವರನ್ನೇ ದೈಹಿಕವಾಗಿ ಮುಗಿಸಿ ಹಾಕುವ ಹೀನಕೃತ್ಯಕ್ಕೆ ಪೊಲೀಸರು ಇಳಿಯುತ್ತಾರೆ. ಇನ್ನು ಶಿವಸೇನೆ, ಭಜರಂಗದಳ, ಆರೆಸ್ಸೆಸ್‌ನಂತಹ ಹಿಂದೂತ್ವ ಉಗ್ರವಾದಿ ಸಂಘಟನೆಗಳೂ ತಮ್ಮ ಹಿಂದೂತ್ವ ಭಕ್ತಿಯನ್ನು ಪ್ರದರ್ಶಿಸುವುದಕ್ಕಾಗಿ ಅಂತಹ ವಕೀಲರ ಮೇಲೆಯೇ ಮುಗಿಬೀಳುತ್ತಾರೆ. ಶಹೀದ್ ಅಜ್ಮಿ ವಿಚಾರದಲ್ಲಿ ಇವೆರಡೂ ಸತ್ಯವಾದವು. ಮಾಧ್ಯಮಗಳು ಆತನನ್ನು ಟೆರರಿಸ್ಟ್ ಲಾಯರ್ ಎಂದು ಕರೆದರೆ, ಹಿಂದೂತ್ವವಾದಿ-ಪೊಲೀಸ್ ಕೂಟ ಅವರನ್ನು ಟೆರರಿಸ್ಟ್ ಎಂದೇ ಪರಿಗಣಿಸಿ ಅಂತಿಮವಾಗಿ ಅವರ ಪ್ರಾಣವನ್ನೇ ಬಲಿ ತೆಗೆದುಕೊಂಡಿತು.



ಸುತ್ತ-ಮುತ್ತ

ಕುಮಾರ್ ಬುರಡಿಕಟ್ಟಿ

ಇಷ್ಟಕ್ಕೂ ಭಯೋತ್ಪಾದಕ ಕೃತ್ಯಗಳಲ್ಲಿ ಆರೋಪಿಗಳೆನಿಸಿದವರ ಪರವಾಗಿಯೇ ಅಜ್ಮಿ ಏಕೆ ವಕಾಲತ್ತು ಮಾಡುತ್ತಿದ್ದ? ಇದಕ್ಕೆ ಉತ್ತರ ಆತನ ಬದುಕಿನಲ್ಲೇ ಇದೆ. ಅಸಲಿಗೆ, ಆತನ ಸಾವಿನಂತೆಯೇ ಆತನ ಬದುಕೂ ಕೂಡ ಬಹಳ ದುರಂತಮಯವಾದದ್ದು. ಆ ದುರಂತಮಯ ಬದುಕನ್ನು ಅರ್ಥ ಮಾಡಿಕೊಳ್ಳದೇ ಈ ಪ್ರಶ್ನೆಗೆ ಉತ್ತರವೂ ಸಿಗುವುದಿಲ್ಲ, ಅದನ್ನು ಅರ್ಥ ಮಾಡಿಕೊಳ್ಳುವ ಗೋಜಿಗೆ ಹೋಗದ ಅಥವಾ ಅರ್ಥಮಾಡಿಕೊಳ್ಳುವುದಕ್ಕೇ ಬಯಸದ ಬಹುತೇಕರು, "ಆತನೊಬ್ಬ ಮುಸ್ಲಿಂ ಯುವಕ. ಸಹಜವಾಗಿಯೇ ಮುಸ್ಲಿಂ ಭಯೋತ್ಪಾದಕರ ನೆರವಿಗೆ ಬರುತ್ತಾನೆ. ಹಾಗಾಗಿ, ಆತನೂ ಪರೋಕ್ಷವಾಗಿ ಒಬ್ಬ ಭಯೋತ್ಪಾದಕ" ಎಂಬ ನಿಲುವಿಗೆ ಬಂದುಬಿಟ್ಟಿದ್ದರು.

ಬಡ ಮುಸ್ಲಿಂ ಕುಟುಂಬದಲ್ಲಿ ಹುಟ್ಟಿದ ಅಜ್ಮಿ ಏಳು ವರ್ಷದ ಬಾಲಕನಿದ್ದಾಗಲೇ ತನ್ನ ತಂದೆಯನ್ನು ಕಳೆದುಕೊಂಡ. ನಂತರ ಆತನನ್ನು ಪೊರೆದು ಬೆಳೆಸಿದ್ದುಆತನ ತಾಯಿ, ಬಂಧುಬಳಗದವರು. 1992ರಲ್ಲಿ ಬಾಬ್ರಿ ಮಸೀದಿ ಧ್ವಂಸಗೊಂಡ ನಂತರ ಶಿವಸೇನೆ ಮತ್ತು ಸಂಘಪರಿವಾರದ ಉಗ್ರಕೂಟ ಮುಂಬೈನಲ್ಲಿ ನಡೆಸಿದ ಮುಸ್ಲಿಮರ ಮಾರಣಹೋಮ ಅಜ್ಮಿಯ ಬದುಕಿನ ದಿಕ್ಕನ್ನೇ ಬದಲಿಸಿಬಿಟ್ಟಿತು. ಆಗ ಆತನಿನ್ನೂ ಹದಿನೈದು ವರ್ಷದ ಬಾಲಕ. ಮುಂಬೈ ಕೋಮುಗಲಭೆಗಳಿಂದ ಹೊತ್ತಿ ಉರಿಯುತ್ತಿದ್ದ 1992ರ ಡಿಸೆಂಬರ್‌ನಲ್ಲಿ ಒಂದು ದಿನ ಅಜ್ಮಿ ಶಾಲೆಯನ್ನು ಮುಗಿಸಿಕೊಂಡು ಮನೆಗೆ ಮರಳುತ್ತಿದ್ದಾಗ ಒಬ್ಬ ಪೊಲೀಸ್ ಈತನ ಹಣೆಗೆ ಪಿಸ್ತೂಲನ್ನಿಟ್ಟು ಕೊಲ್ಲುವುದಾಗಿ ಬೆದರಿಸಿದ. ಆತನ ಮಾತಿನಲ್ಲೇ ಹೇಳುವುದಾದರೆ ಇದು ಆತನ ಜೀವನದ ಅತ್ಯಂತ ಭಯಾನಕ ಘಟನೆಯಾಗಿತ್ತು, ನಂತರ ಆತನನ್ನು ಬಂಧಿಸಿ ಶಿವಸೇನೆಯ ಅಧಿನೇತ ಭಾಳ ಠಾಕ್ರೆಯನ್ನು ಕೊಲ್ಲುವ ಸಂಚು ರೂಪಿಸಿದ್ದ ಎಂಬ ಆರೋಪ ಹೊರಿಸಿ ಜೈಲಿಗಟ್ಟ ಲಾಯಿತು. 1995ರಲ್ಲಿ ಆತ ನಿಷೇಧಿತ ಇಸ್ಲಾಮಿಕ್ ಸಂಘಟನೆಯ ಸದಸ್ಯನಾಗಿದ್ದಾನೆ ಎಂಬ ಆರೋಪ ಹೊರಿಸಿ ತಿಹಾರ್ ಜೈಲಿಗೆ ಕಳಿಸಿ ಕೊಡಬಾರದ ಚಿತ್ರಹಿಂಸೆ ಕೊಡಲಾಯಿತು. ಅಜ್ಮಿಯನ್ನು ಶಾಶ್ವತವಾಗಿ ಜೈಲುಕಂಬಿಗಳ ಹಿಂದೆ ಕೊಳೆಸಬೇಕೆಂಬ ಉದ್ದೇಶದಿಂದ ಆತನ ಮೇಲೆ ಟಾಡಾದಂತಹ ಕರಾಳ ಕಾನೂನನ್ನೂ ಹಾಕಲಾಯಿತು. (ಆದರೆ ಸುಪ್ರೀಂ ಕೋರ್ಟ್ ಆತನನ್ನು ಆರೋಪ ದಿಂದ ಮುಕ್ತಗೊಳಿಸಿತು). • ದುರಂತ ನೋಡಿ, ಆತನ ಮೇಲೆ ಹೊರಿಸಲಾಗಿದ್ದ ಯಾವ ಆರೋಪವನ್ನೂ ನ್ಯಾಯಾಲಯದಲ್ಲಿ ಸಾಬೀತುಪಡಿಸುವುದಕ್ಕೆ, ಪೊಲೀಸರಿಂದ ಆಗಲಿಲ್ಲ, ಆದರೆ, ಶಹೀದ್ ಅಜ್ಮಿ ಮಾತ್ರ ಮುಸ್ಲಿಮನಾಗಿ ಹುಟ್ಟಿದ ತಪ್ಪಿಗೆ ಅನ್ಯಾಯವಾಗಿ ಹಲ ವಾರು ವರ್ಷಗಳ ಕಾಲ ಚಿತ್ರಹಿಂಸೆ ಅನುಭವಿ ಸುತ್ತಾ ಜೈಲಿನಲ್ಲಿ ಕೊಳೆಯ ಬೇಕಾಯಿತು. ಈ ಅವಧಿ ಯಲ್ಲಿ ಆತನನ್ನು ಐವತ್ತು ದಿನಗಳ ಕಾಲ ಕಾನೂನು ಬಾಹಿರವಾಗಿ ನೆಲಮಾಳಿ ಗೆಯ ಕತ್ತಲ ಜೈಲು ಕೋಣೆಯಲ್ಲಿ ಏಕಾಂಗಿ ಯಾಗಿ ಬಂಧಿಸಿಡ ಲಾಗಿತ್ತು, ಅದಾದಮೇಲೆ ಆತನನ್ನು ನೆಲಮಾಳಿಗೆಯಿಂದ ಹೊರತರಲಾಯಿತಾದರೂ ಒಂದು ವರ್ಷ ಕಾಲ ಏಕಾಂತ ಜೈಲುವಾಸವನ್ನು ಮುಂದುವರೆಸಲಾಯಿತು. ಕಿರಣ್ ಬೇಡಿಯವರು ಆತನನ್ನು ಅಲ್ಲಿಂದ ಹೊರತರಬೇಕೆಂಬ ಆದೇಶ ಕೊಟ್ಟ ಮೇಲಷ್ಟೇ ಆತ ಪೊಲೀಸರು ಮತ್ತು ಜೈಲು ಅಧಿಕಾರಿಗಳನ್ನು ಹೊರತುಪಡಿಸಿ ಬೇರೆ ಜನರ ಮುಖ ನೋಡಿದ್ದು.



ನಿರಪರಾಧಿಯಾಗಿದ್ದರೂ ಅನ್ಯಾಯವಾಗಿ ಅನುಭವಿಸಿದ ಈ ಚಿತ್ರಹಿಂಸೆ ಶಹೀದ್ ಅಜ್ಮಿಯ ಜೀವನದ ದಿಕ್ಕನ್ನೇ ಬದಲಿಸಿತು. ತನ್ನಂತೆಯೇ ಪೊಲೀಸರಿಂದ ಬಂಧನಕ್ಕೊಳಗಾಗಿ, ಟೆರರಿಸ್ಟ್ ಎಂಬ ಹಣೆಪಟ್ಟಿ ಹಚ್ಚಿಸಿಕೊಂಡು, ಅನ್ಯಾಯವಾಗಿ ವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾಗುತ್ತಿರುವ ಸಾವಿರಾರು ಜನರ ಕಣ್ಣೀರನ್ನು ಒರೆಸಬೇಕೆಂಬ ತೀರ್ಮಾನಕ್ಕೆ ಆತ ಬಂದುಬಿಟ್ಟ. ಅದಕ್ಕಾಗಿ ಆತ ಆರಿಸಿಕೊಂಡಿದ್ದು ವಕೀಲಿ ವೃತ್ತಿಯನ್ನು, ಜೈಲಿನಲ್ಲಿರುವಾಗಲೇ ಆತ ಕಾನೂನು ಪದವಿ ಓದುವುದಕ್ಕೆ ಪ್ರಾರಂಭಿಸಿದ್ದ, ಜೈಲಿನಿಂದ ಹೊರಬಂದ ತಕ್ಷಣವೇ ತನ್ನ ಪದವಿಯನ್ನು ಮುಗಿಸಿ ಕಪ್ಪು ಕೋಟು ತೊಟ್ಟು ಪೊಲೀಸರ ದೌರ್ಜನ್ಯಕ್ಕೆ ಬಲಿಯಾದವರ ಕೇಸುಗಳನ್ನು ಹುಡುಕಿ ಹುಡುಕಿ ಕೈಗೆತ್ತಿಕೊಳ್ಳಲಾರಂಭಿಸಿದ. ಅದರಲ್ಲೂ ವಿಶೇಷವಾಗಿ ಭಯೋತ್ಪಾದಕರೆಂಬ ಹಣೆಪಟ್ಟಿ ಹಚ್ಚಿಸಿಕೊಂಡ ಅಮಾಯಕರ ಪರವಾಗಿ ವಿಶೇಷ ಕಾಳಜಿ ವಹಿಸಿ ವಕಾಲತ್ತು ಮಾಡಲಾರಂಭಿಸಿದ. ಮೊದಲೇ ಬಹಳ ಬುದ್ಧಿವಂತನಾಗಿದ್ದ ಹಾಗೂ ಕಾನೂನುಗಳನ್ನು ಚೆನ್ನಾಗಿ ಅರೆದು ಕುಡಿದಿದ್ದ ಅಜ್ಮಿ ತನ್ನಂತೆಯೇ ಅನೇಕ ಅಮಾಯಕರು ಸರಳುಗಳ ಹಿಂದೆ ಅನ್ಯಾಯವಾಗಿ ಚಿತ್ರಹಿಂಸೆ ಅನುಭವಿಸುವುದನ್ನು ತಪ್ಪಿಸಿದ. ಈ ಪ್ರಕ್ರಿಯೆಯಲ್ಲಿಯೇ ಪೊಲೀಸರ, ಹಿಂದೂತ್ವವಾದಿಗಳ ಕೆಂಗಣ್ಣಿಗೂ ಗುರಿಯಾದ. 2008ರ ಸೆಪ್ಟೆಂಬರ್ 26ರಂದು ಮುಂಬೈನ ತಾಜ್ ಹೋಟೆಲ್ ದಾಳಿಯಲ್ಲಿ ಆರೋಪಿಗಳೆನಿಸಿದವರ ಪರ ವಕಾಲತ್ತು ವಹಿಸಿದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ ವೆಂದು ಶಿವಸೇನೆಯಿಂದ ಬೇರ್ಪಟ್ಟು ತನ್ನದೇ ಮಹಾರಾಷ್ಟ್ರ ನವ ನಿರ್ಮಾಣ ಸೇನೆ ಕಟ್ಟಿಕೊಂಡಿರುವ ರಾಜ್ ಠಾಕ್ರೆಯೇ ಬಹಿರಂಗವಾಗಿ ಬೆದರಿಕೆಯೊಡ್ಡಿದ್ದ, ಅದರಲ್ಲೂ ವಿಶೇಷವಾಗಿ ಅಜ್ಮಿಗೆ ಅನೇಕ ಬಾರಿ ಪ್ರಾಣಬೆದರಿಕೆಗಳೂ ಬಂದಿದ್ದವು. ತಾನು ಪೊಲೀಸರ ಅಥವಾ ಶಿವಸೇನೆಯಂಥ ಉಗ್ರರ ಗುಂಡಿಗೆ ಒಂದು ದಿನ ಬಲಿಯಾಗುತ್ತೇನೆಂದು ಆತನಿಗೆ ಗೊತ್ತಿದ್ದರೂ ತನ್ನ ವೃತ್ತಿಯನ್ನು ಮಾತ್ರ ಬಿಡಲಿಲ್ಲ, ತನ್ನ ಬದ್ಧತೆಯೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ,

ಸಾಮಾನ್ಯವಾಗಿ ಭಯೋತ್ಪಾದನೆ, ಸಂಘಟಿತ ಅಪರಾಧ, ಕೊಲೆಗಳಂಥ ಗಂಭೀರ ಆರೋಪ ಹೊತ್ತಿರುವವರ ಕ್ರಿಮಿನಲ್ ಕೇಸುಗಳನ್ನು ತೆಗೆದುಕೊಂಡರೆ ಬಹಳಷ್ಟು ದುಡ್ಡು ಮಾಡಬಹುದೆಂಬ ಆಲೋಚನೆ ಬಹಳಷ್ಟು ವಕೀಲರಿಗಿರುತ್ತದೆ. ಆದರೆ ಶಹೀದ್ ಅಜ್ಮಿ ಇದಕ್ಕೆ ಬಹುದೊಡ್ಡ ಅಪವಾದವಾಗಿದ್ದ, ಆತ ಎಂದೂ ದುಡ್ಡಿಗೆ ಆಸೆಪಡಲಿಲ್ಲ, ತನ್ನ ಕಕ್ಷಿದಾರರು ಬಡವರಾಗಿದ್ದರೆ ಅವರಿಂದ ಒಂದು ಪೈಸೆಯನ್ನೂ ಪಡೆಯುತ್ತಿರಲಿಲ್ಲ, ಸ್ವಲ್ಪ ಅನುಕೂಲಸ್ಥರಾದರೆ ಕನಿಷ್ಠ ಫೀಜನ್ನು ಮಾತ್ರ ತೆಗೆದುಕೊಳ್ಳುತ್ತಿದ್ದ, ವಾಸ್ತವದಲ್ಲಿ ಭಯೋತ್ಪಾದನಾ ಕೇಸುಗಳ ಬಗ್ಗೆಯೇ ಒಂದು ಪಿಹೆಚ್‌ಡಿ ಮಾಡಿ ಅಲ್ಲಾಗುತ್ತಿರುವ ಅನ್ಯಾಯವನ್ನು ದಾಖಲಿಸಬೇಕೆಂದು ಶಹೀದ್ ಅಜ್ಮಿ ಬಲವಾದ ಆಸೆಯಿಟ್ಟುಕೊಂಡಿದ್ದ, ಅದನ್ನು ಮಾಡಿಮುಗಿಸುವ ಮೊದಲೇ ಗುಂಡಿಗೆ ಎದೆಯೊಡ್ಡಿ ನೆಲಕ್ಕುರುಳಿದ್ದಾನೆ.

ಅಜ್ಮಿ ಕೇವಲ ವಕೀಲ ವೃತ್ತಿಗೆ ತನ್ನನ್ನು ಸೀಮಿತಗೊಳಿಸಿಕೊಂಡಿರಲಿಲ್ಲ, ಮುಂಬೈನಲ್ಲಿ ಸಾವಿರಾರು ಗುಡಿಸಲುಗಳನ್ನು ನೆಲಸಮ ಮಾಡಿ ಸ್ಲಮ್ ನಿವಾಸಿಗಳನ್ನು ಹೊರದಬ್ಬುತ್ತಿದ್ದಾಗ ಅದರ ವಿರುದ್ಧ ನಡೆದ ಪ್ರತಿಭಟನೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ, ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಪ್ರತಿಭಟನೆಗಳು, ವಿಚಾರಗೋಷ್ಠಿಗಳು ನಡೆದರೆ ತಪ್ಪದೇ ಪಾಲ್ಗೊಳ್ಳುತ್ತಿದ್ದ, **Committee for Protection of Democratic Rights (CPDR) and Indian Association of People's Lawyers (IAPL)** ಸಂಘಟನೆಗಳ ಸಕ್ರಿಯ ಕಾರ್ಯಕರ್ತನಾಗಿದ್ದನಲ್ಲದೇ ಅನೇಕ ಸತ್ಯಶೋಧನಾ ತಂಡಗಳಲ್ಲಿ ಭಾಗಿಯಾಗಿದ್ದ,

ಶಹೀದ್ ಅಜ್ಮಿ ಒಬ್ಬ ಅತ್ಯುತ್ತಮ ಬೋಧಕನಾಗಿದ್ದ, ತನ್ನ ಬಾಲ್ಯದ ದಿನಗಳಲ್ಲಿ ಆತ ಸುಪ್ರಸಿದ್ಧ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕಟ್ಟಡದೆದುರು ಹಾದುಹೋಗುತ್ತಾ ತಾನೂ ಒಂದು ದಿನ ವಿದ್ಯಾರ್ಥಿಯಾಗಿ ಈ ಸಂಸ್ಥೆಯೊಳಗೆ ಪ್ರವೇಶಿಸಬೇಕೆಂದು ಕನಸು ಕಾಣುತ್ತಿದ್ದ, ಆದರೆ, ಅದು ಸಾಧ್ಯವಾಗಲೇ ಇಲ್ಲ, ಕೊನೆಗೆ ಅದೇ ಶಿಕ್ಷಣ ಸಂಸ್ಥೆ ಅಜ್ಮಿಯನ್ನು ಅತಿಥಿ ಉಪನ್ಯಾಸಕನಾಗಿ ವಿದ್ಯಾರ್ಥಿಗಳಿಗೆ ಪಾಠ ಮಾಡುವಂತೆ ಆಹ್ವಾನಿಸಿತು! ಹೀಗೆ ವಿದ್ಯಾರ್ಥಿಯಾಗಿ ಹೋಗಬೇಕೆಂದು ಕನಸು ಕಂಡಿದ್ದ ಅಜ್ಮಿ ಉಪನ್ಯಾಸಕನಾಗಿ ಹೋಗಿದ್ದ! ಆತನಿಂದ ಪಾಠ ಹೇಳಿಸಿಕೊಂಡ ವಿದ್ಯಾರ್ಥಿಗಳೇ "ನಮ್ಮ ವಿದ್ಯಾರ್ಥಿ ಜೀವನದಲ್ಲಿ ನಾವು ಕೇಳಿದ ಅತ್ಯುತ್ತಮ ಪಾಠಗಳು ಎಂದರೆ ಅಜ್ಮಿ ಹೇಳಿಕೊಟ್ಟ ಪಾಠಗಳು" ಎನ್ನುತ್ತಾರೆಂದರೆ ಅಜ್ಮಿಯ ವ್ಯಕ್ತಿತ್ವ, ಪಾಂಡಿತ್ಯ ಮತ್ತು ಬೋಧನಾ ಕುಶಲತೆಗಳು ಅರ್ಥವಾಗುತ್ತವೆ. ಆತನಿಗೆ ಓದಿನ ಗೀಳೂ ಬಹಳವಾಗಿತ್ತು, ಆತ ತಿಹಾರ್ ಜೈಲಿನಲ್ಲಿದ್ದಾಗ ಮಾವೋವಾದಿ ರಾಜಕೀಯ ಕೈದಿಗಳ ಸಂಪರ್ಕಕ್ಕೆ ಬಂದ ಮೇಲೆ ಅವರೊಂದಿಗೆ ಸೇರಿಕೊಂಡು ತಿಹಾರ್ ಜೈಲಿನಲ್ಲೇ ಅತ್ಯುತ್ತಮವಾದ ಒಂದು ಗ್ರಂಥಾಲಯವನ್ನು ಸ್ಥಾಪಿಸಿದ್ದ.

ಶಹೀದ್ ಅಜ್ಮಿಯಿಂದ ಪಾಠ ಹೇಳಿಸಿಕೊಂಡ ವಿದ್ಯಾರ್ಥಿಗಳೆಲ್ಲರೂ ತಮ್ಮ ನೆಚ್ಚಿನ ಮೇಷ್ಟ್ರ ಸಾವಿನಿಂದ ನಿಜಕ್ಕೂ ಕಂಬನಿ ಮಿಡಿಯುತ್ತಿದ್ದಾರೆ. ಆತನಿಂದ ನ್ಯಾಯ ದೊರಕಿಸಿಕೊಂಡ ಅನೇಕ ಬಡ ಮುಸ್ಲಿಂ ಅಮಾಯಕರು ತಮ್ಮ ಕಣ್ಣೀರನ್ನು ಒರೆಸಿದ ಮಹಾತ್ಮನನ್ನು ನೆನೆದು ಬಿಕ್ಕಳಿಸುತ್ತಿದ್ದಾರೆ. ಆತನೊಂದಿಗೆ ವಿವಿಧ ಸಾಮಾಜಿಕ, ರಾಜಕೀಯ ಹೋರಾಟಗಳಲ್ಲಿ ಭಾಗಿಯಾದವರೆಲ್ಲರೂ ಅಜ್ಮಿಯ ಸಾವಿನಿಂದ ಜರ್ಝರಿತರಾಗಿದ್ದಾರೆ.


2005ರಲ್ಲಿ ನಾನು ಮುಂಬಯಿಯಲ್ಲಿದ್ದಾಗ, ನಾನು ಹಾಜರಾಗಿದ್ದ ಮಾನವ ಹಕ್ಕು ಸಂಘಟನೆಯ ಒಂದು ಸಭೆಯಲ್ಲಿ ಆತನೂ ಹಾಜರಿದ್ದ. ಶಹೀದ್ ಅಜ್ಮಿಯ ಆ ಮುಖ ನನ್ನ ಸ್ಮೃತಿ ಪಟಲದಲ್ಲಿ ಹಾಗೇ ಅಚ್ಚೊತ್ತಿದೆ. ●


ಸಾಯಿಪ್ರಕಾಶ್: ಸಾಲದ ಸಂಕಟ ಸಾಯುವ ನಾಟಕ!

ಇದು ನಿರ್ದೇಶಕನೊಬ್ಬನ ದಡ್ಡತನವೋ ಅಥವಾ ಯೋಂಕೃತ ಅಪರಾಧವೋ ಗೊತ್ತಿಲ್ಲ, ಆದರೆ ಸರಿಸುಮಾರು ಚಿತ್ರಗಳನ್ನು ನಿರ್ದೇಶಿಸಿರುವ ಹಿರಿಯರೊಬ್ಬರು ತಾನು ಪಡಿಕೊಂಡ ಸಾಲಕ್ಕೆ ಹೆದರಿ ಆತ್ಮಹತ್ಯೆಯ ದಾರಿ ತುಳಿಯಬೇಕಾಗಿ ಬಂದಿದ್ದು ದುರಂತ ಎಂಬುದಂತೂ . ಹಾಗೆ ಆತ್ಮಹತ್ಯೆಗೆ ಪ್ರಯತ್ನಿಸಿದ ನಿರ್ದೇಶಕ-ನಿರ್ಮಾಪಕ ಯಿಪ್ರಕಾಶ್‌ರ ಬದುಕೇ ಈಗ ಹಾಳು ಬಾವಿಗೆ ಬಿದ್ದಿದೆ.

ತನ್ನ ಜೀವಮಾನದುದ್ದಕ್ಕೂ ಬರೀ ಸೆಂಟಿಮೆಂಟ್ ಗಳನ್ನೇ ನಿರ್ದೇಶಿಸಿ ಪ್ರೇಕ್ಷಕರ ಕರ್ಚೀಫು ಒದ್ದೆ ಮಾಡಿಸು ೕ ಬಂದಿರುವ ಸಾಯಿಪ್ರಕಾಶ್‌ಗೆ ತನ್ನ ಸುತ್ತಲ ಜನರಿಂದ ಗೆ ಸಿಂಪತಿ ಗಿಟ್ಟಿಸಿಕೊಳ್ಳಬೇಕು ಎಂಬುದೂ ಕರಾರು ಾಗೇ ತಿಳಿದಿದೆ. ಅದೇ ಮೊನ್ನೆ ನಡೆದ 'ಆತ್ಮಹತ್ಯೆ ಯತ್ನ' ಪ್ರಕರಣ.

ಚಿತ್ರರಂಗದಲ್ಲಿ ಸಾಯಿಪ್ರಕಾಶ್‌ಗೆ ಅನೇಕ ಸ್ನೇಹಿತರಿದ್ದಾರೆ. ಷ್ಟುಮಟ್ಟ ಹಬ್ಬಗಳಿಗೂ ಅವರ ಮನೆಗಳಿಗೆ ಗ್ರೀಟಿಂಗು, ಸೇಜುಗಳನ್ನು ಸಾಯಿ ಕಳಿಸುತ್ತಿರುತ್ತಾರೆ. ಕಳೆದ ಶನಿವಾರ ನ್ನು ಸ್ನೇಹಿತರದ್ದೊಂದು ಶಾರ್ಟ್ ಲಿಸ್ಟ್ ಮಾಡಿಕೊಂಡ ಯಿಪ್ರಕಾಶ್ "ನನಗೆ ಜೀವನದಲ್ಲಿ ಸಿಕ್ಕಾಪಟ್ಟೆ ಬೇಜಾ ಗಿದೆ. ಸಾಲ ಹೆಚ್ಚಾಗಿರುವುದರಿಂದ ನೆಮ್ಮದಿಯೇ ಇಲ್ಲ, ಗೆ ಬದುಕಲು ಇಷ್ಟ ಇಲ್ಲ. ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ" ಎಂದು ಮೆಸೇಜು ಬಿಟ್ಟಿದ್ದಾರೆ. ಆದರೆ ಯಿಪ್ರಕಾಶ್ ಒಂದೇ ಮೆಸೇಜನ್ನು ಎಲ್ಲರಿಗೂ ರ್ವರ್ಡ್ ಮಾಡಿಲ್ಲ. ಬದಲಿಗೆ ಒಬ್ಬೊಬ್ಬ ೂ ಒಂದೊಂದು ರೀತಿಯ ಮೆಸೇಜ್ ಸಿದ್ದಾರೆ. ಕುಣಿಗಲ್ ನಾಗಭೂಷಣ ಅವರಿಗೆ ಸಿರುವ ಮೆಸೇಜಿನಲ್ಲಿ ಮಾತ್ರ ನಿರ್ಮಾಪಕ ನು ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಉಳಿದಂತೆ ಬರ್ ಅಧ್ಯಕ್ಷೆ ಜಯಮಾಲಾ, ಜೋ ಮನ್, ಪಿ.ಆರ್.ಓ. ನಾಗೇಂದ್ರ ಸೇರಿದಂತೆ ಳಷ್ಟು ಮಂದಿಗೆ ಸಾಯಿಪ್ರಕಾಶ್ ಮೆಸೇಜ್ ್ ಮಾಡಿದ್ದಾರೆ.





ಅದಾದನಂತರ ಮೂರ್‍ನಾಲ್ಕು ನಿದ್ರೆ ಾತ್ರೆಗಳನ್ನು ನುಂಗಿದ ಸಾಯಿಪ್ರಕಾಶ್ ಸೀದಾ ಯನಗರ ಆಸ್ಪತ್ರೆಗೆ ತಾವೇ ನಡೆದುಕೊಂಡೇ ೇಗಿ ಅಡ್ಮಿಟ್ ಆಗಿದ್ದಾರೆ.

ಅನುಮಾನ ಹುಟ್ಟುವುದೇ ಇಲ್ಲಿ.

ಯಾಕೆಂದರೆ ನಿಜಕ್ಕೂ ಸಾಯಿಪ್ರಕಾಶ್‌ಗೆ ಯುವ ಬಯಕೆ ಇರಲಿಲ್ಲ. ಬದಲಾಗಿ ಹತ್ಯೆಗೆ ಯತ್ನಿಸಿದಂತೆ ಮಾಡಿ ತನ್ನನ್ನು ಬರಿಕೊಂಡಿರುವ ಸಾಲಗಾರರಿಂದ ಷ್ಟು ಕರುಣೆ ಮತ್ತು ಸಮಯದ ಅವಕಾಶ, ಜೊತೆಗೆ ಧ್ಯಮದವರ ಗಮನ ಸೆಳೆದು ಅವರಿಂದ ಸಹಾಯದ ಪಡೆಯುವುದೇ ಸಾಯಿಯ ಲೆಕ್ಕಾಚಾರವಾಗಿತ್ತು.

ಸೋಲಿನ ಸುಳಿಯಲ್ಲಿ

2007ರ ತನಕ ತವರಿಗೆ ಬಾ ತಂಗಿ, ಅಣ್ಣ ತಂಗಿಯಂಥ ಪರ್ ಹಿಟ್ ಚಿತ್ರಗಳನ್ನು ಅಲ್ಲಲ್ಲಿ ನೀಡುತ್ತಾ ಬಂದ ಯಿಪ್ರಕಾಶ್ 2008ರಲ್ಲಿ ಏಕ್‌ದಮ್ ಲತ್ತೆ ಹೊಡೆಯಲು ರಂಭವಾದರು. 'ಒಡಹುಟ್ಟಿದವಳು', 'ಪರೋಡಿ', ಗಾದಿ', 'ರೋಡ್ ರೋಮಿಯೋ', 'ಹೆತ್ತರೆ ಹೆಣ್ಣನ್ನೇ ಬೇಕು' ಮತ್ತು 'ಲವಕುಶ' .. ಹೀಗೆ ಸಾಯಿ ನಿರ್ದೇಶನದ ಹುತೇಕ ಚಿತ್ರಗಳ ಹತ್ಯಾಕಾಂಡ ಆರಂಭವಾಯಿತು. ರಿಟೈರ್ಡು ನಟಿಯರು ನಟಿಸಿರುವ 'ನವಶಕ್ತಿವೈಭವ' ಭಕ್ತಿ ಪ್ರಧಾನ ಚಿತ್ರವೂ ಕೈಕೊಟ್ಟಿದ್ದು ಸಾಯಿಗೆ ಗಲಾರದ ತುತ್ತಾಯಿತು.

ಸಾಯಿಪ್ರಕಾಶ್ ಚಿತ್ರಗಳು ಒಂದರಹಿಂದೆ ಒಂದು ಹರಹರಾ ಎಂದು ಪಕ್ಕೆ ಮುರಿದುಕೊಂಡು ತ್ತಿದ್ದಂತೇ ಇಲ್ಲಿನ ಹೀರೋಗಳೂ ಸಾಯಿ ಸಿನಿಮಾ ರೆ ಪಾಕರಿಸಲು ಶುರು ಮಾಡಿದರು. ಪ್ರೇಕ್ಷಕರು ಾ ಸಾಯಿಯ ಸಿನೆಮಾಗಳನ್ನು ನೋಡಿ, ಕಣ್ಣೀರೊರೆಸಲು ಕರ್ಚೀಫಿನಲ್ಲಿ ಸಿಂಬಳ ಸೀಟಿಕೊಳ್ಳಲು ಆರಂಭಿಸಿದರು. ಇತ್ತೀಚೆಗೆ ಬಿಡುಗಡೆಯಾದ 'ದೇವರು ಕೊಟ್ಟ ತಂಗಿ'ಯ ನಿರ್ದೇಶನದೊಂದಿಗೆ ನಿರ್ಮಾಣವನ್ನೂ ಸ್ವತಃ ಸಾಯಿಪ್ರಕಾಶ್ ಅವರೇ ಮಾಡಿದ್ದರು. 'ತವರಿಗೆ ಬಾ ತಂಗಿ'ಯಂತೆ ಈ ಸಿನೆಮಾ ಸೂಪರ್ ಹಿಟ್ ಆಗುತ್ತೆ ಎಂಬುದು ಸಾಯಿಯ ನಂಬುಗೆಯಾಗಿತ್ತು. ಆದರೆ ಈ ಸಿನಿಮಾ ನೆಟ್ಟಗೆ ಒಂದು ವಾರವೂ ಥಿಯೇಟರಿನಲ್ಲಿ ನಿಲ್ಲಲಿಲ್ಲ. ಪರಿಣಾಮವಾಗಿ ಸಾಯಿಪ್ರಕಾಶ್ ಆರ್ಥಿಕವಾಗಿ ಸಂಪೂರ್ಣ ನೆಲಕಚ್ಚಿಬಿಟ್ಟರು. 'ಚೊಂಬು ಕೊಟ್ಟ ತಂಗಿ'ಯ ದಯೆಯಿಂದ ಮೂರು ಕೋಟಿಗೂ ಹೆಚ್ಚು ಮೊತ್ತದ ಸಾಲಕ್ಕೆ ಸಾಯಿಪ್ರಕಾಶ್ ತಲೆಕೊಡಬೇಕಾಗಿ ಬಂತು.

ಯಾರೂ ಕೈ ಹಿಡಿಯಲಿಲ್ಲ

ಸದ್ಯ ಒಂದಿಷ್ಟು ಮಾರ್ಕೆಟ್ ಉಳಿಸಿಕೊಂಡಿರುವ ಶಿವರಾಜ್‌ಕುಮಾರ್, ಸುದೀಪ್, ಉಪೇಂದ್ರ ಹೀಗೆ ಬಹಳಷ್ಟು ಹೀರೋಗಳ ಚಿತ್ರಗಳನ್ನು ನಿರ್ದೇಶಿಸಿರುವ ಸಾಯಿಪ್ರಕಾಶ್ ಇತ್ತೀಚೆಗೆ ಇದೇ ಹೀರೋಗಳ ಕಾಲ್‌ಶೀಟ್‌ಗಾಗಿ ಹರಸಾಹಸ ಮಾಡಿದ್ದರು. ಆದರೂ ಯಾವ ನಟನೂ ಸಾಯಿಯ ಕೋರಿಕೆಗೆ ಕೈ ಜೋಡಿಸಲೇ ಇಲ್ಲ. ಕೆಲವೇ ದಿನಗಳ ಹಿಂದೆ ಸುದೀಪ್ ಬಳಿ ಹೋಗಿ ಕಾಲ್‌ಶೀಟ್ ಕೇಳಿದ್ದಾರೆ. ಸುದೀಪ್ "ಇಲ್ಲ, ಸದ್ಯಕ್ಕೆ ನನ್ನ ಡೇಟ್ಸ್ ಇಲ್ಲ, ಮುಂದೆ ನೋಡೋಣ" ಎಂದು ಶ್ರಾವಣಕ್ಕೆ ಬಂದ ಪುಂಗಿ ದಾಸನನ್ನು ಕಳಿಸುವಂತೆ ಕಳುಹಿಸಿದ್ದಾರೆ.

ಶಿವರಾಜ್ ಕುಮಾರ್, ಉಪೇಂದ್ರ ಮುಂತಾದ ನಟರ ಕಾಲ್‌ಶೀಟ್ ಕೂಡಾ ಸಾಯಿಗೆ ದೊರೆತಿಲ್ಲ. ಕೊನೆಗೆ ತಮ್ಮ ಸಂಕಷ್ಟವನ್ನು ಸಹಿಸಲಾಗದೆ ಅಂಬರೀಶ್ ಬಳಿ ಹೋಗಿ ಯಾರಾದರೊಬ್ಬ ಪಾಪ್ಯು ಲರ್ ನಟನ ಡೇಟ್ಸ್ ಕೊಡಿಸಿಕೊಡಿ ಎಂದು ಅಂಗಲಾಚಿದ್ದಾರೆ ಸಾಯಿಪ್ರಕಾಶ್.

ಈ ಹಿಂದೆ ಸಾಯಿಯೊಂದಿಗೆ ಕೆಲಸ ಮಾಡಿದ್ದ ಅಂಬರೀಶ್ ಹಳೇ ವಿಶ್ವಾಸಕ್ಕೆ ಕಟ್ಟುಬಿದ್ದು ಒಂದಷ್ಟು ಹೀರೋಗಳಿಗೆ ಫೋನ್ ಮಾಡಿ "ನಮ್ ಸಾಯಿಪ್ರಕಾಶ್‌ಗೆ ಡೇಟ್ಸ್ ಕೊಟ್ಟು ಹೆಲ್ಪ್ ಮಾಡ್ರಪ್ಪಾ.." ಎಂದಿದ್ದಾರೆ. ಸ್ವತಃ ರೆಬೆಲ್ ಸ್ಟಾರ್ ಅಂಬರೀಶ್ ಖುದ್ದು ಸಾಯಿಯ ಬೆನ್ನಿಗೆ ನಿಂತರೂ ಸದ್ಯದ ಓಡುವ ಕುದುರೆಗಳಾವೂ ಸಾಯಿಗೆ ಸಾಥ್ ನೀಡಿಲ್ಲ.

ಈ ಹೊತ್ತಿಗೆ ಸಾಯಿಪ್ರಕಾಶ್‌ಗೆ "ನನ್ನ ಸಿನಿಮಾ ಜೀವನ ಮುಗಿದೇ ಹೋಯಿತು. ಇನ್ಯಾರೂ ನನ್ನ ಸಹಾಯಕ್ಕೆ ಬರಲಾರರು" ಎಂಬ ಹತಾಶೆ ಕಾಡಲು ಶುರುಮಾಡಿದೆ.

ಆಗಲೇ ಬಂದಿದ್ದು ಮೆಸೇಜ್!


ಸಾಲಗಾರರಿಂದ ತಪ್ಪಿಸಿಕೊಳ್ಳಲು ಫೋನ್ ರಿಸೀವ್ ಮಾಡದೇ, ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದ ಸಾಯಿಪ್ರಕಾಶ್ ಮೊಬೈಲ್‌ಗೆ ಅದೇ ಹೊತ್ತಿಗೆ ಒಂದು ಎಸ್‌ಎಂಎಸ್ ಬಂತು. ಅದು ಸಾಯಿಪ್ರಕಾಶ್‌ಗೆ ಸಾಲ ಕೊಟ್ಟ ಫೈನಾನ್ಶಿಯರ್ ಒಬ್ಬರದ್ದು.

ಆ ಮೆಸೇಜಿನಲ್ಲಿ "ನಮಗೆ ನಮ್ಮ ದುಡ್ಡು ಬೇಕು. ನಿಮ್ಮ ಜೀವನ ಮುಖ್ಯ ಅಲ್ಲ. ನೀವು ಸತ್ತರೂ ಪರವಾಗಿಲ್ಲ ನಮ್ಮ ದುಡ್ಡು ಮುಖ್ಯ' ಎಂದಿತ್ತಂತೆ.

ಮೊದಲೇ ಸೆಂಟಿಮೆಂಟು ನಿರ್ದೇಶಕ ಸಾಯಿಪ್ರಕಾಶ್ ಈ ಮೆಸೇಜು ನೋಡುತ್ತಿದ್ದಂತೇ ಭಾವಾವೇಶಕ್ಕೊಳಗಾಗಿ ಇಲ್ಲದ ಯೋಚನೆಗಳನ್ನು ತಲೆಗೆ ಹಚ್ಚಿಕೊಂಡಿದ್ದಾರೆ.


ಗಡಿಬಿಡಿ ಸಾಯ್

ಒಬ್ಬ ನಿರ್ದೇಶಕನಿಗೆ ಒಂದು ಸಿನಿಮಾ ಮುಗಿಸಲು ಏನಿಲ್ಲವೆಂದರೂ ಐದು ತಿಂಗಳ ಕಾಲಾವಕಾಶ ಬೇಕು. ಆದರೆ ಗಡಿಬಿಡಿ ಸಾಯಿಪ್ರಕಾಶ್ ತನ್ನ ಸೆಂಟಿಮೆಂಟಿನ ಕ್ವಾಲಿಫಿಕೇಶನ್ ಜೊತೆಗೆ ರಿಮೇಕ್ ಕಲೆಯನ್ನು ಬೆಸೆಯುತ್ತಾ ತಿಂಗಳಿಗೆರಡರಂತೆ ಸಿನಿಮಾ ಸುತ್ತಿ ಬಿಸಾಡುತ್ತಿದ್ದ ಮನುಷ್ಯ. ಸಿನಿಮಾದ ಹಾಡು, ಫೈಟಿಂಗ್ ದೃಶ್ಯಗಳು ಚಿತ್ರೀಕರಣ



ಗೊಳ್ಳುವಾಗ ಆ ದಿಕ್ಕಿನತ್ತ ತಲೆ ಹಾಕದ ಸಾಯಿಪ್ರಕಾಶ್ ಎಡಿಟಿಂಗ್, ರೀರೆಕಾರ್ಡಿಂಗ್, ಡಬ್ಬಿಂಗ್ ಯಾವುದಕ್ಕೂ ಹೋಗುವ ಅಭ್ಯಾಸವನ್ನೇ ಇಟ್ಟುಕೊಂಡಿಲ್ಲ.

ಹೀಗೆ ಒಟ್ಟೊಟ್ಟಿಗೆ ಹಲವಾರು ಸಿನಿಮಾಗಳನ್ನು ನಿರ್ದೇಶಿಸುತ್ತಿದ್ದ ಸಾಯಿಪ್ರಕಾಶ್‌ರ 'ಸಿನಿಮಾ ಫ್ಯಾಕ್ಟರಿ' ಎಷ್ಟು ದೊಡ್ಡದಾಗಿತ್ತು ಗೊತ್ತೆ? ಒಂದು ಕಾಲದಲ್ಲಿ ಸಾಯಿಪ್ರಕಾಶ್ ಕೈ ಕೆಳಗೆ ಐದು ತಂಡಗಳಿದ್ದವು. ಅವುಗಳಲ್ಲಿ ಕಲಾಗಂಗೋತ್ರಿ ಮಂಜು, ಚಂದ್ರು ದೊಡ್ಡಮನಿ, ಲಿಂಗರಾಜ ಕಗ್ಗಲ್ ಮತ್ತು ಶಶಿಧರ್ ಇದ್ದರಲ್ಲದೆ



ಅವರೆಲ್ಲರಿಗೂ ತಲಾ ಇನ್ನೈದು ಮಂದಿ ಸಹಾಯಕರನ್ನು ನೀಡಿದ್ದರು ಸಾಯಿಪ್ರಕಾಶ್. ಈ ಟೀಂಗಳು ವರ್ಷವಿಡೀ ಕೂತು ಕಥೆ, ಚಿತ್ರಕಥೆ, ಸಂಭಾಷಣೆಗಳನ್ನು ರೆಡಿ ಮಾಡುತ್ತಿದ್ದವು.

ಹೀಗೆ ಸಿದ್ಧಗೊಂಡ ಸೆಂಟಿಮೆಂಟ್ ಸ್ಕ್ರಿಪ್ಟ್‌ಗಳನ್ನು ಹಿಡಿದ ಸಾಯಿಪ್ರಕಾಶ್ ಟಾಯ್ಲೆಟ್ಟಿಗೆ ಹೋಗಿ ಬಂದಷ್ಟು ಸುಲಭವಾಗಿ ಒಂದಾದ ಮೇಲೊಂದರಂತೆ ಸಿನಿಮಾಗಳನ್ನು ನಿರ್ದೇಶಿಸಿಬಿಡುತ್ತಿದ್ದರು.

ಕಾರ್ಮಿಕರ ಪಾಲಿನ ದೈವ

ಸಾಯಿಪ್ರಕಾಶ್ ನಿರ್ದೇಶನದ ಸಿನೆಮಾಗಳಿಂದ ಒಂದಷ್ಟು ಮಂದಿ ಕಾಸು ಮಾಡಿಕೊಂಡಿರಬಹುದು. ಇನ್ನೂ ಒಂದಷ್ಟು ಮಂದಿ ಹೂಡಿದ ಹಣವನ್ನೆಲ್ಲಾ ಕಳೆದುಕೊಂಡು ಬಿಕಾರಿಗಳಾಗಿರಬಹುದು. ಆದರೆ ಕನ್ನಡ ಚಿತ್ರರಂಗದ ಕಾರ್ಮಿಕ ವಲಯ ಮಾತ್ರ ಸಾಯಿಪ್ರಕಾಶ್‌ರನ್ನು ಕಂಡರೆ ಕೈಯೆತ್ತಿ ಮುಗಿಯುತ್ತದೆ.

ಯಾಕೆಂದರೆ, ಚಿತ್ರರಂಗದಲ್ಲಿ ಕೆಲಸವೇ ಇಲ್ಲದೆ ಕಾರ್ಮಿಕರ ಬದುಕು ಮೂರಾಬಟ್ಟೆಯಾಗಿದ್ದ ಸಂದರ್ಭದಲ್ಲೆಲ್ಲಾ ಹಗಲೂರಾತ್ರಿ ಸಿನಿಮಾ ಮಾಡಿ, ಕಾರ್ಮಿಕರಿಗೆ ಕೈತುಂಬಾ ಕೆಲಸ ನೀಡಿದ್ದವರು ಸಾಯಿ. ಅಷ್ಟೇ ಅಲ್ಲ, ಎಷ್ಟೇ ತಂತ್ರಜ್ಞರ ಕೊರತೆಯಿದ್ದರೂ ಈತ ಪರಭಾಷೆಯ ಟೆಕ್ನಿಷಿಯನ್ನುಗಳನ್ನು ಕರೆಸಿಕೊಂಡವರಲ್ಲ.

ಕಳೆದ ಎರಡು ದಶಕಗಳಿಂದ ತನ್ನೊಟ್ಟಿಗೆ ಕೈಜೋಡಿಸಿ ದುಡಿದೂ ಬಾಡಿಗೆ ಮನೆಗಳಲ್ಲಿರುವ ತಮ್ಮ ಅಸೋಸಿಯೇಟ್ ಡೈರೆಕ್ಟರುಗಳಾದ ಲಿಂಗರಾಜ ಕಗ್ಗಲ್, ಶಶಿಧರ್ ಮತ್ತು ಪಿಆರ್‌ಓ ನಾಗೇಂದ್ರ ಅವರುಗಳು ಈಗಲೂ ಬಾಡಿಗೆ ಮನೆಯಲ್ಲಿರುವುದನ್ನು ಕಂಡು ಸಾಯಿ ಮರುಗಿದ್ದರು. ಅದಕ್ಕೇ 'ದೇವರುಕೊಟ್ಟ ತಂಗಿ' ಬಿಡುಗಡೆಯಾದ ನಂತರ ಕಡೇಪಕ್ಷ ಅವರೆಲ್ಲರಿಗೂ ವಾಸವಿರಲು ಭೋಗ್ಯದ ಮನೆಯನ್ನಾದರೂ ಮಾಡಿಕೊಡುವ ಬಯಕೆ ಸಾಯಿಪ್ರಕಾಶ್‌ರದ್ದಾಗಿತ್ತು.

ಆದರೆ 'ದೇವರು ಕೊಟ್ಟ ತಂಗಿ' ಈ ಉದ್ದೇಶವನ್ನು ನೀರುಪಾಲು ಮಾಡಿತಲ್ಲದೆ ಸಾಯಿಪ್ರಕಾಶ್ ಅವರ ಕೈಲಿದ್ದ ಅಷ್ಟಿಷ್ಟು ಹಣವನ್ನೂ ನುಂಗಿ ನೀರು ಕುಡಿದಿತ್ತು. ಪರಿಣಾಮವಾಗಿ ತನ್ನ ತಂಡದವರಿಗೆ ಭೋಗ್ಯಕ್ಕೆ ಮನೆ ಇರಲಿ ಸ್ವತಃ ಸಾಯಿಯೇ ತಮ್ಮ ನಾಲ್ಕು ಸೈಟುಗಳನ್ನೂ ಮಾರಿಕೊಂಡು ಈಗ ವಾಸವಿರುವ ಮನೆಯನ್ನೂ ಕಳೆದುಕೊಳ್ಳುವ ಹಂತಕ್ಕೆ ಬಂದು ತಲುಪಿದರು.

ದುಡಿದಿದ್ದಾದರೂ ಎಷ್ಟು?

ಇವತ್ತಿನ ದಿನದಲ್ಲಿ ಒಂದೇ ಒಂದು ಹಿಟ್ ಚಿತ್ರವನ್ನು ನೀಡಿದ ಪಡಪೋಸಿ ನಿರ್ದೇಶಕರೆಲ್ಲಾ ತಮ್ಮ ಸಂಭಾವನೆಯನ್ನು ಕೋಟಿಗೆ ಏರಿಸಿ ಕುಳಿತಿದ್ದರೆ, ಎಪ್ಪತ್ತೈದು ಎಂಭತ್ತು ಸಿನೆಮಾಗಳನ್ನು ನಿರ್ದೇಶಿಸಿರುವ ಸಾಯಿಪ್ರಕಾಶ್ ಪಡೆದ ಅತಿ ಹೆಚ್ಚು ಸಂಭಾವನೆಯೆಂದರೆ ಐದು ಲಕ್ಷ. ಅದೂ ಇತ್ತೀಚೆಗೆ ಬಂದ ಉಪೇಂದ್ರನ 'ಪರೋಡಿ' ಸಿನೆಮಾಕ್ಕೆ. ಉಳಿದಂತೆ ಸಾಯಿಪ್ರಕಾಶ್ ಸಂಭಾವನೆ 50 ಸಾವಿರ, ಒಂದು ಲಕ್ಷ, ಎರಡು ಲಕ್ಷದ ಗಡಿ ದಾಟಿದ್ದೇ ಇಲ್ಲ.

ಹೀಗೆ ಕಷ್ಟಪಟ್ಟು ದುಡಿದ ಹಣದಲ್ಲಿ ಬೆಂಗಳೂರಿನಲ್ಲಿ ನಾಲ್ಕೈದು ಸೈಟು, ವಾಸಿಸಲು ಒಂದು ಮನೆ ನಿರ್ಮಿಸಿಕೊಂಡಿದ್ದ ಸಾಯಿಪ್ರಕಾಶ್ ಉಳಿದ ಎಲ್ಲಾ ದುಡ್ಡನ್ನೂ ಚಿತ್ರ ನಿರ್ಮಾಣಕ್ಕೆ ಸುರಿದಿದ್ದರು. ದುರಾದೃಷ್ಟಕ್ಕೆ ಇವರು ನಿರ್ಮಿಸಿದ ಬಹುತೇಕ ಚಿತ್ರಗಳು ಬಾಕ್ಸಾಫೀಸಿನಲ್ಲಿ ನೆಗೆದುಬಿದ್ದು ನೆಲ್ಲೀಕಾಯಿಯಾದವು.

ಶಿವಣ್ಣ ಮನಸ್ಸು ಮಾಡಿದರೆ....

ಮೊನ್ನೆ ಸಾಯಿಪ್ರಕಾಶ್ ನಿದ್ರೆ ಗುಳಿಗೆ ನುಂಗಿ ಆಸ್ಪತ್ರೆಯ ಬೆಡ್‌ಮೇಲೆ ತೂಕಡಿಸುತ್ತಿದ್ದಂತೇ ಅಲ್ಲಿಗೆ ಓಡೋಡಿ ಬಂದ ಶಿವರಾಜ್ ಕುಮಾರ್ "ಏನೂ ವರಿ ಮಾಡ್ಕೊಬೇಡಿ ಅಂಕಲ್. ಏನಾದ್ರೂ ವ್ಯವಸ್ಥೆ ಮಾಡೋಣ" ಎಂದು ಸಾಂತ್ವನ ಹೇಳಿಹೋಗಿ ದ್ದಾರೆ.

ಇತ್ತೀಚಿನ ದಿನಗಳಲ್ಲಿ ಸಾಯಿಪ್ರಕಾಶ್‌ರಿಂದ ಯಾವ ಹೀರೋಗಳಿಗೆ ಎಷ್ಟು ಪ್ರಯೋಜನವಾಗಿದೆಯೋ ಗೊತ್ತಿಲ್ಲ. ಆದರೆ ಹಿಂದೊಮ್ಮೆ ಸೋತು ಸುಣ್ಣವಾಗಿದ್ದ ಶಿವರಾಜ್ ಕುಮಾರ್ ಅವರಿಗೆ ಒಂದು ರೀತಿಯ ಮರುಜೀವ ನೀಡಿದ್ದು ಮಾತ್ರ ಇದೇ ಸಾಯಿಪ್ರಕಾಶ್. ಯಾಕೆಂದರೆ 2007ರಲ್ಲಿ ಬಿಡುಗಡೆಗೊಂಡ 'ತವರಿಗೆ ಬಾ ತಂಗಿ' ಚಿತ್ರಕ್ಕೂ ಮುನ್ನ ಶಿವರಾಜ್‌ಕುಮಾರ್ ನಟಿಸಿದ್ದ ಬರೋಬ್ಬರಿ 18 ಚಿತ್ರಗಳು ಮುಂಡಾಮೋಚಿಕೊಂಡಿದ್ದವು.

ಇನ್ನೇನು ಶಿವಣ್ಣನ ಸಿನಿಮಾ ಕೆರಿಯರ್ ಮುಗಿದೇ ಹೋಯ್ತು ಎಂದು ಇಂಡಸ್ಟ್ರಿ ತೀರ್ಮಾನಿಸಿಬಿಟ್ಟಿತ್ತು. ಆ ಸಮಯದಲ್ಲಿ ಧುತ್ತನೆ ಎದ್ದು ಬಂದ 'ತವರಿಗೆ ಬಾ ತಂಗಿ' ಶಿವಣ್ಣನ ವೃತ್ತಿಜೀವನಕ್ಕೆ ಮರುಜನ್ಮ ನೀಡಿತ್ತು. ಈ ಒಂದೇ ಒಂದು ಚಿತ್ರದ ಯಶಸ್ಸು ಶಿವಣ್ಣನಿಗೆ ಕನಿಷ್ಠ ಹತ್ತು ಹೊಸ ಚಿತ್ರಗಳ ಅವಕಾಶವನ್ನು ತಂದುಕೊಟ್ಟಿತ್ತು.

ಹೀಗಾಗಿ ವ್ಯಾವಹಾರಿಕವಾಗಿ ಅಲ್ಲದಿದ್ದರೂ, ಮಾನವೀಯ ದೃಷ್ಟಿಯಿಂದ ಶಿವಣ್ಣನ ಮೇಲೆ ಸಾಯಿಗೆ ನೆರವಾಗುವ ನೈತಿಕ ಜವಾಬ್ದಾರಿ ಹೆಚ್ಚಿದೆ. ತಮ್ಮದೇ ಔಟ್‌ಡೋರ್ ಯುನಿಟ್‌ಗಳೊಂದಿಗೆ ತಮ್ಮ ಒಂದಷ್ಟು ದಿನದ ಕಾಲ್‌ಶೀಟ್‌ಗಳನ್ನು ಕೊಟ್ಟರೆ ನಿಜಕ್ಕೂ ಸಾಯಿಪ್ರಕಾಶ್‌ಗೆ ಕಾಯಕಲ್ಪ ಒದಗುತ್ತದೆ.

ಇನ್ನು ಮುಂದಾದರೂ ಸಾಯಿಪ್ರಕಾಶ್ ಅವರು ಜೋಪಾನವಾಗಿ ಸಿನಿಮಾಗಳನ್ನು ಮಾಡುವಂತಾಗಲಿ, ಮತ್ತೆ ಯಶಸ್ಸನ್ನು ಕಾಣುವಂತಾಗಲಿ, ಎಂದೂ ಹತಾಶರಾಗಿ ಆತ್ಮಹತ್ಯೆಗೆ ಪ್ರಯತ್ನಿಸದಂತಾಗಲಿ ಎಂಬುದು ಎಲ್ಲರ ಆಶಯ...

● ಅರುಣ್ ಕುಮಾರ್.ಜಿ


ಅವತ್ತೇ ಹೆಣವಾಗಬೇಕಿತ್ತು

ಆಂಧ್ರವಾಲಾ ಸಾಯಿಪ್ರಕಾಶರ ಮೂಲ ಹೆಸರು ಸಾಯಿರೆಡ್ಡಿ. ತೆಲುಗಿನಲ್ಲಿ ಆಕ್ಷನ್ ಚಿತ್ರಗಳಿಗೆ ಖ್ಯಾತಿ ಪಡೆದಿದ್ದ ಕೆ.ಎಸ್.ಆರ್.ದಾಸ್ ಅವರ ಬಹುತೇಕ ಚಿತ್ರಗಳಿಗೆ ಸಾಯಿಯೇ ಅಸೋಸಿಯೇಟ್ ಆಗಿದ್ದರು. ನಂತರ ಬೆಂಗಳೂರಿಗೆ ಬಂದ ಸಾಯಿ ಒಂದಷ್ಟು ಸೆಂಟಿಮೆಂಟ್ ಚಿತ್ರಗಳನ್ನು ನಿರ್ದೇಶಿಸಲು ಆರಂಭಿಸಿದರು.

ಇದೇ ಸಂದರ್ಭದಲ್ಲಿ ಸಾಯಿಪ್ರಕಾಶ್‌ಗೆ ಅಂದಿನ ಭೂಗತ ಪಾತಕಿ ಆಯಿಲ್ ಕುಮಾರ್‌ನ ಪ್ರೇಯಸಿಯ ಪರಿಚಯವಾಯಿತು. ತನ್ನ ಪ್ರೇಯಸಿಯನ್ನೇ ಸಾಯಿಪ್ರಕಾಶ್ ಪಟಾಯಿಸಲು ಯತ್ನಿಸಿದ್ದು ಖುದ್ದು ಆಯಿಲ್ ಕುಮಾರನಿಗೇ ಗೊತ್ತಾಗಿ ಆತ ಸಾಯಿಯ ವಿರುದ್ಧ ಕತ್ತಿ ಮಸೆಯಲು ಆರಂಭಿಸಿದ. 'ಆ ತೆಲುಗು ದೊಂಗ ನನ್ನವಳ ಕತ್ತರಿಸಿ ಬಿಡ್ತೀನಿ' ಎಂದು ಸಾಯಿಯ ರುಂಡ ತೆಗೆಯಲು ಆಯಿಲ್ ಕುಮಾರ್ ಸ್ಕೆಚ್ ರೂಪಿಸಿಯೇಬಿಟ್ಟಿದ್ದ.


ಈ ವಿಚಾರ ಸಾಯಿಪ್ರಕಾಶ್‌ಗೆ ಗೊತ್ತಾಗಿದ್ದೇ ತಡ, ರಾತ್ರೋರಾತ್ರಿ ಬೆಂಗಳೂರು ಬಿಟ್ಟು ಆಂಧ್ರಕ್ಕೆ ಪಲಾಯನ ಗೈದ. ನಂತರ ಮತ್ತೊಬ್ಬ ಕುಖ್ಯಾತ ಪಾತಕಿಗೆ ಕೈಗೆ ಸಿಕ್ಕು ಆಯಿಲ್ ಕುಮಾರನೇ ಪ್ರಾಣಬಿಟ್ಟ. ಆ ನಂತರವೇ ಕರ್ನಾಟಕಕ್ಕೆ ಬಂದ ಸಾಯಿಪ್ರಕಾಶ್ ಇಲ್ಲಿ ತನ್ನ ಎರಡನೇ ಇನ್ನಿಂಗ್ಸ್ ಆರಂಭಿಸಿದ್ದು.

ಮಂಡ್ಯದ ಪಾತಕಿ ರಫೀವುಲ್ಲಾನ ಹಿಂದೆ ಯಾರ್ಯಾರು?



ರಫೀವುಲ್ಲಾನ ಪಾಪದ ಕೊಡ ತುಂಬಿ ಬಂದಿತ್ತು. ಅದಕ್ಕಿಂತಲೂ ಮಿಗಿಲಾಗಿ ಆತನ ಕೀಚಕ ಸಹೋದರರ ದುರಾಶೆ ಆತನನ್ನು ಬಲಿತೆಗೆದುಕೊಂಡಿತು. ರಫೀವುಲ್ಲಾನ ಹತ್ಯೆಗೆ ಯಾರೇನೇ ಕಾರಣವೆಂದರೂ ಆತನ ಅಣ್ಣಂದಿರ ನಟೋರಿಟಿ, ಅವರು ತಮ್ಮೆಲ್ಲಾ ಸ್ವಾರ್ಥಕ್ಕೆ ಆತನನ್ನು ಬಳಸಿಕೊಂಡ ರೀತಿ ಮತ್ತು ಸ್ವತಃ ರಫೀವುಲ್ಲಾ ಹಿಡಿದಿದ್ದ ದಾರಿ ಆತನನ್ನು ಹೀನಾಯವಾಗಿ ಕೊಲೆಯಾಗುವಂತೆ ಮಾಡಿಬಿಟ್ಟವು.





ಕೊಲೆಯಾದ ಮಂಡ್ಯದ ಪಾತಕಿ ರಫೀವುಲ್ಲಾನ ವಿರುದ್ಧ ಊರಿಗೆ ಊರೇ ಕೈಜೋಡಿಸಿತ್ತೆ? ಆತನ ಅಣ್ಣಂದಿರ ಅಟ್ಟಹಾಸ, ನೊಂದವರ ಹಿಡಿಶಾಪ ಮತ್ತು ಮುಂಡಾಯಸಿಕೊಂಡವರ ಆಕ್ರೋಶಗಳೆಲ್ಲವೂ ಒಟ್ಟೊಟ್ಟಿಗೆ ಫಲಿಸದೇ ಹೋಗಿದ್ದರೆ ರಫೀವುಲ್ಲಾ ಏಕಾದರೂ ಕೊಲೆಯಾಗುತ್ತಿದ್ದ?

ಇದು ಸದ್ಯ ಮಂಡ್ಯದ ಸಂದಿಗೊಂದಿಗಳಲ್ಲಿ ಜನ ಪಿಸುಗುಡುತ್ತಿರುವುದರ ಸ್ಯಾಂಪಲ್ಲಷ್ಟೇ.

ರಫೀವುಲ್ಲಾನ ಪಾಪದ ಕೊಡ ತುಂಬಿ ಬಂದಿತ್ತು. ಅದಕ್ಕಿಂತಲೂ ಮಿಗಿಲಾಗಿ ಆತನ ಕೀಚಕ ಸಹೋದರರ ದುರಾಶೆ ಆತನನ್ನು ಬಲಿತೆಗೆದುಕೊಂಡಿತು. ರಫೀವುಲ್ಲಾನ ಹತ್ಯೆಗೆ ಯಾರೇನೇ ಕಾರಣವೆಂದರೂ ಆತನ ಅಣ್ಣಂದಿರ ನಟೋರಿಟಿ, ಅವರು ತಮ್ಮೆಲ್ಲಾ ಸ್ವಾರ್ಥಕ್ಕೆ ಆತನನ್ನು ಬಳಸಿಕೊಂಡ ರೀತಿ ಮತ್ತು ಸ್ವತಃ ರಫೀವುಲ್ಲಾ ಹಿಡಿದಿದ್ದ ದಾರಿ ಆತನನ್ನು ಹೀನಾಯವಾಗಿ ಕೊಲೆಯಾಗುವಂತೆ ಮಾಡಿಬಿಟ್ಟವು.

ರಫೀವುಲ್ಲಾ ಹೇಳಿಕೇಳಿ ಮಂಡ್ಯದ ಕುಖ್ಯಾತ ಅಕ್ಕಿ ಸ್ಮಗ್ಲರ್. ಮಂಡ್ಯದ ಸುತ್ತಮುತ್ತ ತಲೆ ಎತ್ತಿದ ಅನೇಕ ರೈಸ್‌ಮಿಲ್‌ಗಳ ಮಾಲೀಕರಿಗೆ ಆತ ಲಕ್ಷಾಂತರ ರೂಪಾಯಿ ವಂಚಿಸಿದ್ದ. ಯಾವುದೋ ಸೈಕಲ್ ಶಾಪ್ ಹೆಸರಲ್ಲಿ ನಕಲಿ ಕಂಪೆನಿಗಳನ್ನು ಹುಟ್ಟುಹಾಕುತ್ತಿದ್ದ. ಆ ಹೆಸರಲ್ಲಿ ಅಕ್ಕಿ ಖರೀದಿಸಿ ಅದನ್ನು ಕೇರಳಕ್ಕೆ ಸಾಗಿಸುತ್ತಿದ್ದ. ಹೀಗೆ ಸಾಗಿಸಿದ ಅಕ್ಕಿಗೆ ಶೇ. 2 ರಷ್ಟು ತೆರಿಗೆಯನ್ನು ಸರ್ಕಾರಕ್ಕೆ ಕಟ್ಟಬೇಕಲ್ಲ; ಅದರ ವಸೂಲಿಗೆಂದು ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಗಳು ಬಂದರೆ ಅಲ್ಲಿರುತ್ತಿದ್ದದ್ದು ಕಿತ್ತು ಹೋದ ಸೈಕಲ್ ಶಾಪು!

ಹೀಗೆ ಬೋಗಸ್ ರಸೀದಿ, ಬೋಗಸ್ ಏಜೆನ್ಸಿಗಳ ಮೂಲಕ ಅಕ್ಕಿ ದಂಧೆಗೆ ನಿಂತ ರಫೀಕ್ ಕೇವಲ ಸರ್ಕಾರಕ್ಕಷ್ಟೇ ಲಕ್ಷಾಂತರ ರೂಪಾಯಿಗಳ ನಾಮ ಹಾಕಿದ್ದರೆ ಆ ಮಾತೇ ಬೇರೆಯಿತ್ತು, ಆದರೆ ನಂಬಿ ಅಕ್ಕಿ ಕೊಟ್ಟ ರೈಸ್‌ಮಿಲ್ ಮಾಲೀಕರನ್ನೂ ಯಥೇಚ್ಛ ಮುಂಡಾಯಿಸಿಬಿಟ್ಟ. ಮಂಡ್ಯದ ಪ್ರಭಾವೀ ಅಕ್ಕಿ ಉತ್ಪಾದಕರಾದ ಪೂರ್ಣಚಂದ್ರ, ಕಲ್ಲಹಳ್ಳಿಯ ಶಂಕ್ರೇಗೌಡ ಮತ್ತು ಕ್ಯಾತನಗೆರೆ ಕೆ.ಬಿ. ರವಿಯಂಥ ಅನೇಕ ಅಕ್ಕಿ ಗಿರಣಿ ಧಣಿಗಳಿಗೆ ಲಕ್ಷಾಂತರ ರೂಪಾಯಿ ಮುಂಡಾಯಿಸಿದ್ದ.

ಇದು ರಫೀವುಲ್ಲಾನ ಒಂದು ಮುಖವಾದರೆ ಇದಕ್ಕೆ ವ್ಯತಿರಿಕ್ತವಾಗಿ ಮಂಡ್ಯದ ಬಹುತೇಕ ಸರ್ಕಾರಿ ಅಧಿಕಾರಿಗಳನ್ನು ಬ್ಲಾಕ್‌ಮೇಲ್ ಮಾಡಿ ವಸೂಲಿಗೆ ಕೈಯಿಟ್ಟಿದ್ದ. ಅದಕ್ಕೆಂದು ಈತ ಆಯುಧವಾಗಿ ಬಳಸಿದ್ದು ಮಾಹಿತಿ ಹಕ್ಕು ಕಾಯ್ದೆಯನ್ನು. ಮಾಹಿತಿಹಕ್ಕು ಕಾಯ್ದೆರೀತ್ಯ ಅರ್ಜಿ ಬರೆಯಲೆಂದೇ ಖತರ್‌ನಾಕ್ ಪುಡಿ ಪತ್ರಕರ್ತನೊಬ್ಬನನ್ನು ತಿಂಗಳ ಸಂಬಳದ ಮೇಲೆ ನೇಮಿಸಿಕೊಂಡು ಸಾವಿರಕ್ಕೂ ಅಧಿಕ ಅರ್ಜಿಗಳನ್ನು ವಿವಿಧ ಇಲಾಖೆಗಳಿಗೆ ಹಾಕಿಸಿ ಕಂಡಕಂಡ ಅಧಿಕಾರಿಗಳಿಂದ ದುಡ್ಡು ದೋಚುತ್ತಿದ್ದ.

ಸಾಲದ್ದಕ್ಕೆ ರಿಯಲ್ ಎಸ್ಟೇಟ್ ದಂಧೆಗೂ ಕೈಯಿಟ್ಟು ಯಾರ್ಯಾರದೋ ಸೈಟು ತೋರಿಸಿ ಒಂದೇ ಸೈಟನ್ನು ಮೂರ್‍ನಾಲ್ಕು ಜನಕ್ಕೆ ಮಾರುತ್ತಿದ್ದ. ಇದಕ್ಕಿಂತಲೂ ದೊಡ್ಡ ಮಟ್ಟದ ಕುಖ್ಯಾತಿಯಿದ್ದದ್ದು ಆತನ ಸಹೋದರರಿಗೆ. ರಫೀಕ್‌ನ ಅಣ್ಣಂದಿರಾದ ಮುಕ್ತಾರ್ ಮತ್ತು ಸಲೀಂಉಲ್ಲಾ ಇಬ್ಬರಿಗೂ ರಫೀಕ್‌ನನ್ನು ಮೀರಿಸಿದ ಕುಖ್ಯಾತಿಯಿತ್ತು. ಹೇಳಿಕೇಳಿ ಪುಢಾರಿಗಳು. ತಮ್ಮ ಇದಾಯತ್ ಪಾಷಾ ಮಂಡ್ಯದ ನಟೋರಿಯಸ್ ಡ್ರಗ್ ಪೆಡ್ಲರ್. ಮತ್ತೊಬ್ಬ ಸಹೋದರ ನಜೀರ್ ಅಹ್ಮದ್. ಈತ ಮಂಡ್ಯ ಕಂಡ ಕಡುಭ್ರಷ್ಟ ಸಮಾಜ ಕಲ್ಯಾಣಾಧಿಕಾರಿ.

ಇಂಥ ಖತರ್‌ನಾಕ್ ಸಹೋದರರ ದುರಾಶೆ, ಅಟ್ಟಹಾಸ ಮತ್ತು ಕ್ರಿಮಿನಲ್ ಕೃತ್ಯಗಳೆಲ್ಲವೂ ಸೇರಿಕೊಂಡೇ ರಫೀಕ್ ಮಂಡ್ಯದ ಭಯಾನಕ ಪಾತಕಿಯಾಗಿ ಬೆಳೆದುಬಿಟ್ಟ. ಅಣ್ಣ ಸಲೀಂಉಲ್ಲಾ ಹೆಸರಿಗಷ್ಟೇ ರಾಜಕಾರಣಿ. ಮಂಡ್ಯ ನಗರದ ಗಾಂಧಿನಗರದ ಕರ್ನಾಟಕ ಬಾರ್ ಸರ್ಕಲ್ಲಿರುವ ಸ್ಟಾರ್ ಡ್ರಗ್ ಹೌಸ್‌ಗೆ ಸಲೀಂ ಉಲ್ಲಾನೇ ಧಣಿ. ದಿನದ ಯಾವುದೇ ಹೊತ್ತಲ್ಲೂ ಕನಿಷ್ಠ ಎರಡು ಡಜನ್‌ಗಳಷ್ಟು ಕಾಲೇಜು ಹುಡುಗರು ಅಲ್ಲಿ ಅಡ್ಡೆ ಹಾಕಿರುತ್ತಾರೆಂದರೆ, ಅದು ಅಲ್ಲಿ ಸಿಗುವ ಮಾಂಡ್ರೆಕ್ಸ್, ಟೇಡಿ ಇತ್ಯಾದಿ ಮಾತ್ರೆಗಳಷ್ಟೇ ಅಲ್ಲದೇ ಚರಸ್ ಇತ್ಯಾದಿ ಮಾದಕ ವಸ್ತುಗಳಿಗಾಗಿ ಮಾತ್ರ. ಕಾಲೇಜು ವಿದ್ಯಾರ್ಥಿಗಳಿಗೆ ಡ್ರಗ್ ಕೊಟ್ಟ ವಿಷಯದಲ್ಲಿ ಪದೇಪದೇ ಗಲಾಟೆಗಳಾಗಿವೆ. ಹೀಗಿದ್ದೂ ಪೊಲೀಸರು ಸಲೀಂಉಲ್ಲಾನ ಸ್ಟಾರ್ ಡ್ರಗ್ ಹೌಸನ್ನು ಮುಚ್ಚಿಸಲಾಗಿಲ್ಲ, ಏಕೆಂದರೆ ಸಲೀಂಉಲ್ಲಾ ಮಂಡ್ಯದ ಜೆಡಿಎಸ್‌ನ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ. ತನ್ನ ಮೆಡಿಕಲ್ ಸ್ಟೋರನ್ನು ತಮ್ಮ ಹಿದಾಯತ್ ಉಸ್ತುವಾರಿಗೆ ಬಿಟ್ಟು ತಾನು ಶಾಸಕ ಶ್ರೀನಿವಾಸ್ ಸುತ್ತ ಓಡಾಡಿಕೊಂಡಿರುತ್ತಾನೆ.

ಹಿಂದೆ ದಳ ಸರ್ಕಾರವಿದ್ದಾಗ ಸಲೀಂ ಮಂಡ್ಯದ ಮೂಡಾ ಅಧ್ಯಕ್ಷಗಿರಿಗೆ ಇನ್ನಿಲ್ಲದಂತೆ ಲಾಬಿ ಮಾಡಿದ್ದ. ಈತನ ಕ್ರಿಮಿನಲ್ ಹಿನ್ನೆಲೆ ಗೊತ್ತಿದ್ದೇ ಜೆಡಿಎಸ್ ವರಿಷ್ಠರು ಸಮೀರ್ ಎಂಬ ಸಭ್ಯ ಮುಸ್ಲಿಂ ನಾಯಕನೊಬ್ಬನನ್ನು ತಂದು ಮೂಡಾ ಅಧ್ಯಕ್ಷನನ್ನಾಗಿ ನೇಮಿಸಿದರು. ಇದು ಸಲೀಂಗಾದ ಮೊದಲ ಮುಖಭಂಗ. ಸಲೀಂನ ಪತ್ನಿ ಅಂದರೆ ರಫೀಕ್‌ನ ಅತ್ತಿಗೆ ಗೌಶಿಯಾ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಳು. ಪತಿ ಸಲೀಂ ಮತ್ತು ಮೈದುನ ರಫೀಕ್‌ನ ಅಟ್ಟಹಾಸವಿತ್ತಲ್ಲ; ತನ್ನನ್ನು ಯಾರೇನು ಮಾಡುತ್ತಾರೆಂದು ಹಮ್ಮಿಗೆ ಬಿದ್ದವಳು ಸಿಕ್ಕಾಪಟ್ಟೆ ಕೆಲಸಕ್ಕೆ ಚಕ್ಕರ್ ಹಾಕತೊಡಗಿದಳು. ರೋಸತ್ತ ಗೌಸಿಯಾ ಆಡಳಿತ ಮಂಡಳಿ ಆಕೆಯನ್ನು ಕೆಲಸದಿಂದ ವಜಾ ಮಾಡಿತ್ತು.

ಸಲೀಂ ಏನೇ ಲಗಾಟ ಹಾಕಿ ಬುಸುಗುಟ್ಟಿದರೂ ತನ್ನ ಪತ್ನಿಗೆ ಮತ್ತೆ ಕೆಲಸ ಕೊಡಿಸಲಾಗಲೇ ಇಲ್ಲ.


ರೌಡಿ ಸಹೋದರ ಅಟ್ಟಹಾಸದ ವಿರುದ್ಧ ಮಂಡ್ಯದ ಮುಸ್ಲಿಮರಿಗೆ ಅದೆಂಥಾ ಸಿಟ್ಟಿತ್ತೆಂದರೆ ಇದೇ ಹೊತ್ತಿಗೆ ಸರಿಯಾಗಿ ಮುಸ್ಲಿಂ ಮುಖಂಡರೆಲ್ಲಾ ಸೇರಿ ಸಲೀಂಉಲ್ಲಾನನ್ನು ಮಸೀದಿ ಕಮಿಟಿಯ ಅಧ್ಯಕ್ಷಗಿರಿಯಿಂದಲೇ ಕಿತ್ತೆಸೆದರು. ಒಂದೆಡೆ ಡ್ರಗ್ ದಂಧೆ ಮತ್ತೊಂದೆಡೆ ಅಕ್ಕಿ ಸ್ಮಗ್ಲಿಂಗ್ ಜೊತೆಗೆ ಮುಸ್ಲಿಂ ಹುಡುಗರನ್ನೇ ದಿಕ್ಕುತಪ್ಪಿಸಿ ರೌಡಿಜಮ್ಮಿಗೆಳೆಯುತ್ತಾರೆಂದು ರಫೀವುಲ್ಲಾನ ಇಡೀ ಕುಟುಂಬವನ್ನೇ ಮುಸ್ಲಿಂ ಸಮೂಹ ಹೊರಗಿಟ್ಟಿತ್ತು. ಇಷ್ಟಾಗ್ಯೂ ಅಣ್ಣ ಸಲೀಂಉಲ್ಲಾ ಬುದ್ಧಿ ಕಲಿಯಲಿಲ್ಲ, ಬದಲಿಗೆ ಸಂಸದ ಚಲುವರಾಯಸ್ವಾಮಿ ಮತ್ತು ಶಾಸಕ ಶ್ರೀನಿವಾಸ್‌ಗೆ ಮತ್ತಷ್ಟು ಮಸ್ಕಾ ತಿಕ್ಕಿ ತನ್ನನ್ನು ಮಸೀದಿ ಕಮಿಟಿಯಿಂದ ಪದಚ್ಯುತಿಗೊಳಿಸಿದ ಸಜ್ಜನ ಮುಸ್ಲಿಮರ ವಿರುದ್ಧವೇ ಕತ್ತಿ ಮಸೆಯುತ್ತಿದ್ದ.

ಈತನಿಗೆ ತಕ್ಕಂತೆ ರಫೀವುಲ್ಲಾನ ಮತ್ತೊಬ್ಬ ಅಣ್ಣ ಮಂಡ್ಯದ ಸಮಾಜ ಕಲ್ಯಾಣಾಧಿಕಾರಿ ನಜೀರ್ ಅಹ್ಮದ್ ಷಡ್ಯಂತ್ರಕ್ಕಿಳಿದ. ಕಳೆದ ಹತ್ತು ವರ್ಷಗಳಿಂದ ಎತ್ತಂಗಡಿಯಾಗದೇ ಮಂಡ್ಯದಲ್ಲೇ ಠಿಕಾಣಿ ಹೂಡಿರುವ ನಜೀರ್ ಅಹ್ಮದ್ ಭ್ರಷ್ಟಾತಿಭ್ರಷ್ಟ. ಈ ಹಿಂದೆ ಮಳವಳ್ಳಿಗೆ ಎತ್ತಂಗಡಿಯಾಗಿದ್ದರೂ ದೋಚಿದ ದುಡ್ಡು ಮತ್ತು ಸಂಸದ ಚಲುವರಾಯಸ್ವಾಮಿಯ ರೆಕಮಂಡಿನಿಂದ ಮತ್ತೆ ಮಂಡ್ಯಕ್ಕೇ ವಕ್ಕರಿಸಿದ. ಹಾಸ್ಟೆಲ್ ಮಕ್ಕಳಿಗೆ ಬರುವ ಅಕ್ಕಿ ಬೇಳೆ ಕದ್ದೇ ಸರಿಸುಮಾರು 20 ಕೋಟಿಯಷ್ಟು ಆಸ್ತಿವಂತನಾದ ನಜೀರ್ ಅಹ್ಮದ ತನ್ನ ಪತ್ನಿಯ ಹೆಸರಲ್ಲೇ ಐದು ಕೋಟಿಯ ಆಸ್ತಿ ಮಾಡಿಟ್ಟಿದ್ದಾನೆ. ಮಂಡ್ಯದ ಈತನ ಒಂದು ಕೋಟಿಯ ಬಂಗಲೆಯ ವೈಭೋಗದ ಮುಂದೆ ಪೇಟೆ ಬೀದಿಯ ಮಾರ್ವಾಡಿ ಬಂಗಲೆಗಳು ಏನೇನೂ ಅಲ್ಲ.

ಹೀಗಿದ್ದೂ ಈತನಕ ಈತನ ಮೇಲೆ ಲೋಕಾಯುಕ್ತರ ಕಣ್ಣುಬಿದ್ದಿಲ್ಲ. ಒಂದೆಡೆ ಅಣ್ಣ ಸಲೀಂಉಲ್ಲಾನ ರಾಜಕೀಯ ಪ್ರಭಾವ ಮತ್ತೊಂದೆಡೆ ಇನ್ನೊಬ್ಬ ಅಣ್ಣ ಸಮಾಜ ಕಲ್ಯಾಣಾಧಿಕಾರಿ ನಜೀರ್ ಅಹ್ಮದ್‌ನ ಪಾಪದ ರೊಕ್ಕ; ಎರಡನ್ನೂ ಬಳಸಿಕೊಂಡೇ ಕೊಬ್ಬಿದವನು ರಫೀವುಲ್ಲಾ. ಆತನ ಸಹೋದರರೆಲ್ಲರೂ ಸೇರಿ ತಮ್ಮನನ್ನು ಓರ್ವ ಪಾತಕಿಯನ್ನಾಗಿ ಬೆಳೆಸಿದ್ದಕ್ಕೂ ಕಾರಣವಿತ್ತು. ಅದು ರಿಯಲ್ ಎಸ್ಟೇಟ್ ದಂಧೆ. ಸಲೀಂ ಉಲ್ಲಾನ ಸ್ಟಾರ್ ಡ್ರಗ್‌ಹೌಸ್ ಮಳಿಗೆಯಿದ್ದ ಕಟ್ಟಡದ ಬೇರೆಲ್ಲಾ ಬಾಡಿಗೆದಾರರು ಖಾಲಿ ಮಾಡಿದರಾದರೂ ಸಲೀಂ ಮಾತ್ರ ತೆರವು ಗೊಳಿಸದೇ ಬಿಲ್ಡಿಂಗನ್ನೇ ತನಗೆ ಮಾರುವಂತೆ ಪೀಡಿಸುತ್ತಿದ್ದ.

ಇದಕ್ಕೆ ಪೂರಕವೆಂಬಂತೆ ರಫೀಕ್ ತನ್ನ ರೌಡಿ ಗ್ಯಾಂಗ್ ಸಮೇತ ದಾಳಿಯಿಟ್ಟು ಕಟ್ಟಡದ ಮಾಲೀಕನ ಕುತ್ತಿಗೆಗೇ ಮಚ್ಚು ಇಟ್ಟಿದ್ದ. ಅವರಾದರೂ ಎಷ್ಟು ಅಂತ ಸಹಿಸಿ ಯಾರು? ಸಾಲದ್ದಕ್ಕೆ ಮಂಡ್ಯದ ಗ್ಯಾಸ್ ಏಜೆನ್ಸಿಗಳಿಗೆ ವಕ್ಕರಿಸಿದ ರಫೀಕ್ ಪೊಲೀಸರನ್ನು ಛೂಬಿಟ್ಟು ತನಗೆ ಕಪ್ಪ ಸಲ್ಲಿಸದ ಗ್ಯಾಸ್ ಏಜೆನ್ಸಿಯನ್ನೇ ಮುಚ್ಚಿಸಿಬಿಟ್ಟ.

ಮೊದಲೇ ವಂಚನೆಗೀಡಾಗಿದ್ದ ರೈಸ್‌ಮಿಲ್ ಧಣಿ ಕಟ್ಟಡಗಳ ಮಾಲೀಕರು ಮತ್ತು ಗ್ಯಾಸ್ ಏಜೆನ್ಸಿಗಳೆಲ್ಲವರೂ ಪರಸ್ಪರ ಕೈಜೋಡಿಸಿಬಿಟ್ಟರು. ಇದಕ್ಕೆ ತಕ್ಕಂಥೆ ರಫೀಕ್‌ನ ಇಡೀ ಕುಟುಂಬ ಒಂದಾನೊಂದು ಕಾಲಕ್ಕೆ ಕೆಲಸ ಮಾಡಿಕೊಂಡಿದ್ದ ಇಸ್ಮಾಯಿಲ್ ಸೇಠ್‌ನ ಸಾವಿನ ಕಿಡಿಯೂ ಹೊತ್ತಿಕೊಂಡಿದೆ. ಇಸ್ಮಾಯಿಲ್ ಸೇಠ್ ಮಂಡ್ಯದ ಶ್ರೀಮಂತ ಮುಸ್ಲಿಂ ಉದ್ಯಮಿಯಾಗಿದ್ದ. ಆತನ ಬಳಿ ಕೆಲಸಕ್ಕಿದ್ದ ರಫೀಕ್‌ನ ಅಣ್ಣ ಮುಷಾಕ್ ಮಾಡಿದ ಮೋಸದಿಂದಾಗಿ ಬೀದಿಗೆ ಬಿದ್ದ ಇಸ್ಮಾಯಿಲ್ ಸೇಠ್ ಕೊರಗಿ ಕೊರಗಿ ಸತ್ತು ಹೋದ.



ಇಸ್ಮಾಯಿಲ್ ಸೇಠ್‌ನ ಸಂಬಂಧಿಗಳ ಸಿಟ್ಟಿಗೆ ಸರಿಯಾಗಿ ರಫೀಕ್ ರಿಯಲ್ ಎಸ್ಟೇಟ್ ದಾಹ ಭುಗಿಲೆದ್ದಿತು. ಗಾಂಧಿನಗರದ ಎರಡನೇ ಕ್ರಾಸಿನಲ್ಲಿ ಸೈಟ್ ಒಂದನ್ನು ಬೊಮ್ಮಯ್ಯ ಎಂಬ ದಲಿತನಿಗೆ ಮಾರಿದ್ದ. ಆದರೆ ಆತನಿಗೆ ಗೊತ್ತಿಲ್ಲದೇ ಅದೇ ಸೈಟಿನ ಮೇಲೆ ಬ್ಯಾಂಕ್‌ನಿಂದ ಸಾಲ ಪಡೆದ. ತನ್ನ ಮನೆ ಪಕ್ಕದ ಮತ್ತೊಂದು ಸೈಟನ್ನೂ ಇದೇ ರೀತಿ ಯಾರಿಗೋ ಮಾರಿ ಹಾಕಿ ಅದರ ಮೇಲೂ ಬ್ಯಾಂಕ್ ಸಾಲ ಪಡೆದು ವಂಚಿಸಿಬಿಟ್ಟ. ಇದಿಷ್ಟೇ ಅಲ್ಲದೇ ಅಣ್ಣ ಸಲೀಂ ಮತ್ತು ರಫೀಕ್ ಸೇರಿಕೊಂಡು ಲೇಔಟ್ ಒಂದನ್ನು ಹುಟ್ಟುಹಾಕಿ ಒಂದೇ ಸೈಟನ್ನು ಮೂರ್‍ನಾಲ್ಕು ಮಂದಿಗೆ ಮಾರತೊಡಗಿದರು. ಈ ಎಲ್ಲ ದುರಾಚಾರಗಳ ಪರಮಾವಧಿಯಂತಿದ್ದು ಅಣ್ಣಂದರಿ ಅಟ್ಟಹಾಸ ಮತ್ತು ದುರಾಶೆಗೆ ಬಿದ್ದು ರೌಡಿಯಾದ ರಫೀವುಲ್ಲಾನ ಹತ್ಯೆಗೆ ಮರಗುವವರ್‍ಯಾರು?

● ರಾ. ಸೋಮನಾಥ್

...ಂಪೂರ್ಣ ಗೋಹತ್ಯಾ ನಿಷೇಧವನ್ನು ಏಕೆ ವಿರೋಧಿಸಬೇಕು?

...ರ್ನಾಟಕದ ಫ(ದ)ನ ಬಿಜೆಪಿ ಸರಕಾರ ಸಂಪೂರ್ಣ ...ಹತ್ಯಾ ನಿಷೇಧ ಎನ್ನುವ ಹೊಸ ಕಾಯ್ದೆಯೊಂದನ್ನು ...ಹೊರಟಿರುವುದು ಸರಕಾರ ನಡೆಸುತ್ತಿರುವ ಮಂದಿಗೆ ...ಬುದ್ಧಿಭ್ರಮಣೆಯಾಗಿರುವುದನ್ನು ನೂರಕ್ಕೆ ನೂರರಷ್ಟು ...ಪಡಿಸುತ್ತದೆ. ಈಗಾಗಲೇ ಕೆಲ ಮಠಾಧೀಶರಿಗೆ ನೀಡ ...ುವ ಪಾರಮ್ಯ; ಪುರೋಹಿತಶಾಹಿ ವ್ಯವಸ್ಥೆ ಹಾಗೂ ...ಭುತ್ವದ ವೈಭವೀಕರಣ; ಸಂಸ್ಕೃತ ವಿಶ್ವವಿದ್ಯಾನಿಲಯ ...ಯ ಹುನ್ನಾರ; ಎಬಿವಿಪಿ ನಿರ್ದೇಶಿತ ಶಿಕ್ಷಣ ನೀತಿಗೆ ...; ಮತಾಂತರ ನಿಷೇಧ ಕಾಯ್ದೆಗೆ ಸಿದ್ಧತೆ.. ಇತ್ಯಾದಿ, ... ಬುದ್ಧಿಗೇಡಿ, ಮತಿಭ್ರಾಂತ, ಅಪ್ರಸ್ತುತ ಪ್ರಸ್ತಾಪಗಳನ್ನು ...ರಾಜ್ಯದ ಜನತೆ ಸಹಜವಾಗಿಯೇ ಈ ಸರ್ಕಾರಕ್ಕೆ ತಲೆ ...ಎಂಬ ತೀರ್ಮಾನಕ್ಕೆ ಬಂದಿದೆ. ಹಣ ಕಂಡರೆ ಹೆಣವೂ ...ತುತ್ತದಂತೆ. ಇನ್ನು ಜೀವಂತ ಹುಲುಮಾನವರ ಮತ್ತು ...ಾವಿಧಾರಿಗಳ ಪಾಡೇನು? ಬಿಜೆಪಿ ಸರಕಾರ ರಾಜ್ಯದಲ್ಲಿ ...ರದ ಚುಕ್ಕಾಣಿ ಹಿಡಿದಾಕ್ಷಣ ಮಾಡಿದ ಮೊದಲ ಕೆಲಸ ... ನೂರಾರು ಕೋಟಿ ರೂಪಾಯಿ ಸಾರ್ವಜನಿಕ ದುಡ್ಡನ್ನು ...ಸದಿಂದೆತ್ತಿ ಕೆಲವು ಮಠಮಾನ್ಯಗಳಿಗೆ ಉದಾರಹಸ್ತದಿಂದ ...ಮಾಡಿದ್ದು. ಹೀಗಾಗಿ ಸರಕಾರ ಏನೇ ಜನವಿರೋಧಿ ಕೆಲಸ ...ದರೂ ಮಠಾಧಿಪತಿಗಳು ಅದನ್ನು ವಿರೋಧಿಸದಿರುವಂತಹ ... ನಿರ್ಮಾಣವಾಗಿದೆ.

...ಂಪೂರ್ಣ ಗೋಹತ್ಯಾ ನಿಷೇಧ ... ಈ ಹೊಸ ಜನವಿರೋಧಿ ...ಯನ್ನು ಜನಾಭಿಪ್ರಾಯದ ...ಕೇ ಜಾರಿಗೆ ತರಲಾಗುತ್ತಿದೆ ... ಸರಕಾರ ಹೇಳುತ್ತಿದೆ. ಆದರೆ ...ದಲ್ಲಿ ಮಾಧ್ಯಮಗಳಲ್ಲಾಗಲೀ ...ವೇದಿಕೆಗಳಲ್ಲಾಗಲೀ ಯಾವ ...ಜನಿಕ ಚರ್ಚೆಯೂ ನಡೆದಿಲ್ಲ. ...ಗೋಪನಾ ...ಂದಿಗಾಗಲೀ, ಕೃಷಿ ...ಂದಿಗಾಗಲೀ ಸಮಾಲೋಚನೆ ನಡೆದಿಲ್ಲ. ಹಾಗಾದರೆ ... ಹೇಳುತ್ತಿರುವ ಜನಾಭಿಪ್ರಾಯ ಯಾವ ಜನರ ...ಯವೆಂಬ ಅನುಮಾನ ಸಹಜವಾಗಿಯೇ ...ತ್ತದೆ.


ಒಂದು ಪತ್ರ

...ಸ್ತವದಲ್ಲಿ ಇದು ಆರೆಸ್ಸೆಸ್ ಸರಸಂಘಚಾಲಕರ ಹುಕುಂ ...ಆಗಿರುವ 'ಸಂಘಾಭಿಪ್ರಾಯ'ವೇ ಹೊರತು ಜನಾಭಿಪ್ರಾಯ ... ಅಲ್ಲ. ಹೊಸ ಕಾಯ್ದೆಯನ್ನು ಜಾರಿಗೊಳಿಸುವಲ್ಲಿ ...ಪರಿವಾರಕ್ಕೆ ಎರಡು ವಿಧದ ಉದ್ದೇಶಗಳಿವೆಯೆಂದು ...ತ್ತದೆ. ಒಂದು, ಸಂಘ ಪರಿವಾರ ಹಿಟ್ಲರ್ ಮಾದರಿಯಲ್ಲಿ ...ವ ಕೆಲವು ಸಂಘಟನೆಗಳ ಆದಾಯ ಹೆಚ್ಚಿಸುವುದು. ..., ಮಲೆನಾಡು ಕಡೆಯ ಪುಂಡುಪೋಕರಿಗಳು ಈಗಾಗಲೇ ...ಸತೊಡಗಿದ್ದಾರೆಂಬ ವರ್ತಮಾನಗಳಿವೆ. ಎರಡು, ...ಕದಲ್ಲಿ ಒಂದು ಸಂಪೂರ್ಣ "ಪುರೋಹಿತಶಾಹಿ ...ನನ್ನು ಸ್ಥಾಪಿಸುವುದಕ್ಕಾಗಿ ಬೇಕಿರುವ ರಾಜಕೀಯ ...ಯನ್ನು ಇನ್ನಷ್ಟು ಗಟ್ಟಿಗೊಳಿಸುವುದು. ಇದು ಭಾರತದ ...ಜನಸಂಖ್ಯೆಯಲ್ಲಿ ಶೇಕಡಾ ೧ಕ್ಕಿಂತಲೂ ಕಡಿಮೆ ಇರುವ ...ವಾದಿಗಳ ರಾಷ್ಟ್ರಮಟ್ಟದ ಮಹತ್ವಾಕಾಂಕ್ಷೆಯ ಭಾಗವೇ ... ಸಂಘ ಪರಿವಾರ ಭಾರತದ ಸಂವಿಧಾನ ರಚನೆಯ ...ದಲೂ ಗೋವಿನ ವಿಷಯವನ್ನು ಭಾವನಾತ್ಮಕ ...ುವುದು ಅದರ ವಿಸ್ತೃತ ಮತ್ತು ವಿಕೃತ ಅಜೆಂಡಾದ ...ಗಿದೆ. ಕೇವಲ ಹಾಲು ನೀಡುತ್ತದೆಂಬ ಕಾರಣಕ್ಕೆ ಗೋವನ್ನು ...ು ಪಟ್ಟಕ್ಕೇರಿಸಬಹುದಾದರೆ ಆಡು, ಒಂಟೆ ಏಕಾಗಬಾರದು? ಗೋಮಾತೆಯಲ್ಲಿ 33 ಸಾವಿರ ಕೋಟಿ ದೇವತೆಗಳಿದ್ದಾರೆಂಬ ಕಟ್ಟುಕಥೆಯನ್ನು ಕೇವಲ ಮುಗ್ಧ ಸಾಮಾನ್ಯ ಹಿಂದೂಗಳನ್ನು ಮೋಸಗೊಳಿಸುವ ಸಲುವಾಗಿ ಹೆಣೆಯಲಾಗಿದೆ. ಜಾನುವಾರುಗಳನ್ನು ಸಾಕಿ ಗೊತ್ತಿಲ್ಲದ ರಾಜಕೀಯ ಮಹತ್ವಾಕಾಂಕ್ಷೆಯುಳ್ಳ ಜನ ಸಾಮಾನ್ಯ ಹಿಂದೂಗಳನ್ನು ಕೆರಳಿಸಲು ಈ ತೆರನಾದ ಬೊಗಳೆ ಬಿಡುತ್ತಿದ್ದಾರೆ. ಈ ದೇಶದ ಬಡವರ, ದಲಿತರ, ಕ್ರೈ?ಸ್ತರ, ಮುಸ್ಲಿಮರ ಆಹಾರ ಪದ್ಧತಿಗಳಲ್ಲಿ ಹಸ್ತಕ್ಷೇಪ ಮಾಡುವ ಮೂಲಕ ಅವರನ್ನು ಬಗ್ಗುಬಡಿದು "ಬ್ರಾಹ್ಮಣವಾದಿ ರಾಷ್ಟ್ರ" ಸ್ಥಾಪಿಸಲು ಹೊರಟಿರುವ ಸಂಘ ಪರಿವಾರಕ್ಕೆ ನಿಜವಾಗಿ ಗೋವಿನ ಬಗ್ಗೆ ಲವಲೇಶದಷ್ಟೂ ಕಾಳಜಿ ಇಲ್ಲ. ವೇದಕಾಲದಲ್ಲಿ ಗೋಮಾಂಸ ಭಕ್ಷಕರಾಗಿದ್ದ ಬ್ರಾಹ್ಮಣರು ಹೇಗೆ ಉಳಿದ ಜಾತಿಗಳು ಬೌದ್ಧ ಧರ್ಮಕ್ಕೆ ಹೆಚ್ಚುಹೆಚ್ಚಾಗಿ ಆಕರ್ಷಿತರಾಗುತ್ತಿದ್ದುದನ್ನು ತಡೆಯುವ ಸಲುವಾಗಿ ಕೇವಲ ಗೋಮಾಂಸವಷ್ಟೇ ಅಲ್ಲ ಮಾಂಸಾಹಾರವನ್ನೇ ತ್ಯಜಿಸಿದರೆನ್ನುವುದನ್ನು ಡಾ. ಅಂಬೇಡ್ಕರ್ ಮತ್ತು ಭಾರತ ರತ್ನ ಪಿ.ವಿ.ಕಾಣೆ, ಸಂಕಾಲಿಯಾ ಮುಂತಾದ ಪ್ರಖ್ಯಾತ ಇತಿಹಾಸಜ್ಞರು ಚಾರಿತ್ರಿಕ ದಾಖಲೆ ಸಮೇತ ವಿವರಿಸಿದ್ದಾರೆ.

ಹೀಗೆ ಕೇವಲ ಭಾವನಾತ್ಮಕ ವಿಷಯಕ್ಕಾಗಿ ಮಾಡಲಾಗುತ್ತಿರುವ ಕರ್ನಾಟಕದ ಈ ಕಾಯ್ದೆಗೆ ಯಾವೊಂದು ಆರ್ಥಿಕ ಆಧಾರವೂ ಇಲ್ಲ. ಗೋವು ಪವಿತ್ರವೆಂದು ಸಂವಿಧಾನದಲ್ಲೆಲ್ಲೂ ಹೇಳಿಲ್ಲ. ಕೃಷಿಸೇವೆ ಮತ್ತು ಹೈನುಗಾರಿಕೆಗೆ ಬೇಕಾಗಿರುವ ಜಾನುವಾರುಗಳ ಸಂರಕ್ಷಣೆಯನ್ನು ವೈಜ್ಞಾನಿಕ ನೆಲೆಯಲ್ಲಿ ಮಾಡಬೇಕು ಎಂದಷ್ಟೇ ಸಂವಿಧಾನ ಹೇಳಿದೆ. ಹುಲ್ಲು, ಪಶು ಆಹಾರದ ಕೊರತೆ ಇರುವುದರಿಂದ ಸಂಪೂರ್ಣ ಗೋಹತ್ಯೆ ನಿಷೇಧ ಸಾಧ್ಯವೂ ಇಲ್ಲ, ಅದು ಸಾಧುವೂ ಅಲ್ಲವೆಂದು ಹೇಳಿರುವ 1954, 1976ರ ಕೃಷಿ ಇಲಾಖೆಯ ವರದಿಗಳು ಗೋವುಗಳನ್ನು ಗೊಡ್ಡಾಗಿಸುವಂತೆ ಮತ್ತು ಸಂಖ್ಯೆ ಕಡಿಮೆ ಮಾಡುವಂತೆ ಶಿಫಾರಸು ಮಾಡಿವೆ. ದೇಶದಲ್ಲಿ ಜಾನುವಾರುಗಳಿಗೆ ಸಾಕಷ್ಟು ಮೇವು, ಹಿಂಡಿಗಳಿಲ್ಲವೆಂದು ಮೊದಲ ಪಂಚವಾರ್ಷಿಕ ಯೋಜನೆಯಿಂದ ಆರಂಭಿಸಿ 11ನೆ ಪಂಚವಾರ್ಷಿಕ ಯೋಜನೆ ವರೆಗಿನ ಪ್ರತಿಯೊಂದು ವರದಿಯಲ್ಲಿ ಹೇಳಲಾಗಿದೆ.

ಆದುದರಿಂದಲೇ ಈ ಉದ್ದೇಶಿತ ಕಾಯ್ದೆಯ ಮೊದಲ ದುಷ್ಪರಿಣಾಮ ರೈತರ ಮೇಲಾಗಲಿದೆ. ಅನುಪಯುಕ್ತ ಜಾನುವಾರುಗಳನ್ನು ಕಟುಕರಿಗೆ ಮಾರಾಟ ಮಾಡುವುದು ಹಳ್ಳಿಗಳಲ್ಲಿ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ಇದನ್ನು ಬ್ರಾಹ್ಮಣ ರೈತರೂ ಮಾಡುತ್ತಾರೆ ಇತರ ಸವರ್ಣೀಯರೂ ಮಾಡುತ್ತಾರೆ. ಇದರಲ್ಲಿ ಯಾವ ಧಾರ್ಮಿಕ, ಭಾವನೆಯೂ ಇಲ್ಲ; ಇಲ್ಲಿರುವುದು ಕೇವಲ ವ್ಯಾವಹಾರಿಕ ನಿಲುವು. ಗೋವುಗಳನ್ನು ಅರೆಹೊಟ್ಟೆಯಿಂದ ಬಡಕಲಾಗಿಸಿ ನಿಧಾನಕ್ಕೆ ಸಾಯಿಸುವ ಬದಲು ಕಟುಕನ ಕತ್ತಿಗೆ ಕೊಡುವುದೇ ಹೆಚ್ಚು ದಯಾಮಯವಾಗುತ್ತದೆ ಎಂದಿದ್ದರು ಕುವೆಂಪು. ಈಗಾಗಲೇ ಮೇವು, ಹಿಂಡಿ ಇತ್ಯಾದಿಗಳ ಬೆಲೆ ಏರಿಕೆಯಿಂದಾಗಿ ಕಂಗೆಟ್ಟಿರುವ ಸಾಮಾನ್ಯ ರೈತ ಕುಟುಂಬಗಳು ಇನ್ನು ಮುಂದಕ್ಕೆ ಹೈನುಗಾರಿಕೆಯ ಉಪಕಸುಬನ್ನು ಸಂಪೂರ್ಣವಾಗಿ ಬಿಡಬೇಕಾಗಬಹುದು. ಗೊಡ್ಡು ಗೋವು, ಗಂಡುಕರು, ಕೋಣಗಳನ್ನು ಸರಕಾರ ಕೊಂಡುಕೊಂಡು ಸಾಕುತ್ತದೆಯೇ? ಫಲವತ್ತಾದ ಕೃಷಿಭೂಮಿಗಳನ್ನು ಎಸ್‌ಇಝೆಡ್, ವಿಮಾನನಿಲ್ದಾಣ, ನೈಸ್ ರಸ್ತೆಯಂತಹ ತಥಾಕಥಿತ "ಅಭಿವೃದ್ಧಿ" ಯೋಜನೆಗಳು ಒಂದೊಂದಾಗಿ ನುಂಗುತ್ತಿರುವ ಪರಿಸ್ಥಿತಿಯಲ್ಲಿ ಮನುಷ್ಯರಿಗೇ ಸಾಕಷ್ಟು ಆಹಾರ ಇಲ್ಲದಿರುವಾಗ ಇನ್ನು ಕೋಟಿಗಟ್ಟಲೆ ಜಾನುವಾರುಗಳಿಗೆ ಹುಲ್ಲು, ಹಿಂಡಿ ಎಲ್ಲಿಂದ ತರೋಣ? ಅಂತಿಮವಾಗಿ ಹೈನುಗಾರಿಕೆ ಸಂಕಷ್ಟಕ್ಕೀಡಾಗಿ ಶ್ವೇತ ಕ್ರಾಂತಿಗೆ ವಿದಾಯ ಹೇಳುವ ಕಾಲ ಖಂಡಿತಾ ಬರಬಹುದು.


ಉದ್ದೇಶಿತ ಹೊಸ ಕಾಯ್ದೆ ಬಹುಜನರಿಗೂ, ರೈತರಿಗೂ ಅಂತಿಮವಾಗಿ ರಾಜ್ಯದ ಆರ್ಥಿಕತೆಗೂ ಹೇಗೆ ಕಂಟಕಪ್ರಾಯವಾಗಲಿದೆ ಎನ್ನುವ ಈ ಪ್ರಮುಖ ಅಂಶಗಳನ್ನು ಲಿಂಗಾಯತ ಮತ್ತಿತರ ಕೆಲವು ಸ್ವಾಮಿಗಳು ಮತ್ತು ಪ್ರಗತಿಪರ ರಾಜಕೀಯ ಪಕ್ಷಗಳು ಗಮನಿಸಬೇಕು. ಭಾರತೀಯ ಸಮಾಜದ ವೈವಿಧ್ಯಮಯ ಬಹುಸಂಸ್ಕೃತಿಯನ್ನು ಗೌರವಿಸಿ ಅದನ್ನು ಉಳಿಸಿಕೊಳ್ಳುವ ಉದ್ದೇಶದಿಂದ ರಚಿಸಲಾಗಿರುವ ಸಂವಿಧಾನಕ್ಕೆ ಬದ್ಧವಾಗಿರುವಂತಹ ರಾಜಕೀಯ ಪಕ್ಷಗಳೆಲ್ಲವೂ ಒಕ್ಕೊರಲಿನಿಂದ ಸಂಪೂರ್ಣ ಗೋಹತ್ಯಾ ನಿಷೇಧ ಕಾಯ್ದೆಯನ್ನು ವಿರೋಧಿಸಬೇಕು.



- ಸುರೇಶ್ ಭಟ್, ಬಾಕ್ರಬೈಲ್

ರೆಡ್ ಅಲರ್ಟ್

ಬರುತ್ತಿದ್ದಾನೆ ರೋಲ್‌ಕಾಲ್ ರಾಘವೇಂದ್ರ ಟಿವಿಒಂಭತ್ತು



ವಾರಂಟ್ ವಂಚಕ ರಾಘವೇಂದ್ರನಿಗೆ ಗೇಟ್‌ಪಾಸ್

ಚೆಡ್ಡಿ ಪತ್ರಕರ್ತರ ಪಾಳಯದಲ್ಲಿ ಕಳ್ಳಾರಾಮ ಅಲಿಯಾಸ್ ಕುಳ್ಳಾರಾಘು ಎಂದೇ ಖ್ಯಾತಿವೆತ್ತ ಎಂ.ಎಸ್. ರಾಘವೇಂದ್ರನನ್ನು ಟಿವಿಒಂಭತ್ತುನಿಂದ ಹೊರದಬ್ಬಲಾಗಿದೆ. ಹಿಡಿದ ಗ್ರಹಣ ಮತ್ತು ಅಂಟಿದ ಶಾಪ ಒಟ್ಟೊಟ್ಟಿಗೆ ವಿಮೋಚನೆಗೊಂಡಂತೆ ಟಿವಿಒಂಭತ್ತು 'ವಾರಂಟ್' ವಿಭಾಗವನ್ನು ಬ್ಲೀಚಿಂಗ್ ಪೌಡರ್ ಹಾಕಿ ತೊಳೆಯುವಂತೆ ಅದರ ಮುಖ್ಯಸ್ಥ ಮಹೇಂದ್ರ ಮಿಶ್ರಾ ಸೂಚಿಸಿದ್ದಾರಂತೆ!

ಕ್ರೈಂ ಡೈರಿ, ಕ್ರೈಂ ಸ್ಟೋರಿ ಇತ್ಯಾದಿ ಕ್ರೈಂ ಸೀರಿಯಲ್‌ಗಳಂತೆ ಟಿವಿಒಂಭತ್ತು 'ವಾರಂಟ್'ಗೆ ವಕ್ಕರಿಸಿದ್ದ ರಾಘವೇಂದ್ರನನ್ನು ಏಕಾಏಕಿ ಟಿವಿಒಂಭತ್ತುನಿಂದ ಹೊರಗಿಟ್ಟಿದ್ದರ ಹಕೀಕತ್ತು ರಸವತ್ತಾಗಿದೆ. ಇತ್ತೀಚೆಗೆ ಯಾವುದೋ ಕಾರ್ಯಕ್ರಮವೊಂದರಲ್ಲಿ ಟಿವಿಒಂಭತ್ತು ಮುಖ್ಯಸ್ಥ ಮಿಶ್ರಾರನ್ನು ಭೇಟಿಯಾದ ಮಾಜಿ ಮಂತ್ರಿ ಕೃಷ್ಣಯ್ಯ ಶೆಟ್ಟಿ '.... ರಾಘು ಕೈಗೆ ೨೫ ಲಕ್ಷ ಕೊಟ್ಟಿದ್ದೆ, ಅದರಲ್ಲಿ ನಿಮಗೆಷ್ಟು ಬಂತು? ಎಂದು ಪೆದ್ದಂಭಟ್ಟನಂತೆ ಪ್ರಶ್ನೆಯಿಟ್ಟರಂತೆ.

ಕಕ್ಕಾಬಿಕ್ಕಿಯಾದ ಮಿಶ್ರಾ '..........ಬುಲ್‌ಶಿಟ್; ಯಾವ ೨೫ ಲಕ್ಷ? ಯಾಕೆ ಕೊಟ್ರಿ?' ಎಂದು ಯಕ್ಕಾಮಕ್ಕಾ ಉಗಿದದ್ದೇ ತಡ ಕೃಷ್ಣಯ್ಯ ಶೆಟ್ಟಿ ಬಾಯಿ ಬಿಟ್ಟನಂತೆ. ಕೆಲದಿನಗಳ ಹಿಂದೆ ಕೃಷ್ಣಯ್ಯ ಶೆಟ್ಟಿಗೆ ಭೋಪರಾಗಿ ಹಾಕಿದ ಶೈಲಿಯಲ್ಲೇ ವರದಿಯೊಂದನ್ನು ರಾಘು ಮಾಡಿದ್ದ. ಸುಳ್ಳು ದಾಖಲೆ ಸೃಷ್ಟಿಸಿ ಬ್ಯಾಂಕ್ ಒಂದಕ್ಕೆ ಕೋಟಿಗಟ್ಟಲೇ ಟೋಪಿ ಇಟ್ಟ ಕೃಷ್ಣಯ್ಯ ಶೆಟ್ಟಿಯ ವಿರುದ್ಧ ಈಗಾಗಲೇ ಸಿಬಿಐ ತನಿಖೆ ನಡೆಸುತ್ತಿರುವುದಕ್ಕೆ ವ್ಯತಿರಿಕ್ತವಾಗಿ ಕತೆ ಕಟ್ಟಿದ ವರದಿಯಿದು. ಮಂತ್ರಿ ಶೆಟ್ಟಿಯನ್ನು ರಾಘವೇಂದ್ರ ಸತ್ಯ ಹರಿಶ್ಚಂದ್ರನ ತುಂಡಿನಂತೆ ಚಿತ್ರಿಸಿದ್ದ.

ಆವತ್ತು ಕೃಷ್ಣಯ್ಯ ಶೆಟ್ಟಿಯನ್ನು ಬೆಂಬಲಿಸಿದ್ದ ಸದರಿ ವಿಶೇಷ ವರದಿ ಟಿವಿಒಂಭತ್ತರಲ್ಲಿ ಪ್ರಸಾರಗೊಂಡಾಗಲೇ ಮುಖ್ಯಸ್ಥ ಮಿಶ್ರಾಗೆ ರಾಘು ಕೈಚಳಕದ ವಾಸನೆ ಹತ್ತಿತ್ತು. ಆದರೆ ಕಿಲಾಡಿ ರಾಘು ಅದನ್ನು ಓಂಕಾರ್ ಉಮೇಶ್ ಎಂಬಾತನ ಹೆಸರಲ್ಲಿ ಮಾಡಿದ್ದನಲ್ಲ; ಆವತ್ತೇ ಓಂಕಾರ್ ಉಮೇಶ್‌ಗೆ ಮಿಶ್ರಾ ಗೇಟ್‌ಪಾಸ್ ಕೊಟ್ಟಿದ್ದರು. ಯಾವತ್ತು ಕೃಷ್ಣಯ್ಯ ಶೆಟ್ಟಿಯೇ 'ರಾಘು ಕೈಗೆ ೨೫ ಲಕ್ಷ ಕೊಟ್ಟಿದ್ದೆ...' ಎಂದು ಮುಖಾಮುಖಿ ಹೇಳಿಬಿಟ್ಟನೋ ರಾಘವೇಂದ್ರನನ್ನು ಕರೆದಿದ್ದೇ ಕತ್ತು ಹಿಡಿದು ಹೊರದಬ್ಬಿದ್ದಾರೆ ಮಿಶ್ರಾ.

ಹೀಗೆ ರೆಡ್‌ಹ್ಯಾಂಡ್ ಸಿಕ್ಕಿಬಿದ್ದು ಟಿವಿಒಂಭತ್ತರಿಂದ ಹೊರಗೆ ಬಂದ ರಾಘವೇಂದ್ರ ಸದ್ಯ ಹಲವು ಕೋಟಿಗಳ ಒಡೆಯ. ಕೇವಲ ಎರಡೇ ವರ್ಷದಲ್ಲಿ ರಾಜರಾಜೇಶ್ವರಿನಗರದಲ್ಲಿ ಒಂದೂವರೆ ಕೋಟಿಯ ಬಂಗಲೆ, ಯಲಹಂಕದಲ್ಲಿ ಒಂದು ಕೋಟಿಯ ಸೈಟು ಮತ್ತು ತುಮಕೂರು ರಸ್ತೆಯ ಶಿರಾದಲ್ಲಿ ಹದಿನೇಳು ಎಕರೆಯ ಫಾರ್ಮ್‌ಹೌಸ್; ಇವಿಷ್ಟೂ ರಾಘವೇಂದ್ರ ಟಿವಿಒಂಭತ್ತರ ವಾರಂಟ್ ವಸೂಲಿಯ ಮೂಲಕ ಸಂಪಾದಿಸಿದ ಆಸ್ತಿಪಾಸ್ತಿ. ಅದಕ್ಕೂ ಹಿಂದೆ ಬ್ಲಾಕ್ ಅಂಡ್ ವೈಟ್ ವರದಿಗಾರನಾಗಿದ್ದಾಗಲೇ ತನ್ನ ರೋಲ್‌ಕಾಲ್ ಸಂಪಾದನೆಯಿಂದ ಬಿಜಾಪುರದಲ್ಲೊಂದು ಐಟಿಐ ಕಾಲೇಜು ಕಟ್ಟಿಸಿ ಇಂಥಾ ದುಷ್ಟನ ಕೈಗೆ ಟಿವಿಒಂಭತ್ತರ 'ವಾರಂಟ್' ಸಿಕ್ಕರೆ ಏನೆಲ್ಲಾ ಅನಾಹುತವಾಗುತ್ತದೆ ಎಂಬುದಕ್ಕೆ ಸಾರಾಯಿ ವಿರೋಧಿ ಹೋರಾಟಗಾರ ಎ.ಟಿ. ಬಾಬು ಹಂತಕರನ್ನು ಬೆಂಬಲಿಸಿ ಆತ ಮಾಡಿದ ವರದಿಯೊಂದೇ ಸಾಕು.

ಒಬ್ಬ ಜನಪರ ಹೋರಾಟಗಾರನನ್ನು ಲಿಕ್ಕರ್ ಮಾಫಿಯಾದ ಕೊಲೆಗಡುಕರು ನಡುರಸ್ತೆಯಲ್ಲಿ ಕತ್ತರಿಸಿ ಕೊಂದರೂ, ರಾಘವೇಂದ್ರ ಕೊಂದಿದ್ದೇ ಸರಿಯೆಂದು ತನ್ನ ವಾರಂಟ್‌ನಲ್ಲಿ ಸಾಧಿಸಿದ್ದ. ಕೊಲೆಯಾದ ಪತಿಯ ಶವದ ಮುಂದೆ ಕೂತು ಎದೆಬಡಿದುಕೊಳ್ಳುತ್ತಿದ್ದ ಹೆಂಗಸನ್ನು ತೋರಿಸಿ ಗಂಡನನ್ನು ಕೊಲ್ಲಿಸಿದ್ದು ಈಕೆಯೇ ಎಂದು ಕೇಳಿ ಕೊಂದ ರೌಡಿಗಳಿಂದ ಕಾಸು ತಿಂದಿದ್ದ. ಯುವತಿಯೊಬ್ಬಳನ್ನು ಪೀಡಿಸುತ್ತಿದ್ದ ಕೀಚಕ ರೌಡಿಯೊಬ್ಬನ ರೊಕ್ಕ ತಿಂದು ಮದುವೆಯಾಗುತ್ತೇನೆಂದು ನಂಬಿಸಿ ಆಕೆಯೇ ಕೈಕೊಟ್ಟಳೆಂದು ಯುವತಿಯ ಫೋಟೋ ಹಾಕಿ ಮಾನ ಕಳೆದಿದ್ದ. ಟಿವಿಒಂಭತ್ತರ 'ವಾರಂಟ್' ಎಂಬುದು ರಾಘವೇಂದ್ರನ ಪಾಲಿಗೆ ಬ್ಲ್ಯಾಕ್‌ಮೇಲ್ ಮತ್ತು ರೋಲ್‌ಕಾಲ್‌ನ ಆಯುಧವಾಗಿದ್ದು ಬಿಟ್ಟರೆ ಸಾಮಾಜಿಕವಾಗಿ ಮುಗ್ಧ ಹೆಂಗಸರು, ನಿಸ್ಸಹಾಯಕರ ಮಟ್ಟಿಗೆ ಅದೇ ಒಂದು ಪಿಡುಗಿನಂತಾಗಿ ಹೋಗಿದೆ. ಕೊನೆಕೊನೆಗೆ ರಾಘು ಎಂಥಾ ಮಾನಗೆಟ್ಟ ಚಾಳಿಗಿಳಿದನೆಂದರೆ ಕೊಲೆ ಪಾತಕಿ ಡಾನ್ ಒಬ್ಬನಿಗೆ ತಾನು ಮಸ್ಕಾ ಹೊಡೆಯುತ್ತಿರುವ ದೃಶ್ಯವನ್ನೇ ವಾರಂಟ್‌ನಲ್ಲಿ ಬಿತ್ತರಿಸಿಕೊಂಡ.


ಪಾಪದ ಕೊಡ ಯಾವತ್ತಿದ್ದರೂ ತುಂಬಲೇಬೇಕಲ್ಲ. ಹೀಗೆ ಟಿವಿಒಂಭತ್ತುನಿಂದ ಹೊರದಬ್ಬಿಸಿಕೊಂಡು ಸತೀಶ್ ಜಾರಕಿಹೊಳಿಯ 'ಸಮಯ' ಚಾನೆಲ್ಲಿಗೆ ಅರ್ಜಿ ಹಿಡಿದು ಬಂದಿದ್ದ ರಾಘವೇಂದ್ರನನ್ನು ಅಲ್ಲಿದ್ದ ಮಂದಿ ಗೇಟಿನೊಳಕ್ಕೂ ಬಿಟ್ಟುಕೊಂಡಿಲ್ಲ.

ಇನ್ಯಾವುದೋ ಚಾನಲ್ಲಿಗೆ ಇನ್ನೆಂಥದೋ ಪ್ರೋಗ್ರಾಂ ಮಾಡ್ತೀನಿ ಎಂದು ಎಷ್ಟೇ ರೌಡಿಗಳಿಂದ, ಎಷ್ಟೇ ರೊಕ್ಕ ಎತ್ತಿ ಏನೆಲ್ಲಾ ಲಗಾಟ ಹೊಡೆದರೂ ಮಾಡಿದ ಪಾಪವಿದೆಯಲ್ಲ; ಸುಡದೇ ಬಿಡುತ್ತಾ?

● ವರದಿಗಾರ



ಕುಂದಾಪುರ: ಚರ್ಚ್ ದಾಳಿ ಹಿಂದ್ಯಾರಿದ್ದಾರೆ?



ಅವಿಭಜಿತ ದಕ್ಷಿಣ ಕನ್ನಡವೆಂದರೆ ಅದೊಂದು ಸಂಘಪರಿವಾರದ ಪ್ರಯೋಗ ಶಾಲೆಯಂತಾಗಿಹೋಗಿದೆ. ಮದೋನ್ಮತ್ತ ಹಿಂದುತ್ವದ ಆವಿಷ್ಕಾರಕ್ಕಾಗಿ ಅಮಾಯಕ ಮುಸ್ಲಿಮ್-ಕ್ರಿಶ್ಚಿಯನ್ನರ ಬಲಿ ಪಡೆವ ಎಕ್ಸ್‌ಪರಿಮೆಂಟ್‌ಗಳು ಈ ಲ್ಯಾಬ್‌ನಲ್ಲಿ ಅಹೋರಾತ್ರಿ ನಡೆಯುತ್ತಿರುತ್ತದೆ. ಆರೆಸ್ಸೆಸ್ ಡಾನ್ ಡಾ. ಕಲ್ಲಡ್ಕ ಪ್ರಭಾಕರ ಭಟ್ ಮತ್ತು ಸಂಘ ಪರಿವಾರದ ಆಸ್ಥಾನ ಪುರೋಹಿತ ಪೇಜಾವರ ಸ್ವಾಮಿಗಳೇ ಈ ಸಂಶೋಧನೆಯ ವಿಜ್ಞಾನಿಗಳು. ಪವರ್ ಪಾಲಿಟಿಕ್ಸ್‌ಗೆ ಒಂದಲ್ಲ ಒಂದು ಬರ್ಬರ-ಹೇಯ ಕೋಮು ಕಿತಾಪತಿ ಹುಟ್ಟುಹಾಕುವ ಹಿಂದೂ ಪರಿವಾರದ ಸೂತ್ರಧಾರರು ದಕ್ಷಿಣ ಕನ್ನಡ ಮತ್ತು ಉಡುಪಿಯ ಹಳ್ಳಿ-ಹಳ್ಳಿಗಳಲ್ಲೂ ಮತಾಂಧ ಪುಂಡರ ದಂಡು ಕಟ್ಟಿಕೊಂಡಿದ್ದಾರೆ!



ಉಡುಪಿ ಜಿಲ್ಲೆಯ ಕುಂದಾಪುರದಲ್ಲಂತೂ ಭಜರಂಗಿ ಭಯೋತ್ಪಾದಕರ ಆಟಾಟೋಪ ಮಿತಿಮೀರಿಹೋಗಿದೆ. ಹಿಂಜಾವೇಯ ರಾಮಣ್ಣ ಶೆಟ್ಟಿ, ಭಜರಂಗದಳದ ಗಿರೀಶ್ ಕುಂದಾಪುರು, ಸಂಗಮ್ ಸುಭಾಸ್, ಶಂಕರ ದೇವಾಡಿಗ ಮತ್ತು ಬಜೆಪಿ ತಾಲ್ಲೂಕಾಧ್ಯಕ್ಷ ಕಿಶೋರ್ ಮೊಗವೀರ, ರಾಮಸೇನೆಯ ಪ್ರದೀಪ್...... ಮುಂತಾದವರಿಗೆ ಕ್ರಿಶ್ಚಿಯನ್-ಮುಸ್ಲಿಮರ ಕಾಡಿಸಿ-ಪೀಡಿಸಿ ಕೇಕೆ ಹಾಕಿ ಅಧಿಕಾರ ರಾಜಕಾರಣದ ಮೈಲೇಜ್ ಪಡೆಯಲು ಹವಣಿಸುವುದೇ 'ನಿತ್ಯಕರ್ಮ'ದಂತಾಗಿದೆ! ಹಿಂದೂ-ಮುಸಲ್ಮಾನರ ಸಹಪಾಟಿ ಗಂಡು-ಹೆಣ್ಣು ಸ್ನೇಹದಿಂದ ಮಾತಾಡಿದರೆ ಇವರಿಗೆ ಕಾಮದ ಕಮಟು ವಾಸನೆ ಬಡಿಯುತ್ತದೆ; ಅಂಗಡಿ-ಫ್ಯಾಕ್ಟರಿಗಳಲ್ಲಿ ದುಡಿವ ಬೇರೆಬೇರೆ ಧರ್ಮದ ಯುವಕ-ಯುವತಿಯರು ಹತ್ತಿರ ನಿಂತರೆ ಸಾಕು, ಕಣ್ಣು ಉರಿಯುತ್ತದೆ. ಪಾಪದ ಸಾಬಿ ನಡೆದು ಹೋಗುತ್ತಿದ್ದರೆ ದನದ ಕಳ್ಳ ಸಾಗಾಣಿಕೆದಾರನಂತೆ ಮುಖಕ್ಕೆ ರಾಚುತ್ತಾನೆ. ಅಮಾಯಕ ಪಾದ್ರಿ ಕಂಡರೆ ಮತಾಂತರಿಯಂತೆ ಗೋಚರಿಸುತ್ತಾನೆ. ಆಗೆಲ್ಲ ಈ ಉಂಡಾಡಿ ಗುಂಡಣ್ಣಗಳಿಗೆ ಹಿಂದೂ ಧರ್ಮರಕ್ಷಣೆಯ ತೆವಲು ಕಾಡುತ್ತದೆ! ರಾತ್ರಿ ಬೆಳಗಾಗುವುದರಲ್ಲಿ ಚರ್ಚ್-ದರ್ಗಾ-ಇಗರ್ಜಿ-ಮಸೀದಿ ಪುಡಿಗಟ್ಟಲು ಹುಂಬ ಹಿಂದೂಗಳ ಛೂಬಿಡುವ ಸ್ಕೆಚ್ ರೆಡಿ ಮಾಡುತ್ತಾರೆ.

ಸಂಘ ಪರಿವಾರದ ಕ್ರೌರ್ಯ-ಕುಚೋದ್ಯದಿಂದ ಕುಂದಾಪುರ ರೌರವ ನರಕದಂತಾಗಿಹೋಗಿದೆ. ಸಂಘ ಪರಿವಾರದ ದಂಡಪಿಂಡಗಳೆಲ್ಲ ಇವತ್ತು ರಕ್ತಬೀಜಾಸುರರಂತಾಗಲು ಸ್ಥಳೀಯ ಪೊಲೀಸರು-ಶಾಸಕರು-ಮಂತ್ರಿಗಳ ತನು-ಮನ-ಧನದ ಸಹಕಾರವೇ ಕಾರಣ! ಕುಂದಾಪುರದ ಪಿಎಸ್‌ಐ ಸತೀಶ್ ಪಕ್ಕಾ ಭಜರಂಗಿ. ಈತ ಪರಿವಾರದ 'ಪಂಚಪಾತಕಿ'ಗಳ ನಿರ್ದೇಶನದಂತೆಯೇ ಡ್ಯೂಟಿ ಮಾಡುವುದು. ಸದ್ರಿ ಕಮ್ಯೂನಲ್ ಎಲಿಮೆಂಟುಗಳು ಎಸ್ಸೈ ಚೇಂಬರಿನಲ್ಲಿ ಸದಾ ಠಳಾಯಿಸುತ್ತಿರುತ್ತಾರೆ. ಸೋಗಲಾಡಿ ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟಿ ನೇರವಾಗಿ ಹಿಂದೂ ದೊಂಬಿಕೋರರಿಗೆ ಸಪೋರ್ಟ್ ಮಾಡದಿದ್ದರೂ ಪಾತಕ ಮಾಡಿಕೊಂಡು ಕೃಪಾಕಟಾಕ್ಷ ಕೇಳಿದರೆ ಕೈಬಿಡುವ ಪೈಕಿಯೂ ಅಲ್ಲ, ಏಕೆಂದರೆ, ಇಲೆಕ್ಷನ್ ಟೈಮಲ್ಲಿ ಇವರೇ ಜೀವ ಬಿಟ್ಟು ಬಜೆಪಿ ಪರ ಕೆಲಸ ಮಾಡುವುದು. ಪಕ್ಕದ ಉಡುಪಿಯ ಹೇತ್ಲಾಂಡಿ ಡಾ. ಆಚಾರ್ಯನೆಂಬ ಪಕ್ಕಾ ಚೆಡ್ಡಿಯೇ ಹೋಮ್ ಮಿನಿಸ್ಟರ್! ಈಗ ಊಹಿಸಿ, ರಕ್ತದ ರುಚಿ ಕಂಡ ಹಿಂದೂ ಹುಲಿಗಳು ಅದ್ಯಾವ ಪರಿ ಕುಂದಾಪುರದಲ್ಲಿ ಕೊಬ್ಬಿರಬಹುದೆಂದು....

ಬಾಲಯೇಸು ಮೂರ್ತಿ ಭಗ್ನ!

ಕುಂದಾಪುರದಲ್ಲಿ ಭಜರಂಗಿ ಭೂಪರು ಕಂಡಕಂಡ ಚರ್ಚ್ ಮಸೀದಿಗೆ ಕಲ್ಲು ಹೊಡೆಯುವುದು, ಮುಸ್ಲಿಮ್-ಕ್ರಿಶ್ಚಿಯನ್ನರನ್ನು ವಿನಾಕಾರಣ ಬಡಿದು ಶ್ರೀರಾಮನಿಗೆ ರಕ್ತತರ್ಪಣ ನೀಡುವುದು ಮಾಮೂಲಿಯಾಗಿ ಅದ್ಯಾವುದೋ ಕಾಲವಾಗಿ ಹೋಗಿದೆ! ಮೊನ್ನೆ ಶನಿವಾರ (13.2.10) ಕುಂದಾಪುರದಿಂದ ಅನತಿದೂರದಲ್ಲಿರುವ ಕೋಟೇಶ್ವರದ ಬಳಿಯ ಕಟ್ಕೇರಿಯ ಕಾರ್ಮೆಲೈಸ್ ಚರ್ಚ್ ಮೇಲೆ ಭಜರಂಗಿ ಪಿರ್ಕಿಗಳು ದಾಳಿ ಮಾಡಿದ್ದಾರೆ. ಈ ಪಾದ್ರಿಗಳ ಆಶ್ರಮದ ದ್ವಾರದಲ್ಲಿದ್ದ ಬಾಲಯೇಸು ಪ್ರತಿಮೆ ಮುರಿದು ಹಾಕಿದ್ದಾರೆ. ವಿನಾಕಾರಣ ಬಾಲ ಯೇಸು ಮೂರ್ತಿ ಭಗ್ನ ಮಾಡಿ ಗೊಂದಲ-ಗಲಾಟೆ ಎಬ್ಬಿಸಿ 'ಲಾಭ' ಮಾಡಿಕೊಳ್ಳುವ ಹಿಂದೂತ್ವದ ಮನೋರೋಗಿಗಳಿಗೆ ಕ್ರಿಶ್ಚಿಯನ್ ಸಮುದಾಯದ ತಾಳ್ಮೆ-ಸಹನೆ-ಶಾಂತಿಯಿಂದಾಗಿ ಏನೂ ಗಿಟ್ಟಲ್ಲ ಪಾಪ!



ಕಟ್ಕೇರಿಯ ಬಾಲಯೇಸು ಮಂದಿರ-ಫಾದರ್ ಆಶ್ರಮಗಳೆಂದರೆ ಭಜರಂಗಿಗಳಿಗೆ ಹಿಂದಿನಿಂದಲೂ ಅದೇನೋ ಅಲವರಿಕೆ-ನಂಜು. ಹಿಂದೆರಡು ಬಾರಿಯೂ ಈ ಆಶ್ರಮದ ಮೇಲೆ ಹಿಂದೂ ಸೈತಾನರು ಮುಗಿಬಿದ್ದಿದ್ದರು. ಈಗಾಗಿರುವುದು ಮೂರನೇ ಅಟೆಮ್ಟು! ಈ ಕ್ರೈಸ್ತ ಮಂದಿರದಲ್ಲಿ ಮತಾಂತರ ನಡೆಯುತ್ತದೆಂದು ಹಿಂದೂವಾದಿಗಳು ಹುಯಿಲೆಬ್ಬಿಸಿದ್ದರು; ಅಂಕದಕಟ್ಟೆಯ ಸರ್ಜನ್ ಆಸ್ಪತ್ರೆಗೆ ಟ್ರೀಟ್‌ಮೆಂಟಿಗೆಂದು ಹೋಗಿದ್ದ ಫಾದರ್ ಸಿಲ್ವೆಸ್ಟರ್ ಪೆರೀರಾ ಅವರನ್ನೇ ಬೈದು ಹೊಡೆದು ಹಿಂಸಿಸಿ ವಿಕೃತಾನಂದ ಹೊಂದಿದ್ದರು.

ಈ ಹಲ್ಲೆ ಹಿಂದೂ ಜಾಗರಣಾ ವೇದಿಕೆಯ ಜಗಳಗಂಟ ಹಿರೇಮಣಿ ರಾಮಣ್ಣ ಶೆಟ್ಟಿ ಎಂಬ ಬಡ್ಡಿ ಮಾಫಿಯಾ ದೊರೆಯ ಲೀಡರ್ ಶಿಪ್ಪಿನಲ್ಲಿ ನಡೆದಿತ್ತು, ಆದಾಗಿದ್ದು 2007 ರ ಜೂನ್ 25 ರಂದು. ಆ ಬಳಿಕ ಈ ಚರ್ಚ್ ಎರಡನೇ ಬಾರಿ ಭಜರಂಗಿಗಳ ದಾದಾಗಿರಿಗೆ ಈಡಾಗಿದ್ದು ರಾಜ್ಯಾದ್ಯಂತ ಚರ್ಚ್‌ಗಳ ಮೇಲೆ ವ್ಯವಸ್ಥಿತವಾಗಿ ಹಿಂದೂ ಪರಿವಾರ ಸಂಘಟನೆಗಳು ದಾಳಿ ಮಾಡಿದ ಸಂದರ್ಭದಲ್ಲಿ, ಆಗಲೂ ಬಾಲಯೇಸುವಿನ ಮೂರ್ತಿಯ ಇರಿಸಲಾಗಿದ್ದ ಗಾಜಿನ ಗುಡಿಗೆ ಕಲ್ಲು ತೂರಿ ಚೂರಾಗಿಸಿ ಪ್ರತಿಮೆ ಧ್ವಂಸ ಮಾಡಲಾಗಿತ್ತು, ಈ ಚರ್ಚ್ ಮೇಲೆ ದ್ವೇಷಾಸೂಯೆ ಬೆಳೆಸಿಕೊಂಡಿರುವ ರಾಮಣ್ಣ ಶೆಟ್ಟಿಯ ರಾದ್ಧಾಂತದ ಪಡೆ ಮತ್ತೀಗ ದಾಳಿ ಮಾಡಿ ಕುಂದಾಪುರ ಪುರಸಭೆಯ ಮಾಜಿ ಅಧ್ಯಕ್ಷ ಜಾನ್ ಡಿಸೋಜಾನ ಮನೆಗೂ ಕಲ್ಲು ತೂರಿ ಕಿಟಕಿ ಒಡೆದು ಹಾಕಿದ್ದಾರೆ ತಲೆತಿರುಕ ಹಿಂದೂವಾದಿಗಳು.

ಈಗ್ಯಾಕೆ ಮೂರ್ತಿ ಮುರಿದರು?

ಬರೋಬ್ಬರಿ ಎರಡೂವರೆ ವರ್ಷದ ಹಿಂದೆ ಫಾದರ್ ಸಿಲ್ವೆಸ್ಟರ್ ಪೆರೀರಾರನ್ನು ಥಳಿಸಿದಾಗ ಹಿಂಜಾವೇ ಫಂಟರ್ ರಾಮಣ್ಣ ಶೆಟ್ಟಿ ಬಳಗದ ಮೇಲೆ ಮೂರ್ನ್ಮಾರು ಕೇಸ್ ಬಿದ್ದಿತ್ತು, ನೊಂದಿದ್ದ ಕ್ರೈಸ್ತರು ಒಂದು ಪ್ರೈವೇಟ್ ಕಂಪ್ಲೇಂಟೂ ಜಡಿದಿದ್ದರು. ಸಾಮ್ಯೆಲ್ ಎಂಬುವವರು ಬಲವಾದ ಕಾನೂನು ಹೋರಾಟ ನಡೆಸಿ ಈಚೆಗೆ ತೀರಿಯೂ ಹೋದರು. ಈ ಕೋರ್ಟ್-ಕಚೇರಿ ಕೇಸುಗಳಿಂದ ಹತಾಶನಾಗಿ ಹೋಗಿದ್ದ ರಾಮಣ್ಣನ ರೌಡಿ ಪಡೆ ಹುಚ್ಚು ಕೆರಳಿದಾಗೆಲ್ಲ ಈ ಚರ್ಚ್ ಮೇಲೆ ದಾಳಿ ಮಾಡಿ ತೀಟೆ ತೀರಿಸಿಕೊಳ್ಳುವುದು ರೂಢಿಯಾಗಿಹೋಗಿತ್ತು, ಕ್ರಿಶ್ಚಿಯನ್ ವಿರುದ್ಧ ಹಿಂದೂ ಮೇನಿಯಾ ಭುಗಿಲೆದ್ದ ಸಂದರ್ಭವನ್ನು ಮುಯ್ಯಿ ತೀರಿಕೆಗೆ ಈ ಭಜರಂಗಿ-ಹಿಂಜಾವೇ ಹರಾಮಿಗಳು ಬಳಸಿಕೊಂಡಿದ್ದಾರೆ. ಈಗ ಮುತಾಲಿಕ್ ಮುಸುಡಿಗೆ ಮಸಿ ಬಳಿದ ಬಳಿಕವು ಭಾನ್ಗಡಿ ಸಮಯ ಬಳಸಿಕೊಂಡು ರಾಮಣ್ಣನ ಮಿತ್ರಮಂಡಳಿ ಕಟ್ಕೇರಿಯ ಕಾರ್ಮೆಲೈಸ್ ಫಾದರ್ ಚರ್ಚ್‌ಗೆ ಕಲ್ಲು ತೂರಿ ಮೂತಿ ಭಗ್ನ ಮಾಡಿದ್ದಾರೆ.

ಆದರೆ ಪೊಲೀಸರು ಮಾತ್ರ ಯಾವ ದೊಂಬಿಕೋರ ಹಿಂದೂವನ್ನೂ ಬಂಧಿಸುವ ಗೋಜಿಗೆ ಹೋಗಿಲ್ಲ. ಇಡೀ ಕರಾವಳಿಗೆ ಕುಂದಾಪುರ ಚರ್ಚ್ ದಾಳಿ ಹಿಂದ್ಯಾರಿದ್ದಾರೆಂಬುದು ಗೊತ್ತಿದ್ದರೂ ಹೇತ್ಲಾಂಡಿ ಗೃಹ ಸಚಿವ ಆಚಾರ್ಯ ಮತ್ತವನ ನಾಲಾಯಕ್ ಪೊಲೀಸ್ ಇಲಾಖೆಗೆ ಆರೋಪಿಗಳ ಹಿಡಿಯಲಾಗಿಲ್ಲ! ರಾಮಣ್ಣ ಶೆಟ್ಟಿಯ ಹಿಡಿದು ತದುಕಿದರೆ ಪಾತಕಿಗಳ್ಯಾರೆಂದು ಪೊಲೀಸರಿಗೆ ಗೊತ್ತಾಗುತ್ತದೆ; ಆ ಧೈರ್ಯ ಪೊಲೀಸರಿಗೆ ಇಲ್ಲ; ಡ್ಯೂಟಿ ಮಾಡಲು ಯಡ್ಡಿ ಸರ್ಕಾರವೂ ಬಿಡುತ್ತಿಲ್ಲ.

ಈಗ ನಿಮಗೆ ಎಲ್ಲವೂ ಸ್ಪಷ್ಟವಾಗಿರಬಹುದು. ಕಟ್ಕೇರಿಯ ಕಾರ್ಮೆಲೈಸ್ ಫಾದರ್ ಆಶ್ರಮ ಮೇಲಿನ ದಾಳಿಯ ಹಿಂದೆ ಭಜರಂಗಿ-ಬಜೆಪಿ ಭಂಡರಾದ ರಾಮಣ್ಣ ಶೆಟ್ಟಿ, ಗಿರೀಶ್ ಕುಂದಾಪುರ, ಸುಭಾಸ್ ಸಂಗಮ್, ಕಿಶೋರ ಮೊಗವೀರ, ಶಂಕರ ದೇವಾಡಿಗರಂಥ ಅಲ್ಪಸಂಖ್ಯಾತರ ಕಾಡುವ ಶನಿಗಳಿದ್ದಾರೆ. ಈ ದೊಂಬಿದಾರರನ್ನು ಎಮ್ಮೆಲ್ಲೆ ಹಾಲಾಡಿ ಶೆಟ್ಟಿ, ಎಂಪಿ ಸದಾನಂದ ಗೌಡ, ಮಂತ್ರಿ ಡಾ. ಆಚಾರ್ಯ, ಹಣಕಾಸು ಆಯೋಗದ ಅಧ್ಯಕ್ಷ ಕಂ ಸ್ಥಳೀಯ ಬಜೆಪಿ ಭೀಷ್ಮಪ್ಪ ಎ.ಜಿ. ಕೊಡ್ಗಿಯಂಥ ಖತರ್‌ನಾಕ್ ಚೆಡ್ಡಿಗಳು ಕಾಪಾಡುತ್ತಿದ್ದಾರೆ. ಪಿಎಸ್‌ಐ ಸತೀಶನಂಥವರು ಸಮಾಜಘಾತಕರನ್ನು 'ಧರ್ಮಾಧಾರ'ದಲ್ಲಿ ಬಚಾವ್ ಮಾಡುತ್ತಿದ್ದಾರೆ.

ಒಟ್ಟಿನಲ್ಲಿ ಕರಾವಳಿಯಲ್ಲಿ ಕಾನೂನಿನ ಆಡಳಿತ ಸತ್ತುಬಿದ್ದಿದೆ. ಪ್ರಭುತ್ವ ಪಾತಕಿಗಳ ಕೈವಶವಾಗಿದೆ. ಅಮಾಯಕರು, ಸೆಕ್ಯುಲರ್‌ಗಳ ಜೀವ ತಿನ್ನುವ ಹಿಂಸೋನ್ಮಾದಗಳ ಹಿಂದೂತ್ವಕ್ಕೆ ಸರ್ಕಾರವೇ ಸಿಂಧುತ್ವ ಕೊಡುತ್ತಿರುವುದು ಘೋರವಾಗಿದೆ!

ನಹುಶ

ಪಾತಕಿಗಳ ಕಾಪಾಡುತ್ತಿರುವ ಪೊಲೀಸರು!

ಕುಂದಾಪುರದ ಕಟ್ಕೇರಿ ಬಾಲಯೇಸು ಮಂದಿರದ ಮೇಲಾದ ದಾಳಿಯ ನಂತರದ ಪೊಲೀಸರ ನಡವಳಿಕೆ ನೋಡಿದರೆ ಎಂಥವರಿಗೂ ಬಜೆಪಿ ಸರ್ಕಾರ ಪಾತಕಿ ಹಿಂದೂಗಳ ರಕ್ಷಣೆಗೆ-ಪ್ರಕರಣಕ್ಕೆ ಗೋರಿ ತೋಡಲಿಕ್ಕೆ ಪ್ರಯತ್ನಿಸುತ್ತಿರುವ ಅನುಮಾನ ಬರುತ್ತದೆ. ಶನಿವಾರ ರಾತ್ರಿ ಭಜರಂಗಿಗಳಿಂದ ಭಗ್ನಗೊಂಡಿದ್ದ 'ವಿಕೃತ' ಮೂರ್ತಿಯನ್ನು ಪಾದ್ರಿ ಮರುದಿನ ಮುಂಜಾನೆ ಪೂಜೆ ಹೊತ್ತಲ್ಲಿ ನೋಡಿದ್ದಾರೆ. ಆದರೆ ಆತ ಪೊಲೀಸು ದೂರು ಕೊಡಲು ಹೋಗಿಲ್ಲ.


ಹಾಗೆ ಪೊಲೀಸು-ಕಂಪ್ಲೇಂಟು ಎಂದೆಲ್ಲ ಪ್ರಕರಣ ಬೆಳೆಸಿದರೆ ಕ್ರೈಸ್ತರು ಕೆರಳಬಹುದು. "ಸಣ್ಣ ಕಾರಣ"ಕ್ಕೆ ಶಾಂತಿ ನೆಮ್ಮದಿ ಕೆಡಬಹುದೆಂಬ ಸದುದ್ದೇಶದಿಂದ ಫಾದರ್ ಸುಮ್ಮನಿದ್ದರು. ಆದರೆ ಪೊಲೀಸರ ಲಗುಬಗೆಯಿಂದ ಪ್ರಕರಣ ಮುಚ್ಚಿಹಾಕಲು ಮಾಡಬಾರದ್ದೆಲ್ಲ ಮಾಡಿದ್ದು ಕ್ರೈಸ್ತರನ್ನು ಡಿಸ್ಟರ್ಬ್ ಮಾಡಿತು. ಕ್ರೈಸ್ತರ ಗುಂಪುಗುಂಪಾಗಿ ಕಾರ್ಮೆಲೈಸ್ ಚರ್ಚ್ ಬಳಿ ಜಮೆಯಾಗ ತೊಡಗಿದರು. ಆಗ ಫಜೀತಿಗೆ ಬಿದ್ದ ಸಿಪಿಐ ವಿನಯ ಗಾಂವ್ಕರ್ ಏಕಪಕ್ಷೀಯವಾಗಿ ಭಗ್ನಗೊಂಡ ಬಾಲಯೇಸು ಪ್ರತಿಮೆ ಠಾಣೆಗೆ ಹೊತ್ತೈದುಬಿಟ್ಟರು. ಅಷ್ಟೇ ಅಲ್ಲ ಫಾದರ್ ಮೇಲೆ ಪ್ರೆಷರ್ ಹಾಕಿ ಅಂಥದೇ ಹೊಸದೊಂದು ಮೂರ್ತಿ ಪ್ರತಿಷ್ಠಾಪಿಸಿದರು. ಕ್ರೈಸ್ತರ ಪವಿತ್ರ ಪ್ರತಿಮೆ ಧ್ವಂಸ ಮಾಡಿದ್ದು ಯಾರು, ಜಾಕೋಬ್ ಡಿಸೋಜಾ ಎಂಬ ಮಾಜಿ ಕೌನ್ಸಿಲರ್ ಮನೆಯ ಕಿಟಕಿ ಬಡಿದರ್ಯಾರೆಂಬುದು ಭಜರಂಗಿ ಪಿಎಸ್‌ಐ ಸತೀಶ್‌ಗೆ ಗೊತ್ತಿರಲೇಬೇಕು. ಆದರೆ ಈವರೆಗೆ ಯಾವ ಹಿಂದೂ ಹರಾಮಿಯ ಕೂದಲೂ ಕೊಂಕಿಲ್ಲ, ಸಿಪಿಐ ಗಾಂವ್ಕರ್ ಎಸ್‌ಐನಂಥ ಉಗ್ರ ಭಜರಂಗಿಯಲ್ಲದಿದ್ದರೂ ಅಧೀನ ಅಧಿಕಾರಿಯನ್ನು ಅಂಕೆಯಲ್ಲಿಲಾಗದ 'ಕನ್‌ವರ್ಟೆಡ್ ಚೆಡ್ಡಿ'ಯಂತಾಗಿದ್ದಾರೆ, ಪಾಪ. ಈ ಕಳ್ಳ-ಪೊಲೀಸ್ ಆಟ ನೋಡಿದರೆ ಕಟ್ಕೇರಿ ಚರ್ಚ್ ದಾಳಿ ಧೀರರು ಇನ್ನಷ್ಟು ಇಂಥ ಬರ್ಬರ-ಹೇಯ ಕಾರ್ಯಾಚರಣೆ ಸ್ಕೆಚ್ ಹಾಕುವ ಮುನ್ಸೂಚನೆ ಗೋಚರಿಸುತ್ತದೆ.

ಚರ್ಚ್ ದಾಳಿಯಾದ ನಾಲ್ಕೇ ದಿನಕ್ಕೆ ಜಾಕ್ಸನ್ ಡಿ'ಸಿಲ್ವಾ ಎಂಬ ಬಿಬಿಎಂ ವಿದ್ಯಾರ್ಥಿ ಮೇಲೆ ಹಿಂದೂ ರೌಡಿಗಳು ನಡುರಸ್ತೆಯಲ್ಲಿ ಹಾಡುಹಗಲೇ ಹಲ್ಲೆ ಮಾಡಿದ್ದಾರೆ! ಬಾಲಯೇಸು ಪ್ರತಿಮೆ ಭಗ್ನವಾದಾಗ ಚರ್ಚ್ ಎದುರು ಸೇರಿದ ಜನಜಂಗುಳಿಯಲ್ಲಿ ಈ ಹುಡುಗನೂ ಇದ್ದ, ಭಾವಾವೇಶಕ್ಕೆ ಒಳಗಾಗಿ ಅಪರಾಧಿಗಳಿಗೆ ಶಿಕ್ಷೆಯಾಗಬೇಕೆಂದು ಕೂಗಾಡಿದ್ದ, ಇದು ಭಜರಂಗಿಗಳ ಕಣ್ಣು ಕೆಂಪಾಗಿಸಿತ್ತು, ಕಾಲೇಜಿಗೆ ಹೊರಟ್ಟಿದ್ದ ಆ ಹುಡುಗನ ಫಾಲೋ ಮಾಡಿ ಬಂದು ಕುಂದಾಪುರದ ಗೀತಾಂಜಲಿ ಟಾಕೀಸ್ ಬಳಿ ಸಂಘ ಪರಿವಾರದ ರಕ್ಕಸರು ಥಳಿಸಿದ್ದಾರೆ. ಚೆಡ್ಡೀಕರಣಗೊಂಡಿರುವ ಪೊಲೀಸು ಪಡೆ ಏನು ಆಗಿಲ್ಲವೆಂಬಂತೆ ಕಣ್ಣು-ಬಾಯಿ ಮುಚ್ಚಿಕೊಂಡು ಕೂತಿದೆ. ಭಜರಂಗಿಗಳ ಆಡಳಿತಕ್ಕೆ ಒಳಪಟ್ಟಿರುವ ಕುಂದಾಪುರದಲ್ಲಿ ಅರಾಜಕತೆ ತಾಂಡವವಾಡುತ್ತಿದೆ. ಯಡ್ಡಿ-ಆಚಾರ್ಯರ ಅಸಲಿಯತ್ತ ತೋರಿಸುತ್ತಿದೆ!

ಕಾರ್ಟೂನ್ ಕಾರ್ನರ್




ಚಂಬಲ್ ಕಣಿವೆ ಕಂಡುಬಂದ ಬೊಂಬಾಟ್ ಜ್ಯೋತಿಷಿ!



"ಈ ವಾರ ನಿಮ್ಮ ಗ್ರಹಗತಿಯಲ್ಲಿ ಶನಿಯು ನಿಮ್ಮ ಎಡಕ್ಕೆ ಬಂದಿದ್ದು, ರಾಹು-ಕೇತುಗಳು ನಿಮ್ಮ ಹೆಗಲೇರಿರುವುದರಿಂದ ನೀವು ಎಚ್ಚರದಿಂದಿರಬೇಕು. ದುಷ್ಟರು ನಿಮ್ಮ ಸಂಪತ್ತು ದೋಚಲು ಯತ್ನಿಸುವ ಸಾಧ್ಯತೆಗಳಿವೆ....." ಹೀಗೆ ಬಂದ ಭಕ್ತಾದಿಗಳಿಗೆ ಬುರುಡೆ ಶಾಸ್ತ್ರ ಹೇಳಿ, ಭಯ ಹುಟ್ಟಿಸಿ ಹಣ ಕೀಳುತ್ತಿದ್ದ ಶ್ರೀಮಂತ ಜ್ಯೋತಿಷಿಯೊಬ್ಬ ತನ್ನ 'ಗ್ರಹಗತಿ' ತಾನೇ ಅರಿಯದೇ ಸಾವಿನಮನೆ ಹೊಕ್ಕು ವಾಪಸು ಬಂದಿದ್ದಾನೆ!

ಕಳೆದ ವಾರ ಎರಡು-ಮೂರು ದಿನಗಳ ಕಾಲ ದಿನಪತ್ರಿಕೆಗಳ ಸ್ಕಂಸುದ್ದಿಗಳಲ್ಲಿ ಜ್ಯೋತಿಷಿಯೊಬ್ಬನ ಕಿಡ್ನ್ಯಾಪ್ ಮತ್ತು ಅದು ಸುಖಾಂತ್ಯಗೊಂಡ ಸುದ್ದಿಗಳನ್ನು ನೀವು ಓದಿರುತ್ತೀರಿ. ಶ್ರೀಮಂತ ವ್ಯಾಪಾರಿಗಳು, ಅಂತಹ ವ್ಯಾಪಾರಿಗಳ ಮಕ್ಕಳು ಅಥವಾ ಸಾಫ್ಟ್‌ವೇರ್ ಇಂಜಿನಿಯರ್‌ಗಳನ್ನು ಅಪಹರಿಸಿ ಭಾರೀ ಮೊತ್ತದ ಹಣಕ್ಕೆ ಬೇಡಿಕೆ ಇಡುವುದು ಆಗಾಗ ನಡೆಯುತ್ತಿರುತ್ತದೆ. ಈಗ ಆ ಶ್ರೀಮಂತರ ಲಿಸ್ಟ್‌ಗೆ ಬೆಂಗಳೂರಿನ ಕವಡೆ ಎಕ್ಸ್‌ಪರ್ಟ್ಸ್ ಅಲಿಯಾಸ್ ಜ್ಯೋತಿಷಿಗಳೂ ಸೇರಿದ್ದಾರೆ.

ಹೀಗೆ ಇತ್ತೀಚೆಗೆ ಕಿಡ್ನ್ಯಾಪ್ ಆಗಿ, ಪೊಲೀಸರ ಕಾರ್ಯಾಚರಣೆಯಿಂದ ಸೇಫಾಗಿ ಬಂದು ಮತ್ತೆ ಚಕ್ಕಳಮುಕಳಿ ಹಾಕಿ ಕವಡೆ ತೂರುತ್ತ ಕುಂತವನು ಕುರುಬರಹಳ್ಳಿಯ ಜ್ಯೋತಿಷಿ ಮಹಾಶಯ ಲಕ್ಕಪ್ಪ ಶಾಸ್ತ್ರಿ ಗೌಡ....



ಈತನನ್ನು ಅಪಹರಿಸಿದವರು ಯಾರು ಗೊತ್ತೆ?

ಈತನ ಬಳಿಯೇ ಒಂದು ವರ್ಷದಿಂದ ಹಳ್ಳು ಭವಿಷ್ಯ ಕೇಳಿಕೇಳಿ ಯಾವ ಕೆಲಸದಲ್ಲೂ ಹಣ ಸಂಪಾದಿಸಲಾಗದ ಸಂತೋಷ್ ಎಂಬಾತ... ಈತ ಲಕ್ಕಪ್ಪಗೌಡನ ಪರ್ಮನೆಂಟು ಕ್ಲೈಂಟು! ಹೀಗೆ ಭವಿಷ್ಯ ಎಂಬ ಕಪಟವಿದ್ಯೆಯಿಂದಲೇ ಲಕ್ಕಪ್ಪ ಶಾಸ್ತ್ರಿ ಶ್ರೀಮಂತನಾಗಿದ್ದನ್ನು ಗಮನಿಸಿದ್ದ ಸಂತೋಷ್ ಈ ಲಕ್ಕನನ್ನು ಅಪಹರಿಸಿದರೆ ತನಗೆ ಖಂಡಿತಾ 'ಲಕ್ಕು' ಹೊಡೆದೇ ಹೊಡೆಯುತ್ತೆ ಎಂದು ಸ್ಕೆಚ್ ಹಾಕಿದ.

ಇದಕ್ಕಾಗಿ ತನ್ನ ಗೆಳೆಯರಾದ ಸತೀಶ್, ಗುರುಮಿಯರನ್ನು ಸೇರಿಸಿಕೊಂಡ ಸಂತೋಷ್ ಜ್ಯೋತಿಷಿ ಲಕ್ಕನಲ್ಲಿ ಹೋಗಿದ್ದಾನೆ. ಮಧ್ಯಪ್ರದೇಶದ ತನ್ನ ಸ್ವಂತೂರಿನ ಮನೆಯ ವಾಸ್ತು ಸರಿಯಿಲ್ಲ; ಅಲ್ಲಿಗೆ ಬಂದು ಸಮಸ್ಯೆ ಬಗೆಹರಿಸಿ ಎಂದಿದ್ದಾನೆ. ರೊಕ್ಕ ಸಿಕ್ಕರೆ ಎಲ್ಲಿಗಾದರೂ ಹೋಗಲು ರೆಡಿ ಇರುವ ಲಕ್ಕ ೨೦ ಸಾವಿರ ರೂ. ಪಡೆದು ಸಂತೋಷನೊಂದಿಗೆ 'ವಾಸ್ತು ಜರ್ನಿ' ಶುರು ಮಾಡಿಯೇಬಿಟ್ಟಿದ್ದಾನೆ. ಕಂಡಕಂಡವರ ಭವಿಷ್ಯವನ್ನು ಕ್ಷಣಾರ್ಧದಲ್ಲಿ ಕಂಡುಹಿಡಿಯುವ' ಲಕ್ಕಪ್ಪನಿಗೆ ತನ್ನ ಭವಿಷ್ಯವೇ ಅಂದು ಗೊತ್ತಾಗಲಿಲ್ಲ, ಪಾಪ!

ಐದನೇ ತಾರೀಖಿನಂದು ಬೆಂಗಳೂರಿನಿಂದ ಗ್ವಾಲಿಯರ್ ಟ್ರೇನ್ ಹತ್ತಿದ್ದಾರೆ ಸಂತೋಷ್ ಮತ್ತು ಗೆಳೆಯರು; ಹರಕೆಯ ಕುರಿ ಲಕ್ಕನೂ ಖುಷಿಯಿಂದಲೇ ಟ್ರೇನಿನಲ್ಲಿ ಪವಡಿಸಿದ್ದಾನೆ. ಆಗಾಗ ತಿಂಡಿ, ಊಟ, ತಂಪು ಪಾನೀಯಗಳ ವ್ಯವಸ್ಥೆಯಾಗಿದ್ದರಿಂದ ತಣ್ಣಗಾದ ಲಕ್ಕಪ್ಪ ಶಾಸ್ತ್ರಿ ತನ್ನ ಈ 'ಔಟ್ ಆಫ್ ಸ್ಟೇಟ್' ಡಿಮ್ಯಾಂಡ್ ನೆನೆದು ಒಳಗೊಳಗೇ ಖುಷಿ ಪಟ್ಟಿದ್ದಾನೆ. ವಾಪಸ್ಸಾದ ಮೇಲೆ ತನ್ನ ಜ್ಯೋತಿಷಿ ಬೋರ್ಡ್‌ನಲ್ಲಿ 'ರಾಜಸ್ತಾನ, ಮಧ್ಯಪ್ರದೇಶಗಳಲ್ಲಿ ಬೇಡಿಕೆಯಿರುವ ಜ್ಯೋತಿಷಿ' ಎಂದು ಬರೆಸಲು ಯೋಚಿಸಿದ್ದಾನೆ.

ಇರಲಿ, ಅಂತೂ ಏಳನೇ ತಾರೀಖು ಮುಂಜಾನೆ ಗ್ವಾಲಿಯರ್ ತಲುಪಿದ್ದಾರೆ. ಲಕ್ಕಪ್ಪ ವರ್ಷದಿಂದ ಬುರುಡೆ ಶಾಸ್ತ್ರ ಹೇಳಿ ಸಂತೋಷನನ್ನು ಅದೆಷ್ಟು ಕಂಗಾಲು ಮಾಡಿದ್ದ ಎನ್ನುವುದಕ್ಕೆ ಮುಂದಿನ ಘಟನೆಯೇ ಸಾಕ್ಷಿಯಾಗಿದೆ.

ಲಕಪ್ಪನನ್ನು ಗ್ವಾಲಿಯರ್‌ನಿಂದ ಸೀದಾ ಚಂಬಲ್ ಕಣಿವೆಗೆ ಹೊತ್ತೊಯ್ದಿದೆ ಸಂತೋಷನ ತಂಡ. ಡಕಾಯಿತರ ಹಾವಳಿ ಇರುವ ಚಂಬಲ್ ಕಣಿವೆಯ ದಟ್ಟ ಕಾಡನ್ನು ನೋಡಿಯೇ ಶಾಸ್ತ್ರಿಗೆ ಒಂದಾ ಬಂದಿದೆ. ದಟ್ಟ ಅರಣ್ಯದ ಮಧ್ಯೆ ಶಾಸ್ತ್ರಿಯನ್ನು ಕೂಡ್ರಿಸಿದ ಸಂತೋಷ್ ತಂಡ ಮೊದಲಿಗೆ ತಲೆ, ಮುಸುಡಿ, ಬೆನ್ನುಗಳಿಗೆ ಒಂದಿಷ್ಟು ಗುದ್ದು ಕೊಟ್ಟಿದ್ದಾರೆ. ಮನೆಗೆ ಫೋನ್ ಮಾಡಿ ೫೦ ಲಕ್ಷ ರೂ. ಹಣ ತರಿಸಲು ಹೇಳಿದ್ದಾರೆ. ಹಣ ಕೊಡದಿದ್ದರೆ ತನ್ನ ಭವಿಷ್ಯವೇ ಮುಗೀತು ಎಂದು ತರತರ ನಡುಗಿದ ಶಾಸ್ತ್ರಿ ಬೆಂಗಳೂರಿನ ತನ್ನ ಮನೆಯವರಿಗೆ ಈ ವಿಷಯ ತಿಳಿಸಿದ್ದಾನೆ. ಅಪಹರಣಕಾರರೂ ಶಾಸ್ತ್ರಿಯ ಮನೆಯವರೊಂದಿಗೆ ಮಾತಾಡಿದ್ದಾರೆ. 50 ಲಕ್ಷದ ಮೊತ್ತ 40, 30 ಆಗಿ ಕೊನೆಗೆ ೫ ಲಕ್ಷಕ್ಕೆ ಬಂದಿದೆ. ಅಷ್ಟೊತ್ತಿಗೆ ಶಾಸ್ತ್ರಿ ಮನೆಯವರು ಬಸವೇಶ್ವರನಗರ ಪೊಲೀಸ್ ಠಾಣೆಯನ್ನು ಸಂಪರ್ಕಿಸಿದ್ದಾರೆ. ನಂತರ ಪೊಲೀಸರು ದೂರವಾಣಿ ಕರೆಗಳನ್ನು ಜಾಲಾಡಿ, ಅಪಹರಣಕಾರರು ಮಧ್ಯ ಪ್ರದೇಶದ ಚಂಬಲ್ ಕಣಿವೆಯಲ್ಲಿರುವುದನ್ನು ಮಧ್ಯಪ್ರದೇಶದ ಪೊಲೀಸರ ಸಹಾಯದಿಂದ ಪತ್ತೆ ಹಚ್ಚಿದ್ದಾರೆ. ಮಧ್ಯಪ್ರದೇಶದ ಪೊಲೀಸರು ಕಾರ್ಯಾಚರಣೆ ನಡೆಸಿದಾಗ ಅಪಹರಣಕಾರರು, ಪೊಲೀಸರ ನಡುವೆ ಗುಂಡಿನ ಚಕಮಕಿಯೂ ನಡೆಯಿತಂತೆ! ಸಂತೋಷ್, ಸತೀಶ್ ಮತ್ತು ಗುರುಮಿಯ ಸಿಕ್ಕಿಬಿದ್ದಿದ್ದಾರೆ. ರಾಮೋಜಿಸಿಂಗ್ ಎಂಬ ಚಂಬಲ್ ಡಕಾಯಿತ ಪರಾರಿಯಾಗಿಬಿಟ್ಟನಂತೆ!

ಏನೇ ಇರಲಿ, ನಮ್ಮ ಲಕ್ಕಪ್ಪ ಶಾಸ್ತ್ರಿಯ ಲಕ್ಕು ನೆಟ್ಟಗಿತ್ತು... ಸಾವಿನ ಮನೆಯಿಂದ ಪಾರಾಗಿ ಬಂದಿರುವ ಲಕ್ಕಪ್ಪ ಈಗ ಕುರುಬರಹಳ್ಳಿಯ ತನ್ನ ಜ್ಯೋತಿಷ್ಯಾಲಯದಲ್ಲಿ ಕುಳಿತು, 'ದೇವರೇ ನನ್ನನ್ನು ಕಾಪಾಡಿದ' ಎಂದು ಹೇಳುತ್ತ ತಾನು ದೈವಾಂಶಸಂಭೂತ ಎಂಬಂತೆ ರೀಲು ಬಿಡುತ್ತಿದ್ದಾನೆ. ಈಗ ಪುಕ್ಕಟೆ ಸಿಕ್ಕಿರುವ ಪ್ರಚಾರವನ್ನೇ ದಾಳ ಮಾಡಿಕೊಳ್ಳಲು ಹೊರಟಿರುವ ಲಕ್ಕಪ್ಪ ಶಾಸ್ತ್ರಿ ತನ್ನ ಕ್ಲೈಂಟುಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಸ್ಕೆಚ್ ಹಾಕಿದ್ದಾನೆ. ಅಂದಂತೆ ಈತನ ಅಪಹರಣಕ್ಕೆ ಮೂಲ ಪ್ರೇರಣೆ ಯಾವುದು ಗೊತ್ತೆ? ಈತ ಸದಾ ಕೊರಳಲ್ಲಿ ಧರಿಸುವ ಲಕ್ಷ ರೂ. ಕಿಮ್ಮತ್ತಿನ ಚಿನ್ನದ ಸರ, ಎಂಟು ಬೆರಳುಗಳಿಗೆ ಧರಿಸುವ ಚಿನ್ನದುಂಗುರಗಳು... ಇಷ್ಟು ಸಾಕಲ್ಲವೇ? ಅಪಹರಣಕಾರರಿಗೆ ವ್ಯಾಪಾರಿಯಾದರೇನು, ಜ್ಯೋತಿಷಿಯಾದರೇನು?

ಸದ್ಯಕ್ಕೆ ಮ.ಪ್ರ. ಪೊಲೀಸರು ಆತನ 'ಒಡವೆ'ಗಳನ್ನು ರಕ್ಷಿಸಿದ್ದಾರೆ.

ತನ್ನ ಭವಿಷ್ಯವೇ ಗೊತ್ತಿಲ್ಲದಿರುವ ಲಕ್ಕಪ್ಪ ಈಗ ಮತ್ತೆ ಬೇರೆಯವರ ಭವಿಷ್ಯ ಬರೆಯಲು ಕುಳಿತಿದ್ದಾನೆ.... ಜನಮರುಳೋ, ಜಾತ್ರೆ ಮರುಳೋ?

● ಪಿ.ಕೆ. ಮಲ್ಲನಗೌಡರ್

ಚಾನೆಲ್‌ಗಳಲ್ಲಿ ಚಪ್ಪರ್ ಜ್ಯೋತಿಷಿಗಳು...

ಜೂನಿಯರ್ ಆರ್ಟಿಸ್ಟ್ ಆಗಿ ದಿನಕ್ಕೆ 250 ರೂ. ಬಾಟಾ ಪಡೆಯುತ್ತಿದ್ದ ದಡಿಯ ನರೇಂದ್ರ ಬಾಬು ಶರ್ಮಾ ಟಿವಿ ಚಾನೆಲ್‌ನಲ್ಲಿ ಜ್ಯೋತಿಷ್ಯದ ರೀಲು ಬಿಟ್ಟೇ ಕಾರು, ಮನೆ ಮಾಡಿಕೊಂಡಿದ್ದಾನೆ.
ಅರಮನೆ ಮೈದಾನದಲ್ಲಿ ನಾಗಪೂಜೆ ಹೋಮ ಅಂತಾ ಅದೆಂಥದೋ ಮಂತ್ರ ಹೇಳಿ ಕೋಟಿಗಟ್ಟಲೇ ಹಣ ಎತ್ತಿ ಈಗ ಚಾನೆಲ್ಲೂ ಬೇಡ, ಚಪ್ಪರಾನೂ ಬೇಡ ಅಂತಾ ಗಪ್‌ಚುಪ್ ಆಗಿ ಆರಾಮಾಗ್ಯವನೆ.
ಇನ್ನೊಬ್ಬ ಪಿಂಡ ಜ್ಯೋತಿಷಿ ಶ್ರೀಧರ ಭಟ್ಟಾಚಾರ್ಯನ ಹಾವಳಿ ಮಿತಿಮೀರಿದಾಗ, 'ಲಂಕೇಶ್'ನಲ್ಲಿ ಬಂದ ವರದಿಯ ಪರಿಣಾಮವಾಗಿ ಈತನನ್ನು ಚಾನೆಲ್‌ನಿಂದ ಒದ್ದೋಡಿಸಿ 'ನಿನ್ನ ಭವಿಷ್ಯ ನೀ ನೋಡಿಕೋ' ಎಂದರು. ಈಗ ಸಿಕ್ಕಸಿಕ್ಕವರನ್ನು ಶ್ರೀರಂಗಪಟ್ಟಣಕ್ಕೆ ಕರೆದೊಯ್ದು ಪಿಂಡ ಬಡಿಸುತ್ತ ಜನರಿಂದ ದಂಡ ವಸೂಲಿ ಮಾಡುತ್ತಿದ್ದಾನೆ. ಬಾಯಿಗೆ ಹಿಡಿತವೇ ಇಲ್ಲದಂತೆ ಹಲ್ಲಿಯಂತೆ ಲೊಚಲೊಚನೆ ಪಟಗುಟ್ಟುವ ಜಿ. ಶ್ರೀನಿವಾಸನ್ ಎಂಬ ಕವಡೆ ಪಂಡಿತ ಕಂಡಕಂಡವರಿಗೆಲ್ಲ ಹೆಸರನ್ನು ತಿರುಗಾಮುರುಗಾ ಮಾಡಿಕೊಂಡ್ರೆ ಅದೃಷ್ಟ ಖುಲಾಯಿಸುತ್ತೆ ಅಂತಾ ಹೇಳಹೆಸರಿಲ್ಲದಂಗೆ ದುಡ್ಡು ಮಾಡ್ತಾ ಇದ್ದಾನೆ. ತಿಂಗಳಿಗೆರಡು ಪ್ರೆಸ್‌ಮೀಟ್ ಮಾಡಿ ಕಂತೆಗಟ್ಟಲೇ ಪತ್ರಕರ್ತರ ಕಿವಿ ಕಚ್ಚುತ್ತಾನೆ. ಹೆತ್ತೊಡಲಿಗೇ ಹಿಂಟ್ಟಿಡದ ಎಸ್.ಕೆ. ಜೈನ್ ಎಂಬ ಸೈಕೋ ಜ್ಯೋತಿಷಿ ದಶಕದ ಹಿಂದೆನೇ ತುಂಬಾ ಕಾಸು ಮಾಡಿಕೊಂಡು ಉದಯ ಚಾನಲ್‌ನಲ್ಲಿ ಪರ್ಮನೆಂಟಾಗಿ ಝುಂಡಾ ಹೊಡೆದಿದ್ದಾನೆ.
ಬಾಲಕೃಷ್ಣ ಗೂರೂಜಿ ಎಂಬ ಗಡ್ಡಧಾರಿ ವಂಚಕನದು ಮತ್ತೊಂದು ವರಸೆ. ಈ ಭೂತ ಭವಿಷ್ಯ ಹೇಳುವುದಿಲ್ಲ, ಜನ್ಮಾಂತರ ರಹಸ್ಯ ಭೇದಿಸುತ್ತಾನಂತೆ. ಟಿವಿ ಸ್ಟುಡಿಯೋಗಳಲ್ಲಿ ಕ್ಯಾಮರಾ ಮುಂದೆ ಅಡ್ಡಡ್ಡ ಮಲಗಿಸಿ ಹಿಪ್ನಾಟಿಸಂ ಮೂಲಕ ಅಳ್ಳೆದೆಯವರ ಮನೋದೌಬಲ್ಯಗಳನ್ನು ಬಳಸಿಕೊಂಡು, 'ನೀವು ಹಿಂದಿನ ಜನ್ಮದಲ್ಲಿ ಮೊಸಳೆ ಆಗಿದ್ರಿ, ಕಪ್ಪೆ ಆಗಿದ್ರಿ, ಹಂದಿ ಆಗಿದ್ರಿ' ಎಂದೆಲ್ಲ ಹೇಳಿ ತಲೆ ಸವರುತ್ತಾನೆ.
ಹೀಗೆ ಮುಗ್ಧ ಸಾರ್ವಜನಿಕರ ನಂಬಿಕೆಗಳನ್ನು ದುರುಪಯೋಗಪಡಿಸಿಕೊಂಡು ಕೋಟ್ಯಾನುಗಟ್ಟಲೇ ಕಾಸು ದೋಚುತ್ತಿರುವ ನೂರಾರು ಜ್ಯೋತಿಷಿಗಳು ಬೆಂಗಳೂರಲ್ಲಿ ಕಣ್ಣು ಕುಕ್ಕುವಂತೆ ಕಾರು, ಬಂಗಲೆ, ಬಂಗಾರವನ್ನು ಪ್ರದರ್ಶಿಸುತ್ತಾರೆ.
ಲಕಪ್ಪ ಶಾಸ್ತ್ರಿಯಂತೆ ಈ ಕಪಟ ಜ್ಯೋತಿಷಿಗಳನ್ನೂ ಕಿಡ್ನ್ಯಾಪ್ ಮಾಡಲು ಮತ್ಯಾರಾದರೂ ಸ್ಕೆಚ್ ಹಾಕದೇ ಇರುತ್ತಾರಾ?


ಗದುಗಿನ ನುಡಿಜಾತ್ರೆ ಸರಕಾರದ ಶವಯಾತ್ರೆಯಾಯ್ತಂತಲ್ಲಾ!

ಕರ್ನಾಟಕ ಹಲವು ಸಮಸ್ಯೆಗಳ ಆಗರವಾಗಿ ಕುದಿಯುತ್ತಿರುವ ಸಮಯದಲ್ಲಿ ಗದಗಿನ ಕನ್ನಡ ಸಾಹಿತ್ಯ ಸಮ್ಮೇಳನ ಶುರುವಾಗೇ ಬಿಟ್ಟಿತಂತಲ್ಲಾ, ಇಂತಹ ಸಮಯದಲ್ಲಿ, ಅದೂ ನೆರೆ ಹಾವಳಿಯ ನಂಜು ಇಳಿಯುವ ಮುನ್ನವೇ, ಕನ್ನಡ ಸಾಹಿತ್ಯ ಸಮ್ಮೇಳದ ಅಗತ್ಯವಿತ್ತೆ ಎಂದು ಕೇಳಿದವರಿಗೆ, ಜೆಡಿಎಸ್ ಜಿಲ್ಲಾ ಅಧ್ಯಕ್ಷನಂತೆ ಕಾಣುವ ನಲ್ಲೂರು ಪ್ರಸಾದ್, "ನೆರೆ ಹಾವಳಿ ನೆನೆಸಿಕೊಂಡೇ ನಾವು ಸಮ್ಮೇಳನಾಧ್ಯಕ್ಷರ ಮೆರವಣಿಗೆ ಇಟ್ಟಿಲ್ಲ, ಮಂತ್ರಿ ಮಹೋದಯರ ಹಿಂದೆ ಸರಳವಾಗಿ ನಡೆದುಬರುತ್ತಾರೆ. ಕಲಾತಂಡಗಳ ಕುಣಿತವಿಲ್ಲ, ಜಾನಪದ ಕಲೆಗಳ ಪ್ರದರ್ಶನವಿಲ್ಲ. ಟೋಟಲ್ಲಿ ಇದೊಂದು ಸರ್ಕಾರದ ಶವಯಾತ್ರೆಯಂತಿರುತ್ತದೆ" ಎಂಬ ಮಾಹಿತಿ ಕೊಟ್ಟರಂತಲ್ಲಾ, ಥೂತ್ತೇರಿ!



****

ಕನ್ನಡ ಸಾಹಿತ್ಯ ಸಮ್ಮೇಳನವೆಂದರೆ ಭಾಷೆಯ ಸರ್ವತೋಮುಖ ಅಭಿವೃದ್ಧಿಯ ಪ್ರದರ್ಶನ, ಜನಪದ ಕಲಾಪ್ರದರ್ಶನ, ನಾಡಿನ ಸಮಸ್ಯೆಗಳ ಕುರಿತ ಗೋಷ್ಠಿಗಳು, ನಿರ್ಣಯಗಳ ಮಂಡನೆ, ಮುಂದೆ ಆ ನಿರ್ಣಯಗಳ ಅನುಷ್ಠಾನ ಇವೆಲ್ಲವೂ ಸಾಹಿತ್ಯ ಸಮ್ಮೇಳನದ ವಿಶೇಷವಾಗುವುದರ ಬದಲು ವರ್ಷವರ್ಷವೂ ನಡೆಯುವ ಈ ಮಾರೀ ಜಾತ್ರೆಯಲ್ಲಿ ಕಳೆದ ಎಪ್ಪತ್ತೈದು ವರ್ಷದಿಂದ ಅನುಷ್ಠಾನಗೊಳ್ಳದ ನಿರ್ಣಯಗಳೇ ಮಂಡನೆಯಾಗುತ್ತವಂತಲ್ಲಾ, ಅದಕ್ಕಿಂತಲೂ, ವಿಪ್ರೋತ್ತಮರ ಉಲ್ಲೇಖದಂತೆ ಸುಗ್ರಾಸ ಭೋಜನ, ಪ್ರತಿನಿಧಿಗಳಿಗೆ ಒಳ್ಳೆಯ ಕಿಟ್ಟು, ಸಕಲಿಸ್ಟು ವ್ಯವಸ್ಥೆ ಮಾಡಿದವರಿಗೊಂದಿಷ್ಟು ಕಮಿಷನ್, ಸಾಹಿತ್ಯ ಪರಿಷತ್ ಪೂಜಾರಿ ಜೇಬಿಗಿಷ್ಟು ಕಾಸು, ಹೀಗೆ ತನ್ನದೇ ಒಂದು ಹಳಸಲು ಸಂಪ್ರದಾಯ ರೂಢಿಸಿಕೊಳ್ಳುತ್ತಿರುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪರ್ಯಾಯವಾಗಿ ಜಾಗೃತಗೊಳ್ಳದಿದ್ದರೆ ಪುಡಿ ರಾಜಕಾರಣಿಗಳು, ಮರಿಸ್ವಾಮಿಗಳ ಹಿಂದಿನಲ್ಲಿ ಪಿಂಜರಾಪೋಲು ಸಾಹಿತಿಗಳು ಕಳೆದುಹೋಗಲಿದ್ದಾರಂತಲ್ಲಾ, ಥೂತ್ತೇರಿ!!



****

ಇದೆಂತಹ ಅನ್ಯಾಯ. ಹಲವು ಹೆಂಡಿರ ಮುದ್ದಿನ ಮಾಮನಂತಿರುವ ವೈ.ಕೆ. ಮುದ್ದುಕೃಷ್ಣ ಎಂಬ ಮಾಜಿ ಅಧಿಕಾರಿ, ಹಾಲಿ ಗಾಯಕರಿಗೆ ಮೈಸೂರು ವಿ.ವಿ. ಕೊಡಲು ತಯಾರಾಗಿದ್ದ ಡಾಕ್ಟರೇಟ್ ಪದವಿಯನ್ನು ರಾಜ್ಯಪಾಲರು ತಡೆಹಿಡಿದಿದ್ದಾರಂತಲ್ಲಾ, ಡಾಕ್ಟರೇಟ್ ಕೊಡುವ ವಿಷಯದಲ್ಲಿ ಈವರೆಗೆ ಘನತೆ ಕಾಪಾಡಿಕೊಂಡು ಬಂದಿದ್ದ ಮೈಸೂರು ವಿ.ವಿ.ಯು ಮಂತ್ರಿಗಳ ಶಿಫಾರಸ್ಸನ್ನು ಸೀರಿಯಸ್ಸಾಗಿ ಪರಿಗಣಿಸಿ ಪಿಂಜರಾಪೋಲಿಗಳಿಗೆಲ್ಲಾ ಕೊಡುತ್ತ ಹೋದರೆ, ಮುಂದೆ ಕೆಲಸಕ್ಕೆ ಬಾರದ ಚೆಡ್ಡಿಗಳೇ ಡಾ. ಚೆಡ್ಡಿಗಳಾಗುವುದರಲ್ಲಿ ಯಾವ ಅನುಮಾನವೂ ಇಲ್ಲವಂತಲ್ಲಾ, ಅದೇನೇ ಆಗಲಿ, ಹೆಂಡತಿ ಮಕ್ಕಳನ್ನು ಮರೆತು ಕನ್ನಡ ಭವನ ಕಟ್ಟಿದ, ಬೇಸರವಾದಾಗಲೆಲ್ಲಾ ಗಾರ್ದಭ ದನಿಯ ಅಶ್ವತ್ಥ್ ಜೊತೆ ಸೇರಿಕೊಂಡು "ನವ್ವಾಲೆ ಬಂತಪ್ಪ ನವ್ವಾಲೆ ಸೋಗೆಯ ಬಣ್ಣದ ನವ್ವಾಲೆ" ಎಂದು ಹಾಡುತ್ತ ಜಲ್ದಿಗೆರೆಮ್ಮಾ ಜಲ್ದಿಗೆರಮ್ಮಾ ನಿನ್ನ ನೆನೆಸಿಕೊಂಡ್ರೆ ತಲೆಯೆಲ್ಲ ಗೀರಗೀರಮ್ಮ ಎಂದು ಕುಣಿಯುವ ಮುದ್ದುಕೃಷ್ಣರಿಗೆ ಡಾಕ್ಟರೇಟ್ ಕೊಡದೇ ಹೋಗಿದ್ದು ಅಕ್ಷಮ್ಯ ಅಪರಾಧವೆಂದು ಅವರ ಹಾಲಿ ಮಾಜಿ ಅಭಿಮಾನಿಗಳು ಹಲುಬುತ್ತಿದ್ದಾರಂತಲ್ಲಾ, ಥೂತ್ತೇರಿ!!

****

ಇತ್ತ ನೈಸ್ ರಸ್ತೆಯ ಮೇಲೆ ಕುಳಿತು, ಸೊಪ್ಪು ಸಾರು ಮುದ್ದೆಯನ್ನು ಗಡದ್ದಾಗಿ ಉಂಡು, ಲೈಟಾಗಿ ತೂಕಡಿಸುತ್ತಿದ್ದ ದೇವೇಗೌಡರು ಕೂಡಲೇ ಎಚ್ಚರಗೊಂಡು "ಈ ಎಡೂರಪ್ಪ ಮತ್ತು ಖೇಣಿ ಹಕ್ಕಬುಕ್ಕರಿದ್ದಂತೆ" ಎಂದುಬಿಟ್ಟರಂತಲ್ಲಾ, ಇದನ್ನು ಕೇಳಿಸಿಕೊಂಡ ಹಲವಾರು ಜನ "ಹಕ್ಕಬುಕ್ಕರು ಹಂಪೆಯ ನಿರ್ಮಾಪಕರು. ವಿಜಯನಗರ ಸಾಮ್ರಾಜ್ಯ ನಿರ್ಮಾತೃಗಳು. ಇತಿಹಾಸದಲ್ಲಿ ಅವರಿಗೆ ಒಳ್ಳೆಯ ಹೆಸರಿದೆ" ಎಂದು ದೇವೇಗೌಡರ ಗಮನಕ್ಕೆ ತರಲಾಗಿ, ಕೂಡಲೇ ಕೆರಳಿದ ಗೌಡರು "ಹಾಗಾದರೆ ಇದೊಂದು ಅಯೋಗ್ಯ ಸರ್ಕಾರ. ಅಯೋಗ್ಯ ಸರ್ಕಾರವನ್ನು ನಡೆಸುತ್ತಿರುವವನು ಅಯೋಗ್ಯನೆ. ಇಂತಹವರ ಎದುರು ಹೋರಾಡಿ ನಡುರಸ್ತೆಯಲ್ಲಿ ಸಾಯುವುದಕ್ಕಿಂತ, ದೆಹಲಿಯ ಸಂಸತ್ ಭವನದ ಮುಂದೆ ಕೂರುತ್ತೇನೆ" ಎಂದರಂತಲ್ಲಾ, ಥೂತ್ತೇರಿ!!

****

ಗೋಹತ್ಯೆ ನಿಷೇಧದ ಚರ್ಚೆ ಬಿರುಸಾಗಿ ನಡೆಯುತ್ತಿರುವಾಗಲೇ ಅತ್ತ ಬೀದರ್ ಕಡೆಯಿಂದ ಹಯಗ್ರೀವ ಕುಲಕರ್ಣಿ ಎಂಬ ವಿಪ್ರೋತ್ತಮರು ನಮಗೆ ಬರೆದಿರುವ ಪತ್ರವನ್ನು ಪ್ರಕಟಿಸುವುದು ನಮ್ಮ ಧರ್ಮವಲ್ಲವೇ?

"ಮಾನ್ಯ ಪತ್ರಿಕಾ ಸಂಪಾದಕರಿಗೆ ಬೀದರಿನ ಹಯಗ್ರೀವ ಕುಲಕರ್ಣಿಯ ನಮಸ್ಕಾರಗಳು,

ಗೋಹತ್ಯೆ ನಿಷೇಧದ ವಿರೋಧವಾಗಿ ನೀವೆಲ್ಲಾ ಬರೆಯುತ್ತಿರುವುದನ್ನು ನೋಡಿದ್ದೇನೆ. ಆದರೆ ನಿಮ್ಮಂತವರ ಕಣ್ಣು ತೆರೆಸುವುದು ನಮ್ಮ ಕರ್ತವ್ಯ.

ಗೋವು ನಮ್ಮೆಲ್ಲರ ಮಾತೆ, ತಾಯಿ, ಅವ್ವ. ಯಾಕೆಂದರೆ ನಾವು ಅದರ ಹಾಲು ಕುಡಿಯುತ್ತೇವೆ. ಬೆಣ್ಣೆ ಮೊಸರು ತುಪ್ಪ ತಿನ್ನುತ್ತೇವೆ. ಅಂತಹ ಹಸುವನ್ನು ವಯಸ್ಸಾದ ಮೇಲೆ ಕಟುಕರಿಗೆ ಮಾರುವುದು ಯಾವ ನ್ಯಾಯ? ಆದ್ದರಿಂದ ನಿಮ್ಮ ಮನೆಯಲ್ಲೇ ಇಟ್ಟುಕೊಳ್ಳಬೇಕು. ಅದು ಸತ್ತಾಗ, ಅಥವಾ ತೀರಿಕೊಂಡಾಗ, ಅದರ ಚರ್ಮ ಸುಲಿದು, ಚಪ್ಪಲಿ ಮಾಡಿಕೊಳ್ಳಬಹುದು. ಅದರ ಕೋಡುಗಳನ್ನು ತೆಗೆದು ಮನೆಯಲ್ಲಿ ಇಟ್ಟುಕೊಂಡು ವೈರಿಗಳು ಬಂದಾಗ ಅವರೊಡನೆ ಹೊಡೆದಾಡಲು ಬಳಸಬಹುದು. ಇಲ್ಲ ಸಂತೆಗೆ ತೆಗೆದುಕೊಂಡು ಹೋಗಿ ಕೊಂಬನ್ನು ಮಾರಿ ಮನೆಗೆ ಸಾಮಾನು ತರಬಹುದು. ಮೂಳೆಯನ್ನು ಕೂಡ ಮಾರಬಹುದು. ನಮ್ಮ ಮನೆಯಲ್ಲೇ ನಾವು ಶೂದ್ರರಿಂದ ದಾನವಾಗಿ ಪಡೆಯುತ್ತಿದ್ದ ಹಸುವನ್ನು ಮುದಿಯಾದಾಗ ದಾನ ಕೊಟ್ಟವನಿಗೇ ವಾಪಸುಕೊಟ್ಟು ಮೇಲೆ ತಿಳಿಸಿದ ಬುದ್ಧಿ ಹೇಳಿ ಕಳಿಸುತ್ತಿದ್ದೆವು. ಆ ಹಸು ಬದುಕಿದ್ದಾಗ ಹಾಕಿದ್ದ ಗೊಬ್ಬರ ಮಾರಿಕೊಳ್ಳು ತ್ತಿದ್ದೆವು. ದನಗಳಿಂದ ಇಷ್ಟೆಲ್ಲಾ ಅನುಕೂಲಗಳಿರು ವಾಗ ಅವುಗಳನ್ನು ನಿಮ್ಮ ಮನೆಯಲ್ಲಿ ಇಟ್ಟುಕೊಂಡು ಸಾಕಿ ಅವು ಪ್ರಾಣ ಬಿಡುವಾಗ ಬಾಯಿಗೆ ಗಂಗೋದಕ ಬಿಡಲು ನಿಮಗೆ ಏನಾಗಿದೆ?"

ಥೂ, ಥೂ, ಥೂತ್ತೇರಿ!!! ●



ಕಳ್ಳ ಸ್ವಾಮಿ ಪರಮಹಂಸ ನಿತ್ಯಾನಂದನ ಪುರಾಣ



ಇವತ್ತು ಕರ್ನಾಟಕದಲ್ಲಿ ಚಲಾವಣೆಯಲ್ಲಿರುವ ದಜನ್‌ಗಟ್ಟಲೇ ಚೋರ ಗುರುಗಳಿಗೆ ಸೈಡ್ ಹೊಡೆಯುವಂತೆ ದಂಧೆ ನಡೆಸುತ್ತಿರುವ ಸ್ವಾಮಿ ಅಂದರೆ ಈ ಪರಮಹಂಸ ನಿತ್ಯಾನಂದ!

ಹೊರನೋಟಕ್ಕೇನೇ ಇವನೊಬ್ಬ ಪಕ್ಕಾ ವಂಚಕ ಎಂಬುದು ಗೊತ್ತಾಗುವಂತಿದೆ. ಇವನ ಮುಖದಲ್ಲಿ ಆಧ್ಯಾತ್ಮಿಕತೆಯ ಒಂದೇ ಒಂದು ಸುಳಿವಿಲ್ಲ, ಚಲನವಲನದಲ್ಲಿ ಗಾಂಭೀರ್ಯವಿಲ್ಲ, ಮಾತಿನಲ್ಲಿ ತೂಕವಿಲ್ಲ, ಬೋಧನೆಯಲ್ಲಿ ವಿನಯವಿಲ್ಲ. ಹೀಗೆ ಆಧ್ಯಾತ್ಮಿಕ ಗುರುವೊಬ್ಬನಿಗಿರಬೇಕಾದ ಅನೇಕ ಗುಣಗಳೇ ಇಲ್ಲವಾಗಿದ್ದರೂ ಈ ನಿತ್ಯಾನಂದ ನಿಗೆ ಭಕ್ತರಂತೂ ಇದ್ದಾರೆ. ಕೋಟಿಗಟ್ಟಲೇ ಹಣ ಹರಿದುಬರುತ್ತಿದೆ.


ಸದ್ಯಕ್ಕೆ ಇವನ ಅಡ್ಡೆ ಕಲ್ಲುಗೋಪನಹಳ್ಳಿ! ಬೆಂಗಳೂರು-ಮೈಸೂರು ರೋಡಿನ ಬಿಡದಿ ಹತ್ತಿರದ ಕಲ್ಲುಗೋಪನಹಳ್ಳಿಯ ಹದಿನೆಂಟೆಕರೆ ಜಾಗದಲ್ಲಿ ಈ ಪರಮಹಂಸ ನಿತ್ಯಾನಂದ ಸ್ವಾಮಿ ಮಲ್ಟಿ ಮಿಲಿಯನ್ ರೂಪಾಯಿಗಳ ಆಧ್ಯಾತ್ಮಿಕ ಸಾಮ್ರಾಜ್ಯ ನಿರ್ಮಿಸಿಕೊಂಡಿದ್ದಾನೆ. ಇದಕ್ಕೆ ನಿತ್ಯಾನಂದ ಧ್ಯಾನಪೀಠ ಎಂದು ಹೆಸರಿಟ್ಟಿದ್ದಾನೆ. ಅದರ ಶಾಖೆಗಳು ಹೈದರಾಬಾದ್‌ನಲ್ಲಿವೆ. ತಮಿಳುನಾಡಿನಲ್ಲಂತೂ ಕೊಯಮತ್ತೂರು, ಸೇಲಂ, ಈರೋಡ್, ಹೊಸೂರು, ತಂಜಾವೂರು, ಧರ್ಮಪುರಿ, ಪುದುಕೋಟೆ, ತಿರುಪ್ಪೂರ್, ನಾಮಕ್ಕಲ್, ರಾಜಪಳ್ಯಂ, ತಿರುಚ್ಚಿಗಳಲ್ಲಿ ಧಾರ್ಮಿಕ ವ್ಯವಹಾರ ನಡೆಸುತ್ತಿದ್ದಾನೆ.

ಉತ್ತರಭಾರತದ ವಾರಣಾಸಿ, ಪುರಿಯಲ್ಲೂ ಶಾಖೆಗಳಿವೆ. ಇದಿಷ್ಟೇ ಅಲ್ಲ, ಇಂಡಿಯಾದಾಚೆ ಮಲೇಷಿಯಾ, ಸಿಂಗಪೂರ್, ಕೆನಡಾ, ಅಮೆರಿಕಾ, ಸ್ಪೈನ್, ಫ್ರಾನ್ಸ್, ಜರ್ಮನಿಗಳಲ್ಲೂ ಇವನು ಅಂಗಡಿ ತೆರೆದು ಕೂತಿದ್ದಾನೆ.


ನೋಡಲಿಕ್ಕೆ ಬೆಂಗಳೂರಿನ ಮಾಮೂಲಿ ರೌಡಿ ಎಲಿಮೆಂಟ್ ತರ ಕಾಣುವ ಈ ನಿತ್ಯಾನಂದ ಈ ಪರಿ ಧರ್ಮ ಸಾಮ್ರಾಜ್ಯ ಕಟ್ಟಿದ್ದಾನೆಂದರೆ ಅವನು ಅದಿನ್ನೆಷ್ಟು ವರ್ಷ ಶ್ರಮಪಟ್ಟಿರಬೇಡ? ವಯಸ್ಸಿನ ಹಿರಿತನ ಅದೇನಾಗಿರಬಹುದೆಂಬ ಪ್ರಶ್ನೆ ನಿಮಗೆ ಬರಬಹುದು.

ಆದರೆ ನೀವು ನಂಬುತ್ತೀರೋ ಇಲ್ಲವೋ, ಈ ನಿತ್ಯಾನಂದನಿಗೀಗ ಜುಜುಬಿ ಮೂವತ್ತೈದು ವರ್ಷಗಳು!











ಅವನೇ ಹೇಳಿಕೊಳ್ಳುತ್ತಿರುವಂತೆ 'ಜ್ಞಾನೋದಯ'ವಾಗಿ 12 ವರ್ಷಗಳಾಗಿವೆ.

ಬಿಡದಿಯ ಹತ್ತಿರ ಆಶ್ರಮ ನಿರ್ಮಿಸಿ ಕೇವಲ ಏಳು ವರ್ಷ ಮಾತ್ರ ಮುಗಿದಿದೆ. ಇಷ್ಟು ಕಡಿಮೆ ಸಮಯದಲ್ಲಿ ಪ್ರಾಯಶಃ ಇಡೀ ಇಂಡಿಯಾದಲ್ಲೇ ಬೇರೆ ಯಾವುದೇ ಗುರುವಿರಲಿ, ಬಿಸ್‌ನೆಸ್ ಮ್ಯಾನ್‌ಗಳೂ ಈ ಮಟ್ಟಕ್ಕೆ ಬೆಳೆದಿರಲಿಕ್ಕಿಲ್ಲ. ಆದರೇನು ನಿತ್ಯಾನಂದ ಬೆಳೆದುನಿಂತಿದ್ದಾನೆ. ಯೋಗ, ಧ್ಯಾನ, ಪೂಜೆ ಎಂದು ನಾನಾ ಸ್ಕೀಮುಗಳ ಮೂಲಕ ಜನರಿಂದ ಹಣ ವಸೂಲಿ ಮಾಡಿ ಬಲಿತುಕೊಂಡಿದ್ದಾನೆ. 'ನೀವು ನನಗೆ ಹಣ ಕೊಡಿ, ನಾನು ನಿಮಗೆ ಮನಶ್ಯಾಂತಿ ಕೊಡಿಸುತ್ತೇನೆ' ಎಂದು ನಾಚಿಕೆ ಬಿಟ್ಟು ಕೇಳುತ್ತಾನೆ. ತಾಯತ, ವಿಭೂತಿ, ರುದ್ರಾಕ್ಷಿ ಸರಗಳನ್ನು ನೀಟಾಗಿ ಪ್ಯಾಕ್ ಮಾಡಿ ಡಾಲರ್ ಲೆಕ್ಕದಲ್ಲಿ ಮಾರಿಕೊಳ್ಳುತ್ತಿದ್ದಾನೆ. ಇವನದೊಂದು ಅತೀ ತಮಾಷೆಯ ಸ್ಕೀಂ ಒಂದಿದೆ.

ವೈದ್ಯ ಸರೋವರ ಎಂದು!

ಆರೋಗ್ಯ, ಹಣಕಾಸಿನ ತೊಂದರೆ ಇರುವವರು ಮನಶ್ಯಾಂತಿ, ಇರದವರು. ನಿತ್ಯಾನಂದನ ಕೈಗೆ ಒಂದಷ್ಟು ಹಣ ತೆತ್ತು ಈ ವೈದ್ಯ ಸರೋವರದೊಳಗೆ ಒಂದು ಸಾರಿ ಮುಳುಗೆದ್ದು ಬಂದರೆ ಅವತ್ತಿಗೆ ಸಮಸ್ಯೆಗಳೆಲ್ಲಾ ಪರಿಹಾರವಾಗಿ ಬಿಡುತ್ತದೆಂದು ಇವನು ಬೋಡುಬಿಡುತ್ತಿದ್ದಾನೆ. ಅವಿವೇಕಿ ಜನ ಈ ಚೋರ ಗುರುವಿನ ಮಾತು ನಂಬಿ ವೈದ್ಯ ಸರೋವರದಲ್ಲಿ ಮುಳುಗುನೀರು ಕುಡಿದು ಬರುತ್ತಿದ್ದಾರೆ.

ಇವತ್ತು ಬೆಂಗಳೂರು, ಮೈಸೂರುಗಳಲ್ಲಿ ಭಾರಿ ಆಧ್ಯಾತ್ಮಕ ವ್ಯಾಪಾರ ಕುದುರಿಸಿಕೊಂಡಿರುವ ಈ ಪರಮಹಂಸ ನಿತ್ಯಾನಂದ ಸ್ವಾಮಿ ಅಂದರೆ ಯಾರು?



ಅವನ ನಿಜ ನಾಮಧೇಯವೇನು? ಎಲ್ಲಿ ಹುಟ್ಟಿ ಇನ್ನೆಲ್ಲಿ ಬೆಳೆದ? ಎಲ್ಲಿಂದ ಹೊರಟು 2003ರಲ್ಲಿ ಬೆಂಗಳೂರಿಗೆ ಕಾಲಿಟ್ಟ? ಇವನ ಹಿಂಬಾಲಕರ್‍ಯಾರು?

ಈ ಪ್ರಶ್ನೆಗಳಿಗೆಲ್ಲಾ ಉತ್ತರ ಹುಡುಕಲು ಹೊರಟರೆ ನಿತ್ಯಾನಂದನ ಅಸಲಿ ಮುಖ ಕಾಣಿಸುತ್ತದೆ.

12 ವರ್ಷಕ್ಕೆ ಡಿಪ್ಲೊಮಾ ಮಾಡಿದನಂತೆ

ಈ ನಿತ್ಯಾನಂದನ ಚರಿತ್ರೆ ಹೇಳುವ ದಜನ್‌ಗಟ್ಟಲೆ ಪುಸ್ತಕಗಳಿವೆ. ವೆಬ್‌ಸೈಟ್‌ಗಳೂ ಇವೆ. ಇವನ ಏಜೆಂಟರಂತೂ ನಿತ್ಯಾನಂದನ ಪವಾಡಗಳ ಚಿತ್ರ ವಿಚಿತ್ರ ಕತೆಗಳನ್ನು ಹಬ್ಬಿಸುತ್ತಿದ್ದಾರೆ. ಅವೆಲ್ಲಾ ಎಂದಿನಂತೆ ಹಳಸಲು ಪವಾಡ ಕತೆಗಳೇ... ಕೇವಲ ಸ್ಪರ್ಶ ಮಾತ್ರದಿಂದಲೇ ಕುಷ್ಠರೋಗ ನಿವಾರಿಸಿದ್ದು, ಮಕ್ಕಳ ಫಲ ಒದಗಿಸಿದ್ದು ಇತ್ಯಾದಿ.

ಈ ಅತೀಂದ್ರಿಯ ಶಕ್ತಿಯನ್ನು ನಿತ್ಯಾನಂದ ಸ್ವಾಮಿ ಕೇವಲ ಹನ್ನೊಂದನೆ ವಯಸ್ಸಿನಲ್ಲೇ ಪಡೆದನಂತೆ ಇವನ ಭಕ್ತರಿಗೆ ಗೊತ್ತಿರದ ಇಂತಹ ಪವಾಡ ಪುರುಷನ ಜನ್ಮಜಾತಕ ಹೀಗಿದೆ.

ಹುಟ್ಟಿದ್ದು 1978ರಲ್ಲಿ ತಿರುವಣ್ಣಾಮಲೈನಲ್ಲಿ ಎಂದು ಹೇಳಿಕೊಳ್ಳುತ್ತಾನೆ. ಹೆಸರು ರಾಜಶೇಖರನಂತೆ. 1990ರಿಂದ 1993ರವರೆಗೂ ಗುಡಿಯಾಟ್ಟಂನ ರಾಜಗೋಪಾಲ ಪಾಲಿಟೆಕ್ನಿಕ್‌ನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ ಓದಿದೆ ಎಂತಲೂ ಹೇಳುತ್ತಾನೆ. ಅಂದರೆ ನಾವು ನೀವೆಲ್ಲಾ ಏಳನೇ ಕ್ಲಾಸಿನಲ್ಲಿದ್ದ ವಯಸ್ಸಿಗೆ ನಿತ್ಯಾನಂದ ಸ್ವಾಮಿ ಇಂಜಿನಿಯರಿಂಗ್ ಓದಿ ಬಿಸಾಡಿದ್ದ ಎಂದಾಯಿತು. ಆಮೇಲೆ ಈ ರಾಜಶೇಖರನಿಗೆ ಒಂದು ದಿನ ಏಕಾಏಕಿ ಜ್ಞಾನೋದಯವಾಯಿತಂತೆ, ಅವತ್ತೇ ಇವನ ಮೂರನೇ ಕಣ್ಣೊಂದು ಓಪನ್ ಆಯಿತು ಎಂತಲೂ ಈಗ ಭಕ್ತರಿಗೆ ತಿಳಿಸಲಾಗಿದೆ. ಆಮೇಲೆ ಏನಾಯಿತೆಂದರೆ ಮಿಸ್ಟರ್ ರಾಜಶೇಖರ್‌ರವರು ಬ್ಯಾಟರಿ ಬಿಟ್ಟಂತೆ ತಮ್ಮ ಮೂರನೇ ಕಣ್ಣನ್ನು ಬಿಟ್ಟು ನೋಡಲಾಗಿ ಒಂದೂವರೆ ಸಾವಿರ ಕಿಲೋಮೀಟರ್‌ಗಳಾಚೆ ಮಧ್ಯಪ್ರದೇಶದಲ್ಲಿದ್ದ ಓಂಕಾರಾಶ್ರಮ ಕಂಡಿದೆ. ಅಲ್ಲಿ ಮಹಾವತಾರಿ ಬಾಬಾ ಎಂಬುವನು ಕಂಡುಬರಲಾಗಿ ರಾಜಶೇಖರ ಸೀದಾ ಅಲ್ಲಿಗೇ ಹೋಗಿ ಗುರುದೀಕ್ಷೆ ಪಡೆದು ಪರಮಹಂಸ ನಿತ್ಯಾನಂದ ಎಂದು ಹೆಸರು ಬದಲಿಸಿಕೊಂಡು ಬಂದನಂತೆ. ಅದೇ ಟೈಮಿಗೆ ಇವನಿಗೆ ಬಿಡದಿ ಹತ್ತಿರದ ಕಲ್ಲುಗೋಪನಹಳ್ಳಿಯಲ್ಲಿದ್ದ ನೂರಿನ್ನೂರು ವರ್ಷದ ಆಲದಮರವೂ ಕಾಣಿಸಿತಂತೆ. ಸರಿ ಇದೇ ತನ್ನ ಆಶ್ರಮವಾಗತಕ್ಕ ಸ್ಥಳ ಎಂದು ನಿರ್ಧರಿಸಿಕೊಂಡು ರಾಜಶೇಖರ ಅಲಿಯಾಸ್ ಪರಮಹಂಸ ನಿತ್ಯಾನಂದರ ಪಾವನಪಾದ ಬೆಂಗಳೂರಿಗೆ ಬಿಜಯಂಗೈದಿತು ಎಂಬ ಕತೆ ಹಬ್ಬಿಸಲಾಗಿದೆ.

ತಮಿಳು ಶ್ರೀಮಂತರ ಬೆಂಬಲ

ಹೀಗೆ 2003ರಲ್ಲಿ ಬೆಂಗಳೂರಿಗೆ ಕಾಲಿಟ್ಟ ನಿತ್ಯಾನಂದನಿಗೆ ಬೆಂಗಳೂರು ತಮಿಳರ ಸಂಘದ ನಾಯಕ ಷಣ್ಮುಗ ಸುಂದರಂ, ಚಾಮುಂಡೇಶ್ವರಿ ಸ್ಟುಡಿಯೋ ಮಾಲೀಕ, ಕುಪ್ಪುಸ್ವಾಮಿ ನಾಯ್ಡು, ಭೂಗಳ್ಳರಾದ ಅರುಣಾಚಲಂ ಅಂಡ್ ಸನ್ಸ್, ಮಾಜಿ ಕಾರ್ಪೊರೇಟರ್ ಹ್ಯಾರಿ ಮುಂತಾದವರೆಲ್ಲಾ ಬೆನ್ನಿಗೆ ನಿಂತು ಬೆಂಬಲ ಕೊಟ್ಟರು. ಇವರ ಮೂಲಕವೇ ಒಂದಷ್ಟು ಹಣ ಎತ್ತಿದ ನಿತ್ಯಾನಂದ ಕಲ್ಲುಗೋಪನಹಳ್ಳಿಗೂ ಬಂದ ಅಲ್ಲಿ ಸ್ವಾತಂತ್ರ್ಯ ಹೋರಾಟಗಾರ ಸಜ್ಜನರಾವ್‌ರವರ ಮಗ ಪ್ರತಾಪ ರಾಜುಗೆ



ಸೇರಿದ್ದ ಹದಿನೆಂಟೆಕರೆ ಜಮೀನಿತ್ತು, ಅಲ್ಲೇ ಒಂದೂ ಪುರಾತನ ಆಲದಮರವು ಬೆಳೆದುಕೊಂಡಿತ್ತು, ಆಗಿನ್ನೂ ಮೂವತ್ತು ವರ್ಷ ವಯಸ್ಸಿನವನಾಗಿದ್ದ ಬರಿಗೈ ದಾಸ ನಿತ್ಯಾನಂದ ಒಂದು ಕೋಟಿ ರೂಪಾಯಿತನಕ ಹಣ ಚೆಲ್ಲಿ ಈ ಜಮೀನು ಖರೀದಿಸಿದ.

ಅಷ್ಟು ಹಣ ಇವನಿಗೆ ಎಲ್ಲಿಂದ ಬಂದಿರಬಹುದು?



ನವಪಾಷಾಣ ಲಿಂಗ...! ವೈದ್ಯ ಸರೋವರ....!! ರೋಗಿಯ ಸ್ಟಂಟಿಂಗ್ ಮಾಯಾ!!!

ಈ ನಿತ್ಯಾನಂದ ಗುರು ಎಂಥ ಐನಾತಿ ಎನ್ನಲು ಅವನ ಸ್ಕೀಮುಗಳು ಹಾಗೂ ಮಾಡಿರುವ ಪವಾಡಗಳನ್ನು ನೋಡಬೇಕು.

ಬಿಡದಿಯಲ್ಲಿ ಇವನು 'ನವಪಾಷಾಣ ಲಿಂಗ' ಸ್ಥಾಪಿಸಿದ್ದಾನಂತೆ. ಇಲಿ ಸಾಯಿಸುವ ಪಾಷಾಣದಲ್ಲೇ ಇವನೊಂದು ಶಿವಲಿಂಗ ಮಾಡಿರಬಹುದಾ? ಗೊತ್ತಿಲ್ಲ, ಆದರೆ ಇಡೀ ಜಗತ್ತಿನಲ್ಲೇ ಎತ್ತರದ ಶಿವಲಿಂಗ ಇದಂತೆ. ಇದರ ಮೇಲೆ ಸದಾ ನೀರು ಬೀಳುವಂತೆ ಅರೇಂಜ್ ಮಾಡಿದ್ದಾನೆ. ಹೀಗೆ ಪಾಷಾಣ ಲಿಂಗದ ಮೇಲೆ ಬಿದ್ದು ಬರುವ ನೀರೆಲ್ಲಾ ಒಂದು ಕಲ್ಯಾಣಿಯೊಳಗೆ ಬರುವಂತೆ ಮಾಡಿದ್ದಾನೆ. ನೂರಾರು ಗಿಡಮೂಲಿಕೆ ಬೆರೆತ ಈ ನವಪಾಶಾಣ ಲಿಂಗ ಸ್ಪರ್ಶಿತ ನೀರೇ 'ವೈದ್ಯ ಸರೋವರ'ಕ್ಕೆ ಬಂದುಬೀಳುತ್ತದೆ. ದೇಹ-ಮನಸ್ಸಿಗೆ ನಾನಾ ರೋಗವಿರುವವರು, ಒಂದು ಸಾವಿರ ರೂಪಾಯಿ ಕೊಟ್ಟು ಅಲ್ಲಿ ಡುಬುಕ್ ಎಂದು ಮುಳುಗೆದ್ದರೆ ಸಾಕಂತೆ!

ಜನರ ಸಮಸ್ಯೆ (ಪರ್ಸ್) ಮಾಯಾ


ನಿತ್ಯಾನಂದನ ಜೋಳಿಗೆ ಭರ್ತಿ

-ಹೀಗಿದೆ ಇವನ ತರಲೆಗಳು. ಅಂದಹಾಗೆ ಇವನ ಪವಾಡಗಳ ಬಗ್ಗೆ ಒಂದು ಕಲರ್‌ಫುಲ್ ಕರಪತ್ರ ಮುದ್ರಿಸಿ ಈಗ ಬೆಂಗಳೂರಿನ ಬೀದಿಗಳಲ್ಲಿ ಹಂಚುತ್ತಿದ್ದಾರೆ. ಅದರಲ್ಲಿ ಏನಿದೆ ಗೊತ್ತೇ? ಬಂಜೆಯೊಬ್ಬಳಿಗೆ ಮಗುವಾಗಿದ್ದು, ಮಂಡಿನೋವು, ಬೆನ್ನುನೋವು ಮಾಯವಾಗಿದ್ದು ಇತ್ಯಾದಿ. ಅತೀ ಘೋರ ತಮಾಷೆಯೆಂದರೆ ರೋಗಿಯೊಬ್ಬನ ದೇಹದೊಳಗೆ ವೈದ್ಯರು ಸ್ಟಂಟಿಂಗ್ ಹಾಗೂ ERCP (ದೇಹದೊಳಗೆ ನವಿರಾದ ಕೊಳವೆ ಸೇರಿಸುವುದು) ಹಾಕಿದ್ದನ್ನು ಈ ನಿತ್ಯಾನಂದ ಕೇವಲ ಹಸ್ತಸ್ಪರ್ಶದಿಂದಲೇ ಮಾಯಾ ಮಾಡಿದನೆಂಬುದು!

ನಿತ್ಯಾನಂದನ ಬೊಗಳೆಗೆ ಭಕ್ತರ ದಡ್ಡತನಕ್ಕೆ ಮಿತಿಯುಂಟೇ?

...ದುಮಾನ ಏಕೆಂದರೆ...?

...ಳುಸ್ವಾಮಿ ಪರಮಹಂಸ ನಿತ್ಯಾನಂದನಿಗೂ ...ಗಳಿಗೂ ಎಂತದ್ದೋ ಒಂದು ಲಿಂಕ್ ...ದೆನ್ನಲು ಕೆಲವು ಘಟನೆಗಳಿವೆ.



2002 ರ ಆಗಸ್ಟ್ 25 ರಂದು ಮಂತ್ರಿ ನಾಗಪ್ಪನವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿದ್ದ. ಆಗ ತನ್ನ ಬೇಡಿಕೆಗಳೇನೆಂಬುದನ್ನು ಕ್ಯಾಸೆಟ್ಟು, ಪತ್ರಗಳ ಮೂಲಕ ವೀರಪ್ಪನ್ ಸರ್ಕಾರಕ್ಕೆ ...ುತ್ತಿದ್ದ. ಅಂಥದ್ದೊಂದು ಕ್ಯಾಸೆಟ್ ಮಹದೇಶ್ವರ ...ವೇಶದ ಆಸುಪಾಸಿನ ಗ್ರಾಮದ ದನ ...ುವ ಹುಡುಗ ಮಾಥುರ್ ಕೈಸೇರಿತ್ತು. ...ದು ನಂತರ ...ಕ್ಕೆ ಬಿದ್ದಿದ್ದು ...ಲ್ಲಿ, ನಿತ್ಯಾನಂದನ ...ರುವ ಸ್ಥಳ ... ಘಟನೆಯನ್ನು ...ನ ಜೊತೆ



...ರುವುದು ಈತ ಸ್ವಾಮಿಯ ...ರುವ ನಿಗೂಢ ವ್ಯಕ್ತಿ ಎಂಬುದು ಒಂದು ...ದರೆ ಆಗ ತಮಿಳುನಾಡಿನಲ್ಲಿ ಆಕ್ಟೀವ್ TNLF, TNRT ಉಗ್ರಗಾಮಿ ...ಗೆ ರಹಸ್ಯವಾಗಿ ಬೆಂಬಲ ನೀಡುತ್ತಿದ್ದ ...ವಿನ ಕೆಲವು ತಮಿಳು ವ್ಯಕ್ತಿಗಳೇ ನಿತ್ಯಾನಂದನ ...ಮ್ಯ ಇದ್ದದ್ದು.

...ಲ್ಲಾ ಒಂದಕ್ಕೊಂದು ಸಂಬಂಧವಿರದೆ ನಡೆದಿರುವ ...ಂತೂ ಅಲ್ಲ.

...ತ್ತಿಗೂ ಉತ್ತರ ಸಿಗದಿರುವ ಪ್ರಶ್ನೆ ಇದು! ...ಲಿ, ಈ ಜಮೀನು ಖರೀದಿಸಿದ ನಂತರ ...ನ ಧ್ಯಾನಪೀಠ, ವೈದಿಕ, ದೇವಸ್ಥಾನ, ನಾಲ್ಕು ...ಜನ ಕೂರಬಹುದಾದ ಪ್ರಾರ್ಥನಾ ಮಂದಿರದ ...ಲ್ಲಾ ಚಕಚಕನೆ ಮೇಲೆದ್ದು ನಿಂತವು. ಹದಿನೈದು ...ಖರ್ಚಾಗಿರುವ ಕೆಲಸವಿದು.

...ಪ್ಟು ಹಣ ಇವನಿಗೆಲ್ಲಿಂದ ಬಂತೆಂಬುದು ...ಗೊತ್ತಾಗಿಲ್ಲ. ಹೀಗೆ ಬಿಡದಿ ಬಳಿ ತಳವೂರಿದ ... ಕೇವಲ ಆರೇಳು ವರ್ಷಗಳಲ್ಲೇ 33 ದೇಶಗಳಲ್ಲಿ ... ಆರು ನೂರು ಶಾಖೆಗಳ ನೆಟ್‌ವರ್ಕ್ ...ಂಡಿದ್ದಾನೆ. ತನ್ನ ಬಳಿ ಬರುವ ಭಕ್ತರಿಗೆ 'ನಾನೇ ...ವತಾರ' ಎನ್ನುತ್ತಿದ್ದಾನೆ. ಕಲ್ಪತರು ಧ್ಯಾನ, ಎಂದು ...ನದ ಧ್ಯಾನಕ್ಕೆ ತಲಾ ಒಂದು ಸಾವಿರ ರೂಪಾಯಿ ... ವೈದ್ಯ ಸರೋವರ ಅಂತಾ pond ಕಟ್ಟಿಸಿ ...ವರು ಅದರೊಳಗೆ ಬೀಳಿ' ಎನ್ನುತ್ತಾ ಅದಕ್ಕೂ ... ಎಂದು ಫೀಜು ಪೀಕುತ್ತಾನೆ. ಕಾಸಿರುವ ...ತರ ತಲೆಕೆಡಿಸಿ 'ನಿಮ್ಮ ಹೆಸರಿನಲ್ಲೇ ಒಂದು ...ಗ ಸ್ಥಾಪಿಸಿ ಪುಣ್ಯ ಬರುತ್ತೆ' ಎಂದು ...ಸುತ್ತಾನೆ. 'ಆಗಲಿ' ಎಂದವರಿಂದ ಕೇವಲ ...ಸಾವಿರ ಅಮೆರಿಕನ್ ಡಾಲರ್ ದೋಚುತ್ತಾನೆ. ...ಂದು ಚಿಕ್ಕ ಶಿವಲಿಂಗ ಸ್ಥಾಪನೆಗೆ ನಲವತ್ತರಿಂದ ...ಸಾವಿರ ರೂಪಾಯಿ!

...ಸ ಬಿಡದಿಯ ಆಶ್ರಮಕ್ಕೆ ಹೋಗಿ ನೋಡಿದರೆ ...ಡಾಲರ್ ತೆತ್ತು ಶಿವಲಿಂಗ ನೆಟ್ಟಿರುವ ನೂರಾರು ...ಯೇ ಸಿಗುತ್ತದೆ. ಇಷ್ಟಲ್ಲದೇ 'ಆನಂದಯೋಗ' ...ಧ್ಯಾನ ಬೆರೆತ ಡ್ಯಾನ್ಸು, ಜೊತೆಗೆ ಹೆಂಗಸರನ್ನೂ ...ತು ಆಶೀರ್ವದಿಸುವ ಚಟವೂ ಇವನಿಗಿದೆ. ...ಲಿಟಿ ಎನ್ನುತ್ತಲೇ ಜನ ತನಗೆ ತನ್ನ ಫೋಟೋಗೆ ...ಳುವ ವ್ಯವಸ್ಥೆ ಮಾಡಿಕೊಂಡಿದ್ದಾನೆ.

...ಚ ಗಮನವಿಟ್ಟು ನೋಡಿದರೆ, ಇವನ ಮಾತು, ...ಸ ಗಮನಿಸಿದರೆ ನಿತ್ಯಾನಂದ ಒಬ್ಬ ಅಸಲಿಯಿರಲಿ, ...ಮಿಯೂ ಅಲ್ಲ ಎನಿಸುವಂತಿದೆ.


...ಮು ಇಷ್ಟೇ.

... ರಾಜಶೇಖರ ಅಲಿಯಾಸ್ ಪರಮಹಂಸ ... ಓರ್ವ ಎಲ್‌ಟಿಟಿಇ ಸೂಪರ್‌ವೈಸರ್ ಎಂಬ ...ಸ ಮೊದಲಿನಿಂದಲೂ ಇದೆ. ಶ್ರೀಲಂಕಾ ... ಹಣಕಾಸಿನ ವ್ಯವಹಾರ ನಿಭಾಯಿಸಲು ಅನೇಕ ...ಸ ಅನೇಕಾನೇಕ ವೇಷ ಅವತಾರಗಳಲ್ಲಿ ...ರಣೆ ಮಾಡುತ್ತಿದ್ದರು. ಅದೇರೀತಿ ಆಧ್ಯಾತ್ಮ ...ದ ವೇಷ ತೊಟ್ಟು ಬೆಂಗಳೂರಿಗೆ ...ಬುದಾದ ನಿತ್ಯಾನಂದ ಈಗ ಟೈಗರ್ ಸಹವಾಸ ... ವೇಷ ಹಾಕಿಕೊಂಡಂತಿದೆ.

...ನಸೊಮ್ಮೆ ಚೆಕ್ ಮಾಡಿ ನೋಡಿದರೆ ಉತ್ತಮ ●



ಮಂಗಳೂರು: ಚೆಡ್ಡಿ ಪಿಎಸ್‌ಐ ಪ್ರಮೋದ್ ಪುಂಡಾಟ!



ಕರಾವಳಿ ಕರ್ನಾಟಕದಲ್ಲಿ ಸಂಘ ಪರಿವಾರದ್ದೇ ಪ್ರಭುತ್ವ! ಇಲ್ಲಿ ಸಂವಿಧಾನ-ಕಾನೂನಿಗೆ ಕವಡೆ ಕಿಮ್ಮತ್ತಿಲ್ಲ!! ರಾಜಕೀಯ, ಆರ್ಥಿಕ ಲಾಭಕ್ಕಾಗಿ ಬರ್ಬರ-ಹೇಯ ಕೋಮುವಾದಿ ಕಾರ್ಯಾಚರಣೆಗೆ ಇಳಿದಿರುವ ಭಜರಂಗದಳ, ಬಿಜೆಪಿ, ವಿಹೆಚ್‌ಪಿ, ಹಿಂಜಾವೇ... ಮುಂತಾದ ಹಿಂದೂತ್ವದ ಪುಂಡ ಪಡೆಗಳು ಕರಾವಳಿಯಲ್ಲಿ ಆಡಿದ್ದೇ ಆಟ, ಮಾಡಿದ್ದೇ ಕಾನೂನಾಗಿಬಿಟ್ಟಿದೆ. ಈ ಮತಾಂಧ ಮೃಗಗಳ 'ಗುರು' ಕಲಡ್ಕ ಪ್ರಭಾಕರ ಭಟ್ಟನೆಂಬ ಆರೆಸ್ಸೆಸ್ ಡಾನೇ ಕರಾವಳಿಯ ಸಿಎಂ! ಯಡ್ಡಿಯೇನಿದ್ದರೂ ಡೆಮ್ಮಿ!

ಘೋರ ದುರಂತವೆಂದರೆ ಚೆಡ್ಡೀಕರಣ, ಕೇಸರೀಕರಣ ಗೊಂಡಿರುವ ಪೊಲೀಸ್ ಪಡೆ ಸಂಘಪರಿವಾರದ ಮತೋನ್ಮತ್ತರ ಜತೆ ಸೇರಿ ಅಮಾಯಕ ಮುಸ್ಲಿಮ್-ಕ್ರಿಶ್ಚಿಯನ್ ಸಮುದಾಯವನ್ನು ಚಿತ್ರಹಿಂಸೆಗೀಡುಮಾಡುತ್ತಿದೆ. ಪಾಪಿ ಪರಿವಾರದೊಂದಿಗೆ ಪೇದೆಯಿಂದ ಹಿಡಿದು ವಿವಿಧ ಕೇಡರಿನ ಖಾಕಿ ಅಧಿಕಾರಿಗಳು ಶಾಮೀಲಾಗಿ ಹಿಂದೂತ್ವದ ಆಡಳಿತ ನಡೆಸಿದ್ದಾರೆ. ಈ ಚೆಡ್ಡಿ-ಪೊಲೀಸ್ (ಚೆಪೊ) ಗ್ಯಾಂಗು ವಿನಾಕಾರಣ ಅಲ್ಪಸಂಖ್ಯಾತರ ಕಾಡಿ ರಕ್ತ-ಕಣ್ಣೀರಿನ ಕೋಡಿಯೇ ಹರಿಸುತ್ತಿದೆ. ಕರಾವಳಿಯಲ್ಲಿ ಸಂಘಪರಿವಾರ-ಪೊಲೀಸ್ ಪಟಾಮ್ ಎಂಥ ಭೀಭತ್ಸ 'ಜಂಗಲ್ ಲಾ' ಜಾರಿಗೊಳಿಸಿಕೊಂಡಿದೆಯೆಂದರೆ, ಇಲ್ಲಿ ಮುಸ್ಲಿಮ್-ಕ್ರಿಶ್ಚಿಯನ್ ಆಗಿ ಹುಟ್ಟುವುದೇ ದೊಡ್ಡ ಗಂಡಾಂತರಕಾರಿ ಅಪರಾಧವಾಗಿದೆ!! ಎಷ್ಟೊತ್ತಿಗೆ ಯಾವ ಅಲ್ಪಸಂಖ್ಯಾತನ ಹೆಣ ಕೆಡವುತ್ತದೋ ಈ ಚೆಪೊ ಪರಿವಾರ ಹೇಳಲಿಕ್ಕಾಗದು. ಇಂಥ ಆತಂಕದಲ್ಲಿ ಕರಾವಳಿಯ ಅಲ್ಪಸಂಖ್ಯಾತರು-ಸೆಕ್ಯುಲರ್‌ಗಳು ಬದುಕುತ್ತಿದ್ದಾರೆ....

ದಕ್ಷಿಣ ಕನ್ನಡ ಪೊಲೀಸರು ನಿಷ್ಕಾರಣವಾಗಿ ಮುಸ್ಲಿಮರನ್ನು ಠಾಣೆಗೆ ತಂದು ದೌರ್ಜನ್ಯ ನಡೆಸುವುದು, ವಾರಗಟ್ಟಲೆ ಲಾಕಪ್ಪಿನಲ್ಲಿಟ್ಟು ಸತಾಯಿಸುವುದೆಲ್ಲ ನಿತ್ಯ'ಕರ್ಮ'ದಂತಾಗಿ ಹೋಗಿದೆ. ಮುಸ್ಲಿಮ್ ಮಹಿಳೆ-ಹುಡುಗಿಯರಿಗೂ ನಡುಬೀದಿಯಲ್ಲೇ ಅವಾಚ್ಯ ಶಬ್ದದಿಂದ ಬೈದು-ಮೂದಲಿಸಿ ಹಿಂದೂತ್ವ ಪ್ರದರ್ಶಿಸುವ ನೀಚ ಪೊಲೀಸರು ಕರಾವಳಿಯಲ್ಲಿ ಹಲವು ವರ್ಷದಿಂದ ಗೂಟ ಜಡಿದು ಕೂತಿದ್ದಾರೆ. ಮುಸ್ಲಿಮ್ ತರುಣರ ಕಂಡರೆ ಈ ಪೊಲೀಸರಿಗೆ ಹಿಂದೂ ಭೂತ ಆವಾಹನೆಯಾಗಿಬಿಡುತ್ತದೆ. ಸಾಬಿ ಪೋರರನ್ನು ಜೀಪಲ್ಲಿ ಎತ್ತಾಕಿಕೊಂಡು ಬಂದು ಠಾಣೆಯಲ್ಲಿ ಥರ್ಡ್ ಡಿಗ್ರಿ ಟ್ರೀಟ್‌ಮೆಂಟ್ ಕೊಡುವ ಕಾನೂನು ಕರಾವಳಿಯಲ್ಲಿದೆ. ಗೋಪ್ರಾಣ, ಹಿಂದೂಹೆಣ್ಣಿನ ಮಾನ ರಕ್ಷಿಸುವ ಸೋಗಲಾಡಿ (ಅ)ನೈತಿಕ ಪೊಲೀಸ್ ಪಡೆ ಹುಟ್ಟಿಕೊಂಡಿದ್ದೇ ಮತಾಂಧ ಪೊಲೀಸ್ ಅಧಿಕಾರಿಗಳಿಂದ.

ಮುಸ್ಲಿಮ್ ಸಮುದಾಯದವರನ್ನು ಕಂಡರಾಗದ ಪೊಲೀಸ್ ಅಧಿಕಾರಿಗಳಲ್ಲಿ ತೀರಾ ಹರಾಮಿ ಹಿಂದೂತ್ವ ವಾದಿಯೆಂದರೆ, ಬಜ್ಪೆಯ ಪಿಎಸ್‌ಐ ಪ್ರಮೋದ್ ಕುಮಾರ್. ತೊಂದರೆಗೀಡಾದ ಸಾಬಿಗಳು ಈ ಚೆಡ್ಡಿ ಸಾಹೇಬನ ಬಳಿ ನ್ಯಾಯಕೇಳಿ ಹೋದರೆ ಹೈರಾಣಾಗಿ ಹೋಗ್ತಾರಷ್ಟೇ! ಸಾಬರ ಹುಡುಗ-ಹುಡುಗಿಯರನ್ನು ಠಾಣೆಗೆ ತಂದು ಬಾಯಿಗೆಬಂದಂತೆ ಬಯ್ಯುವ ಪ್ರಮೋದ್ 'ನಾನು ಆರೆಸ್ಸೆಸ್' ಎಂದು ಗುಟುರು ಹಾಕ್ತಾನೆ. ಇವತ್ತಿಗೂ ಚೆಡ್ಡಿ ಬೈಠಕ್‌ಗಳಲ್ಲಿ ಭಾಗವಹಿಸುವ ಈ ಪ್ರಮೋದ್ ಹಿಂದೂತ್ವದಿಂದ ಸೈಕಿಕ್ ಆಗಿಹೋಗಿರುವಾತ. ಪಿಎಸ್‌ಐನಂಥ ಜವಾಬ್ದಾರಿಯುತ ಹುದ್ದೆಗೆ ನಾಲಾಯಕ್ ಈ ಪಿರ್ಕಿಸ್ ಪ್ರಮೋದ್.

ಕಮ್ಯೂನಲ್ ವಯೋಲೆನ್ಸ್ ನಡೆದರೆ ಈತ ಬ್ಯಾರಿ ಸಾಬಿಗಳನ್ನೇ ಗುರಿಯಾಗಿಟ್ಟುಕೊಂಡು ಬೇಟೆಗೆ ಹೊರಡು ತ್ತಾನೆ. ಕೈಗೆ ಸಿಕ್ಕ ಪಾಪದ ಸಾಬಿಯನ್ನು ತಂದು ಗೋಳು ಹೊಯ್ದುಕೊಳ್ಳುತ್ತಾನೆ. ಇಂಥ ಹಿಂದೂತ್ವದ ನಂಜಿನ ಪ್ರಮೋದ್ ಮೊನ್ನೆ ವ್ಯಾಲೆಂಟೈನ್ಸ್ ದಿನ ಮತೋನ್ಮತ್ತನಾಗಿ ಕ್ರಿಮಿನಲ್ ಪಾತಕವೊಂದು ಮಾಡಿ ಮುಗಿಸಿದ್ದಾನೆ. ಹುಟ್ಟಿನಿಂದ ಮುಸ್ಲಿಮ್ ಎಂಬ ಒಂದೇ ಕಾರಣಕ್ಕೆ ಪತ್ರಕರ್ತನೊಬ್ಬನ ಕೆನ್ನೆಕೆನ್ನೆಗೆ ನಡುರಸ್ತೆಯಲ್ಲೇ ಬಾರಿಸಿ,



ಆತನ ಹುಟ್ಟು-ಧರ್ಮವನ್ನೇ ಗೇಲಿ ಮಾಡಿ ಸತಾಯಿಸಿ ಹಿಂದೂತ್ವದ ತೆವಲನ್ನು ಈ ಬ್ರೂರ್ನಾಸ್ ಪಿಎಸ್‌ಐ ತೀರಿಸಿಕೊಂಡಿದ್ದಾನೆ.

ಅಂದು ವ್ಯಾಲೆಂಟೈನ್ಸ್ ದಿನ. ಮಂಗಳೂರು ಏರಿಯಾ ಅನ್ಯಧರ್ಮದ ಪ್ರೇಮಿಗಳ ಬೇಟೆಗೆ ಇಳಿದಿದ್ದ ಶ್ರೀರಾಮಸೇನೆಯ ಉಪಟಳದಿಂದ ಕಂಗೆಟ್ಟಿತ್ತು. ಕೆಲವೆಡೆ ಚೂರಿ ಇರಿತವೂ ಆಗಿತ್ತು. ಗಲಭೆಯಾಗಿತ್ತು ಬಂದೋಬಸ್ತ್‌ಗೆ ತಿರುಗುತ್ತಿದ್ದ ಚೆಡ್ಡಿ ಎಸ್ಸೈ ಪ್ರಮೋದ್‌ಗೆ ಗುರುಪುರ ಕೈಕಂಬ ಬಸ್ ನಿಲ್ದಾಣದಲ್ಲಿ ನಿಂತಿದ್ದ ಕಸ್ತೂರಿ ಚಾನೆಲ್‌ನ ವರದಿಗಾರ ರಹೀಮ್ ಉಜಿರೆ ಕಂಡಿದ್ದಾರೆ. ಜೀಪು ನಿಲ್ಲಿಸಿದ ಈ ಸ್ಯಾಡಿಸ್ಟ್ ಎಸ್‌ಐ ಆತನ ಹೆಸರು ಕೇಳಿದ್ದಾನೆ. ವರದಿಗಾರ 'ರಹೀಮ್' ಎಂದಿದ್ದೇ ತಡ, ಕೋಮು ಪಿತ್ತ ಈ ಅಪಾಯಕಾರಿ ಎಸ್‌ಐನ ನೆತ್ತಿಗೇರಿದೆ. 'ಜೀಪು ಹತ್ತು' ಎಂದಿದ್ದಾನೆ. ವರದಿಗಾರ ರಹೀಮ್ ಜೀಪೇರಲು ನಿರಾಕರಿಸಿದ್ದಾನೆ.

ಜೀಪಿಳಿದು ಬಂದ ಪ್ರಮೋದ್ ರಹೀಮ್‌ನ ಕೆನ್ನೆಗೆ ಬಾರಿಸಿದ್ದಾನೆ. ಎತ್ತಿ ಜೀಪಿಗೆ ಎಸೆದಿದ್ದಾನೆ. "ಇಲ್ಲ ಸಾರ್ ನಾನು ಕಸ್ತೂರಿ ಟಿವಿ ರಿಪೋರ್ಟರ್... ನನ್ನ ಬಿಟ್ಟು ಬಿಡಿ...." ಎಂದು ಐಡಿಕಾರ್ಡ್ ತೋರಿಸಿದ ರಹೀಮ್. "ನಿನ್ನಂಥ ವರದಿಗಾರರ ಬಾಳ ಕಂಡಿದ್ದೇನೆ, ಬಿಡು... ನೀನು ಬ್ಯಾರಿ ಅಲ್ವಾ... " ಎಂದು ಧರ್ಮಾಂಧನಾಗಿ ನಿಂದಿಸಿದ್ದಾನೆ ಪ್ರಮೋದ್. ರಹೀಮನ ಮತ್ತು ಮೊಬೈಲ್ ಗುರುತುಪತ್ರ ಕಸಿದುಕೊಂಡು ಬಜ್ಪೆ ಠಾಣೆಗೆ ಒಯ್ಯುತ್ತಾನೆ ಈ ಕ್ರಿಮಿನಲ್ ಎಸ್‌ಐ. ಮೂರು ತಾಸು ಅಲ್ಲಿ ರಹೀಮ್‌ನನ್ನು ಅಕ್ರಮ ಬಂಧನದಲ್ಲಿಟ್ಟುಕೊಂಡ ಪ್ರಮೋದ್ ಮೂರೂ ತಾಸು ಧರ್ಮದ ಹೆಸರಲ್ಲೇ ಬೈದಾಡಿದ್ದಾನೆ. "ಮಗನೇ ನೀನು ಬ್ಯಾರಿ ನೆನಪಿರಲಿ... ನೀನ್ಯಾರಿಗಾದರೂ ಕಂಪ್ಲೇಂಟು ಕೊಟ್ಟರೆ ನಿನ್ನ ಭವಿಷ್ಯವೇ ಹಾಳು ಮಾಡ್ತೇನೆ.." ಎಂದರಚಾಡಿದ್ದಾನೆ. ಕೊನೆಗೆ ಪೊಲೀಸ್ ಜತೆ ಅಸಭ್ಯವಾಗಿ ವರ್ತಿಸಿದ್ದಾನೆಂದು ಮುಚ್ಚಳಿಕೆ ಬರೆದು ರಹೀಮ್‌ನ ಸಹಿ ಪಡೆದುಬಿಟ್ಟಿದ್ದಾನೆ.

ಈ ಹುಚ್ಚು ಪಿಎಸ್‌ಐ ಎದುರು ಯಾರೂ ಮಾತಾಡುವಂತೆಯೇ ಇಲ್ಲ. ಆತನ ಅನ್ಯಾಯ-ಅವಾಚ್ಯ ಪದ ಪ್ರಯೋಗವೆಲ್ಲ ಕೇಳಿಕೊಂಡು ಸುಮ್ಮನಿರಬೇಕು. ಎದುರಾಡಿದರೆ 'ಪೊಲೀಸ್ ಜತೆ ಉದ್ಧಟ ವರ್ತನೆ' ಎಂಬ ಕೇಸು ಜಡಿದು ಬಿಡುತ್ತಾನೆ. ಇಂಥ ಸಾವಿರದೊಂದು ಕೇಸ್‌ಗಳ ಸರದಾರ ಈ ಪ್ರಮೋದ್‌ಕುಮಾರ್. ಆರೆಸ್ಸೆಸ್ ಮೂಲದ ಪ್ರಮೋದ್ ಜಿಲ್ಲಾ ಉಸ್ತುವಾರಿ ಮಂತ್ರಿ ಕೃಷ್ಣಪಾಲೇಮಾರ್‌ರ ಹತ್ತಿರದ ಸಂಬಂಧಿ ಬೇರೆ. ಹೀಗಾಗಿ ಈತ ಎಷ್ಟೇ 'ಕಾನೂನುಬಾಹಿರ ಡ್ಯೂಟಿ' ಮಾಡಿದರೂ ಅದು ಎಸ್‌ಪಿ, ಐಜಿಗಳಿಗೆ ಲೆಕ್ಕಕ್ಕೇ ಸಿಗುತ್ತಿಲ್ಲ.

ಮಾಡಬಾರದ್ದೆಲ್ಲ ಮಾಡಿ ಬಚಾವಾಗುತ್ತಾ ಬಂದಿದ್ದ ಪ್ರಮೋದ್‌ಕುಮಾರ್‌ನ ಕಮ್ಯೂನಲ್ ಕ್ರೌರ್ಯವೀಗ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿದೆ. ರಾಜ್ಯ-ರಾಷ್ಟ್ರ ಮಟ್ಟದ ಟಿವಿ ವಾಹಿನಿಯ ವರದಿಗಾರರೆಲ್ಲ ಈ ಅನಾಹುತಕಾರಿ ಪೊಲೀಸ್‌ನ ವಿರುದ್ಧ ಸಿಡಿದೆದ್ದಿದ್ದಾರೆ. ಸಿಎಂ ಯಡ್ಡಿಗೆ ವರದಿಗಾರರು ಪ್ರಮೋದ್‌ನ ಸಸ್ಪೆಂಡ್‌ಮಾಡುವಂತೆ ಹೇಳಿದ್ದಾರೆ. ಸಿಪಿಐಎಂನ ರಾಷ್ಟ್ರನ ನಾಯಕಿ ಬೃಂದಾ ಕಾರಟ್ ಪಿರ್ಕಿಸ್ ಪಿಎಸ್‌ಐ ಪ್ರಮೋದ್‌ನ ಖಾಕಿ ಕಳಚುವಂತೆ ಸಿಎಂ ಭೇಟಿ ಮಾಡಿ ಆಗ್ರಹಿಸಿದ್ದಾರೆ.

ಪ್ರಮೋದ್‌ಗೆ ಕೊಳತೊಡಿಸಲು ಡಿಐಜಿ ಅಜಯ್ ಕುಮಾರ್ ಸಿಂಗ್ ಸಾಹೇಬರಿಗೆ ಇನ್ನೇನು ಸಾಕ್ಷ್ಯಾಧಾರ ಬೇಕು? ಹುಟ್ಟಾ ಚೆಡ್ಡಿ ಗುಣಧರ್ಮದ ಪ್ರಮೋದ್‌ಗೆ ಖಾಕಿ ಖದರು ಬಂದಿರುವುದು ಮಂಗನಿಗೆ ಹೆಂಡ ಕುಡಿಸಿದಂತಾಗಿದೆ. ಈ ಮಂಗನ ಬಾಲ ಕತ್ತರಿಸದಿದ್ದರೆ ಮಂಗಳೂರಿಗೆ ಅಪಾಯ ತಪ್ಪಿದ್ದಲ್ಲ. ಮಾತುಮಾತಿಗೆ ಆರೆಸ್ಸೆಸ್ ರಿಂಗ್ ಮಾಸ್ಟರ್ ಕಲ್ಲಡ್ಕ ಭಟ್ರ ಕಾಲಿಗೆ ಡೈ ಹೊಡೆಯುವ ಹೇತ್ಲಾಂಡಿ ಹೋಮ್ ಮಿನಿಸ್ಟರ್ ಡಾ.ಆಚಾರ್ಯನಿಂದಾಗದ ಕೆಲಸವಿದು. ದಿಕ್ಕೆಟ್ಟ ಜನ ಬೀದಿಗಿಳಿವ ಮೊದಲೇ ಐಜಿ ಗೋಪಾಲ ಹೊಸೂರ್, ಡಿಐಜಿ ಅಜಯಕುಮಾರ್ ಸಿಂಗ್‌ಗಳು ಕರಾವಳಿಯ ಹಿಂದೂ ಮತಾಂಧ ಪೊಲೀಸ್ ಅಧಿಕಾರಿಗಳಿಗೆ ಅಂಕುಶ ಇಡಬೇಕಿದೆ.

● ನಹುಶ

ಪಿರ್ಕೀಸ್ ಪ್ರಮೋದನ ಪಾತಕಗಳು

ಜಿಲ್ಲಾ ಉಸ್ತುವಾರಿ ಮಂತ್ರಿ-ಪಕ್ಕಾ ಚೆಡ್ಡಿ ಭೂ ದಂಧೆದಾರ ಕೃಷ್ಣ ಪಾಲೇಮಾರ್‌ರ ಕೃಪಾಕಟಾಕ್ಷದಿಂದ ಬಜ್ಪೆ ಪಿಎಸ್‌ಐ ಪ್ರಮೋದ್‌ಕುಮಾರ್ ಕೊಬ್ಬಿ ಹೋಗಿದ್ದಾನೆ. ಸದಾ ಒಂದಿಲ್ಲೊಂದು ಪುಂಡಾಟ-ದಾದಾಗಿರಿ ಮಾಡದಿದ್ರೆ ಈತನಿಗೆ ಉಂಡ ಅನ್ನ ಅರಗುವುದೇ ಇಲ್ಲ. ಆರೆಸ್ಸೆಸ್ ಬಲ, ಮಂತ್ರಿ ರಕ್ತ ಸಂಬಂಧದಿಂದ ಈತ ಮಾಡಿದ ಬಾನಂಗಡಿ ಮಹಿಮೆ ಒಂದೆರಡಲ್ಲ. ಆತನ ಭಂಡಾಟ-ಪುಂಡಾಟದ ಕೆಲವು ಸ್ಯಾಂಪಲ್‌ಗಳು ಇಲ್ಲಿದೆ.

ಮಂಗಳೂರಿನ ಬೇಂಗ್ರೆ ಎಂಬಲ್ಲಿ ನಡೆಯುತ್ತಿದ್ದ ಮುಸ್ಲಿಮರ ಕುರ್ಬಾನಿ ಆಚರಣೆಗೆ ಅಡ್ಡಿಪಡಿಸಿ ಲಾಠಿಚಾರ್ಜ್ ಮಾಡಿ ಗಲಭೆ ಎಬ್ಬಿಸಿದ್ದು ಮತಾಂಧ ಹುಚ್ಚಿನ ಅವಾಂತರವಿದು.

ಧರ್ಮರಾಜ್ ಎಂಬ ಬಿಲ್ಡರ್‌ನ ಕಚೇರಿ ಸಿಬ್ಬಂದಿಯೊಬ್ಬಳು ಆತ್ಮಹತ್ಯೆಗೆ ಪ್ರಯತ್ನಿಸಿದ್ದ ಕೇಸ್ ಈತನಿಗೆ ಸಿಕ್ಕಿತ್ತು. ಆಗ ಆತನ ಚೇಂಬರ್‌ಗೆ ಬಂದಿದ್ದ ಧರ್ಮರಾಜ್ ರಾಜಿ ಮೂಲಕ ನಿಕಾಲಿ ಮಾಡಲು ವಿನಂತಿಸಿದ್ದರು. ಅಷ್ಟಕ್ಕೆ ಖಾಕಿ ಈಗೋ ಕೆರಳಿತು ಪ್ರಮೋದ್‌ಗೆ. 'ನೀನ್ಯಾವನಲೆ ನಂಗೆ ಹೇಳೋಕ್ಕೆ' ಎಂದಬ್ಬರಿಸುತ್ತಾ ಧರ್ಮರಾಜ್‌ನ ಜುಟ್ಟು, ಜನಿವಾರ, ಕಾಲರ್ ಹಿಡಿದೆಳೆದು ರಂಪ ಎಬ್ಬಿಸಿ ಕುಖ್ಯಾತನಾಗಿದ್ದ ಪ್ರಮೋದ್ ಸಾಹೇಬ!

ಎಸ್‌ಇಜೆಡ್‌ಗೆ ಬಲವಂತವಾಗಿ ಭೂಸ್ವಾಧೀನ ನಡೆದಿತ್ತು. ಆಗ ಪ್ರತಿಭಟನೆಗಿಳಿದಿದ್ದ ದಲಿತ ನಾಯಕನೊಬ್ಬನಿಗೆ ಈ ಪಿರ್ಕೀಸ್ ಪಿಎಸ್‌ಐ ಹೊಡೆದುಬಿಟ್ಟಿದ್ದ. ಇದನ್ನು ದಲಿತ ಹೋರಾಟಗಾರ್ತಿ ವಿದ್ಯಾ ದಿವಾಕರ್ ಪ್ರಶ್ನಿಸಿದ್ದರು. ಇದು ಸಹಿಸಲಾಗದ ಪಿಎಸ್‌ಐ ಪ್ರಮೋದ್ ಆಕೆ ಮೇಲೆ ಉಲ್ಟಾ ಕೇಸ್ ಜಡಿದು ಜನರಿಂದ ಉಗಿಸಿಕೊಂಡಿದ್ದ.

ಸೆರ್ಝ್‌ನ ಯೋಜನಾ ವ್ಯವಸ್ಥಾಪಕ ವಿಜಯಾನಂದ ನಾಯಕ್ ಎನ್‌ಓಸಿ ಬಾಂಡ್‌ಗಾಗಿ ಬಜ್ಪೆ ಠಾಣೆಗೆ ಹೋಗಿದ್ದರು. ದಲಿತ ಅಧಿಕಾರಿಯಾದ ಈತ ಮಾಜಿ ಶಾಸಕರೊಬ್ಬರ ಮಗನೂ ಹೌದು. ಇಂಥವರಿಗೆ ಬಾಯಿಗೆಬಂದಂತೆ ಈ ಎಸ್‌ಐ ಬೈದಿದ್ದ. ಆಗ ನಾಯಕ್ ತಾನು ಹಿರಿಯ ಅಧಿಕಾರಿಗಳಿಗೆ ದೂರು ನೀಡುತ್ತೇನೆ ಎಂದಿದ್ದೇ ತಡ, ಈ ಸೈಕಿಕ್ ಎಸ್‌ಐ ಆ ನಾಯಕ್ ಮೇಲೆಯೇ ಕೇಸ್ ಹಾಕಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದ.

ಇದು ಎಸ್‌ಐ ಪ್ರಮೋದ್‌ನ ನಿತ್ಯ ರಗಳೆ. ಈತ ಪೊಲೀಸ್ ಡಿಪಾರ್ಟ್‌ಮೆಂಟ್‌ಗೇ ಕಳಂಕ. ಈ ಪಬ್ಲಿಕ್‌ಪೀಡಕನನ್ನು ಮನೆಗೆ ಕಳಿಸಿ ನಿಷ್ಠುರ ತನಿಖೆಗೊಳಪಡಿಸುವ ತಾಕತ್ತು ಐಜಿ-ಡಿಜಿಪಿಗಳಿಗೆ ಇದೆಯೇ? ಇದು ಮಂಗಳೂರಿನ ನೊಂದ ಜನರ ಪ್ರಶ್ನೆ!

ಹುಬ್ಬಳ್ಳಿ: ಮುಚ್ಚುವ ಹಾದಿಯಲ್ಲಿ ರೈಲ್ವೆ ಕಾರ್ಯಾಗಾರ


ಅಧಿಕಾರಿಗಳ ಧನದಾಹ, ಅದಕ್ಷತೆ ಮತ್ತು ಬದಲಾದ ತಂತ್ರಜ್ಞಾನಕ್ಕೆ ತೆರೆದುಕೊಳ್ಳದೇ ಇರುವುದು ಈ ಎಲ್ಲ ಕಾರಣಗಳಿಂದ ಹುಬ್ಬಳ್ಳಿಯ ರೈಲ್ವೆ ಕಾರ್ಯಾಗಾರ (ರೈಲ್ವೆ ವರ್ಕ್‌ಶಾಪ್) ಮುಚ್ಚುವ ಹಂತಕ್ಕೆ ತಲುಪಿದೆ. ಇದು ಮೂರೂವರೆ ಸಾವಿರ ಕಾರ್ಮಿಕರನ್ನು ಅತಂತ್ರ ಸ್ಥಿತಿಗೆ ದೂಡಲಿದೆ. ಹಿಂದೆ ಹತ್ತು ಸಾವಿರ ಜನರಿಗೆ ಬದುಕು ನೀಡಿದ್ದ ಈ ಕಾರ್ಯಾಗಾರದಲ್ಲೀಗ ಬರೀ ಮೂರೂವರೆ ಸಾವಿರ ದಷ್ಟು ಕಾರ್ಮಿಕರು ಮಾತ್ರ ಇದ್ದಾರೆ. ಶತಮಾನಗಳ ಇತಿಹಾಸದ ಈ ಕಾರ್ಖಾನೆ ಹಂತಹಂತವಾಗಿ ಪತನದತ್ತ ಸಾಗಿದ್ದರ ವಿವರಗಳನ್ನು ನೋಡುತ್ತಾ ಹೋದರೆ, ನಮ್ಮ ಸರ್ಕಾರಗಳು ಸಾರ್ವಜನಿಕ ವಲಯದ ಕೈಗಾರಿಕೆಗಳನ್ನು ಕೊಲ್ಲುತ್ತ ಬಂದ ಕತೆಯು ಅನಾವರಣಗೊಳ್ಳುತ್ತದೆ. ಹಿಂದೊಮ್ಮೆ, ಫೌಂಡ್ರಿ ಶಾಪ್, ಸ್ಮಿಥಿ ಶಾಪ್, ಮಷಿನ್ ಶಾಪ್‌ಗಳನ್ನೆಲ್ಲ ಹೊಂದಿ ವ್ಯಾಗನ್‌ಗಳ ರಿಪೇರಿ ಜೊತೆಗೆ, ರಿಪೇರಿ ಕೆಲಸಕ್ಕೆ ಬೇಕಾಗುವ ಉಪಕರಣಗಳನ್ನು ಉತ್ಪಾದಿಸುತ್ತ ಸ್ವಾವಲಂಬಿ ಕಾರ್ಖಾನೆ ಎನಿಸಿದ್ದ ಈ ಕಾರ್ಯಾಗಾರದ ಒಂದೊಂದೇ ವಿಭಾಗಗಳು ಕಾಲಕ್ರಮೇಣ ಮುಚ್ಚುತ್ತ ಬಂದವು. ಉತ್ತರ ಭಾರತದಿಂದ ಬಂದ ಅಧಿಕಾರಿಗಳ ಅದಕ್ಷತೆ ಮತ್ತು ಭ್ರಷ್ಟಾಚಾರವೇ ಇದಕ್ಕೆ ಮುಖ್ಯ ಕಾರಣ. ಜೊತೆಗೆ ಪ್ರಮುಖ ಕೆಲಸಗಳನ್ನು ಔಟ್‌ಸೋರ್ಸ್ ಮಾಡುತ್ತ ಮಾಡುತ್ತ ಕೊನೆಕೊನೆಗೆ ಆ ಕೆಲಸಗಳನ್ನು ಖಾಸಗಿ ಕಂಪನಿಗಳ ಮಡಿಲಿಗೆ ಹಾಕುತ್ತಾ ಬಂದಿದ್ದು, ಬರುತ್ತಿರುವುದು ಕೂಡಾ ಈ ಕಾರ್ಖಾನೆಯ ಅವಸಾನಕ್ಕೆ ಕಾರಣವಾಗಿದೆ.



ಬೋಗಿ ಫ್ರೇಮ್ ತಯಾರಿಕೆ ಬಂದ್

ಸದ್ಯಕ್ಕೆ ಈ ಕಾರ್ಯಾಗಾರಕ್ಕೆ ಭಾರೀ ಹೊಡೆತ ಬೀಳುತ್ತಿರುವುದು ಮುಖ್ಯ ತಾಂತ್ರಿಕ ಅಭಿಯಂತರ ವಿನಯ್ ಬಬಟವಾಲೆ ಎಂಬ ಭ್ರಷ್ಟನಿಂದ. ಕಳೆದ ಹದಿನೈದು ವರ್ಷಗಳಿಂದ ನಿರಾತಂಕವಾಗಿ ಇಲ್ಲಿ ಬೋಗಿ ಫ್ರೇಮ್‌ಗಳನ್ನು ತಯಾರಿಸ ಲಾಗುತ್ತಿತ್ತು. ಈ ವಿಭಾಗವನ್ನು ಉನ್ನತ ದರ್ಜೆಗೇರಿಸಲು 2009 ರಲ್ಲಿ ರೈಲ್ವೆ ಇಲಾಖೆ 83 ಕೋಟಿ ರೂ. ಬಿಡುಗಡೆ ಮಾಡಿತ್ತು. ಸದ್ಯ ಕಾರ್ಯಾಗಾರದ ಮುಖ್ಯ ವರ್ಕ್‌ಶಾಪ್ ಪ್ರಬಂಧಕಾರದ ದಕ್ಷ ಘೋಷ್‌ರಾಯ್ ಎಂಬುವರು ಈ ಹಣ ಬಳಸಿ ನವೀಕರಣ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾ ಬಂದಿದ್ದರು. ಮುಖ್ಯ ತಾಂತ್ರಿಕ ಅಭಿಯಂತರನಾಗಿ ವಕ್ಕರಿಸಿದ ವಿನಯ್ ಭಾರೀ ಹಸಿವಿನಿಂದಲೇ ಬಂದಿದ್ದ. ಈ ಹಿಂದೆ ಇದ್ದ ಕಾರ್ಯಾಗಾರದಲ್ಲಿ ಬೋಗಿ ಫ್ರೇಮ್ ತಯಾರಿಕಾ ಕೆಲಸವನ್ನು ಬಾಟಲಿವಾಲಾ ಎಂಬ ಕಂಪನಿಗೆ ಹಸ್ತಾಂತರಿಸಿ ಸಾಕಷ್ಟು ತಿಂದು ತೇಗಿಯೇ ಬಂದಿದ್ದ ವಿನಯ್ ಇಲ್ಲಿಯೂ ತನ್ನ ಖಾಸಗಿ ಕರಣದ ದಂಧೆ ಶುರುವಿಟ್ಟ. CWM ಘೋಷ್ ರಾಯ್‌ರನ್ನು ತನ್ನಲ್ಲಿಗೆ ಕರೆಸಿಕೊಂಡ ವಿನಯ್, ನವೀಕರಣಕ್ಕೆ ಬಂದ 83 ಕೋಟಿ ರೂ.ಗಳಲ್ಲಿ ತನ್ನ ಪಾಲು ಬಂದಿಲ್ಲ ಎಂದು ವರಾತ ತೆಗೆದಾಗ. ಪ್ರಾಮಾಣಿಕ ಘೋಷ್‌ರಾಯ್ ಮೌನವಾಗಿದ್ದಾರೆ. ಇದನ್ನೇ ಮನಸ್ಸಿನಲ್ಲಿಟ್ಟುಕೊಂಡ ವಿನಯ್ ಇಲ್ಲಿ ಬೋಗಿಫ್ರೇಮ್ ತಯಾರಿಸುವುದೇ ಬೇಡ ಎಂಬ ನಿರ್ಧಾರಕ್ಕೆ ಬಂದಿದ್ದಾನೆ. ಸದ್ಯದಲ್ಲೇ ಇಲ್ಲಿ ಬೋಗಿಫ್ರೇಮ್ ತಯಾರಿಕೆಯನ್ನು ನಿಲ್ಲಿಸಿ ಸಾವಿರಾರು ಕಾರ್ಮಿಕರನ್ನು ಬೀದಿಗೆ ತಳ್ಳಲಿದ್ದಾನೆ. ಮತ್ತೆ ಈ ಬೋಗಿಫ್ರೇಮ್ ಕೆಲಸವನ್ನು ಗಿಟ್ಟಿಸಲು ಬಾಟ್ಲಿವಾಲಾ ಎಂಬ ಆಸಾಮಿ ಹಣದ ಚೀಲ ಹಿಡಿದು ಕಾಯುತ್ತ ಕುಳಿತಿದ್ದಾನೆ.

ಈಗಾಗಲೇ 12 ತಿಂಗಳಿಗೆ ರಿಪೇರಿಯಾಗುತ್ತಿದ್ದ ಬೋಗಿಗಳು ಈಗ 18 ತಿಂಗಳು ಅವಧಿ ತೆಗೆದುಕೊಳ್ಳುತ್ತಿವೆ. ಈ ಮೊದಲು ಪ್ರತಿ ತಿಂಗಳು 120 ಬೋಗಿ ರಿಪೇರಿ ಕೆಲಸ ನಡೆಯುತ್ತಿದ್ದರೆ, ಈಗ ವಿನಯ್‌ನ ಆಡಳಿತದಲ್ಲಿ 100 ಬೋಗಿ ಮಾತ್ರ ರಿಪೇರಿ ಆಗುತ್ತಿವೆ. ವಿನಯ್‌ನ ಇಂತಹ ಭ್ರಷ್ಟಾಚಾರವನ್ನು ವಿರೋಧಿಸಿದ ಮಜ್ದೂರ್ ಯೂನಿಯನ್ ವಲಯ ಪ್ರಧಾನ ಕಾರ್ಯದರ್ಶಿ ಎ.ಎಮ್.ಡಿಕ್ರೂಜ್‌ರಿಗೆ ಆವಾಜ್ ಹಾಕಿದ್ದಾನೆ ವಿನಯ್



125 ವರ್ಷಗಳ ಇತಿಹಾಸದ ಕಾರ್ಯಾಗಾರವೊಂದು ಹೀಗೆ ದಿನೇದಿನೇ ಶಿಥಿಲಗೊಳ್ಳುತ್ತ ಮುಚ್ಚುವ ಹಾದಿಯಲ್ಲಿದೆ. ಈ ರೈಲ್ವೆ ಬಜೆಟ್ಟಿನಲ್ಲಿ ಮಮತಾ ಬ್ಯಾನರ್ಜಿ ಈ ಕಾರ್ಯಾಗಾರದ ಉಳಿವಿಗೆ ಏನೂ ನೆರವು ನೀಡದಿದ್ದರೆ ಸದ್ಯದಲ್ಲೇ ಈ ವರ್ಕ್‌ಶಾಪ್ ಬಂದ್ ಆಗಲಿದೆ. ಇದು ಮೂರೂವರೆ ಸಾವಿರ ಕಾರ್ಮಿಕ ಕುಟುಂಬಗಳನ್ನು ಬೀದಿಗೆ ತಳ್ಳಲಿದೆ.

ಅಂದು ವಿಜೃಂಭಣೆ; ಇಂದು ಅವಸಾನ

ಉತ್ತರ ಕರ್ನಾಟಕದಲ್ಲಿ ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಿದ್ದ ಉತ್ತಮ ಗುಣಮಟ್ಟದ ಹತ್ತಿಬೆಳೆಯನ್ನು ಕೇಂದ್ರವಾಗಿಟ್ಟುಕೊಂಡ ಬ್ರಿಟಿಷರು 1885 ರಲ್ಲಿ ಮಹಾದೇವ ಜವಳಿಗಿರಣಿ ಆರಂಭಿಸಿದರು. ಆಗಲೇ ಸರಕು ಸಾಗಾಣಿಕೆಯ ವ್ಯಾಗನ್‌ಗಳ ರಿಪೇರಿಗೆಂದು ರೈಲ್ವೆ ವರ್ಕ್‌ಶಾಪ್ ಅನ್ನೂ. ಆರಂಭಿಸಿದರು. ಪ್ರಾರಂಭದ ವರ್ಷಗಳಲ್ಲೇ ಈ ವರ್ಕ್‌ಶಾಪ್‌ನಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಉದ್ಯೋಗ ಪಡೆದವರು ಸುಮಾರು ಹತ್ತು ಸಾವಿರ ಜನ. ಆರಂಭದಲ್ಲಿ ರೈಲ್ವೆ ಇಂಜಿನ್, ಬೋಗಿ, ವ್ಯಾಗನ್‌ಗಳ ದುರಸ್ತಿ ಕಾರ್ಯಕ್ಕೆ ಬೇಕಾದ ಉಪಕರಣಗಳ ತಯಾರಿಕೆಯೂ ಆರಂಭವಾಗಿತು. ಲೋಕೋ ಎಂಜಿನ್ (ಉಗಿಬಂಡಿ)ಗೆ ಬೇಕಾದ ಹಿತ್ತಾಳೆ ಸಾಮಾನುಗಳನ್ನು ಹಾಗೂ ಬ್ರೇಕ್‌ಬ್ಲಾಕ್‌ಗಳನ್ನು ಕರಗಿಸಿ ಮತ್ತೆ ಹೊಸದಾಗಿ ತಯಾರಿಸಲು 1887 ರಲ್ಲಿ ಫೌಂಡ್ರಿಶಾಪ್ ಅನ್ನು ತೆರೆಯಲಾಯಿತು.

ಆದರೆ 1993 ರ ವೇಳೆಗೆ ಬಹುತೇಕ ಕಡೆ ಬ್ರಾಡ್‌ಗೇಜ್ ವ್ಯವಸ್ಥೆ ಬಂದ ಮೇಲೆ ಹುಬ್ಬಳ್ಳಿ ವರ್ಕ್‌ಶಾಪ್‌ಗೆ ಭಾರೀ ಹೊಡೆತ ಬಿತ್ತು. ಮೀಟರ್‌ಗೇಜ್ ಮಾರ್ಗದ ವ್ಯಾಗನ್, ಬೋಗಿಗಳ ಬಳಕೆ ಕಡಿಮೆಯಾದಂತೆ ಹುಬ್ಬಳ್ಳಿ ವರ್ಕ್‌ಶಾಪ್‌ನ ಪ್ರಾಮುಖ್ಯವೂ ತಗ್ಗತೊಡಗಿತು. ಆಗಲೇ ನವೀಕರಣಗೊಂಡಿದ್ದರೆ ಇವತ್ತು ಉಸಿರುಗಟ್ಟುವ ಸ್ಥಿತಿ ಬರುತ್ತಿರಲಿಲ್ಲ. ಬರುಬರುತ್ತಾ ರೈಲ್ವೆ ವರ್ಕ್‌ಶಾಪ್‌ನ ಕಾಮಗಾರಿಗಳನ್ನು ಹೊರಗುತ್ತಿಗೆ ನೀಡುತ್ತ ಬಂದಿದ್ದರಿಂದ ವರ್ಕ್‌ಶಾಪ್‌ನ ಸಾವಿರಾರು ಕಾರ್ಮಿಕರು ಉದ್ಯೋಗ ಕಳೆದುಕೊಂಡರು. ಡಿಸೇಲ್ ಇಂಜಿನ್‌ಗಳು ಹೆಚ್ಚಾದ ಮೇಲೆ ವರ್ಕ್‌ಶಾಪಿನಲ್ಲಿದ್ದ ಉಗಿಬಂಡಿ ದುರಸ್ತಿ ಘಟಕವನ್ನು ಮುಚ್ಚಲಾಗಿತು. ಎಂ.ಜಿ. ವ್ಯಾಗನ್‌ಗಳ ಜಾಗದಲ್ಲಿ ಬಿ.ಜಿ. ವ್ಯಾಗನ್‌ಗಳು ಬಂದ ಮೇಲಂತೂ ಇಲ್ಲಿ ವ್ಯಾಗನ್ ರಿಪೇರಿ ಕೆಲಸವೂ ಕಡಿಮೆಯಾಯಿತು. ಮೊದಲಿಗೆ ವ್ಯಾಗನ್ ಮತ್ತು ಬೋಗಿಗಳ ಗಾಲಿಗಳಿಗೆ ಬೇಕಾದ ಬ್ರೇಕ್‌ಬ್ಲಾಕ್‌ಗಳು ಇಲ್ಲಿಯ ಐರನ್ ಫೌಂಡ್ರಿಯಲ್ಲೇ ತಯಾರಾಗುತ್ತಿದ್ದವು. ಫೈಬರ್ ಬ್ರೇಕ್ ಬ್ಲಾಕ್‌ಗಳನ್ನು ಖಾಸಗಿಯವರಿಂದ ಪಡೆಯತೊಡಗಿದ ಮೇಲೆ ಇಲ್ಲಿನ ಫೌಂಡ್ರಿಶಾಪ್ ಸಹ ಕಣ್ಣುಮುಚ್ಚಿತು.

ಕ್ವಾಯಿಲ್ ಸ್ಪ್ರಿಂಗ್‌ಗಳನ್ನು ಹೆಚ್ಚಾಗಿ ಬಳಸತೊಡಗಿದ ಮೇಲೆ ಸ್ಪ್ರಿಂಗ್‌ಶಾಪ್‌ನಲ್ಲಿದ್ದ ಶೇ. 75 ಕಾರ್ಮಿಕರು ಕೆಲಸ ಕಳೆದುಕೊಂಡರು. ಹೀಗೆ ಒಂದೊಂದು ವಿಭಾಗ ಮುಚ್ಚಿದಾಗಲೂ ಅಲ್ಲಿನ ಬೆಲೆಬಾಳುವ ಯಂತ್ರಗಳನ್ನು ಬೇಕಾಬಿಟ್ಟಿ ರೇಟಿಗೆ ಮಾರಿದ ಅಧಿಕಾರಿಗಳು ಕಮಿಷನ್ ತಿಂದು ನಿವೃತ್ತರಾಗಿ ಹೋದರು. ಆರ್.ಆರ್. ಬಡಗಿ ಎಂಬ ಒಬ್ಬರೇ ಅಧಿಕಾರಿ ಈ ವರ್ಕ್‌ಶಾಪ್ ಉಳಿಸಲು ಸಾಕಷ್ಟು ಪ್ರಯತ್ನಿಸಿದರು. ಅವರ ನಿವೃತ್ತಿಯ ನಂತರ ಬಂದ ಉತ್ತರ ಭಾರತದ ಅಧಿಕಾರಿಗಳು ಈ ಕಾರ್ಖಾನೆಯ ಕುತ್ತಿಗೆ ಹಿಸುಕುತ್ತಲೇ ಬಂದರು.

ಹೀಗೆ ಹಂತಹಂತವಾಗಿ ನಶಿಸುತ್ತಾ ಬಂದ ಈ ವರ್ಕ್‌ಶಾಪ್ ಉಳಿಸಲು ಇನ್ನೂ ಕಾಲ ಮಿಂಚಿಲ್ಲ. ನಮ್ಮ ಸಂಸದರು ಮನಸ್ಸು ಮಾಡಿದರೆ ಈ ರೈಲ್ವೆ ಬಜೆಟ್‌ನಲ್ಲಿಯೇ ವರ್ಕ್‌ಶಾಪ್ ಅನ್ನು ಪುನಶ್ಚೇತನಗೊಳಿಸುವ ಪ್ಯಾಕೇಜ್ ಒಂದನ್ನು ಪಡೆಯಬಹುದು. ಅಂಥಾ ಇಚ್ಛಾಶಕ್ತಿ ಈ ಜನದ್ರೋಹಿ ಸಂಸದರಿಗಿದೆಯೋ ಎಂಬುದೇ ಅನುಮಾನ. ●

ಹುಬ್ಬಳ್ಳಿಯಾಂವ

ಕೈಗಾರಿಕೆಗಳ ಮರಣ

ಹುಬ್ಬಳ್ಳಿಯ ದೊಡ್ಡ ದೊಡ್ಡ ಕೈಗಾರಿಕೆಗಳೆಲ್ಲ ಒಂದೊಂದಾಗಿ ಬಾಗಿಲು ಮುಚ್ಚುತ್ತ ಸಾವಿರಾರು ಕಾರ್ಮಿಕರನ್ನು ಬೀದಿಗೆ ತಳ್ಳುತ್ತ ಬಂದಿವೆ. ಮೊದಲಿಗೆ ಮಹಾದೇವ ಮಿಲ್ಸ್ ಮುಚ್ಚಿತು. ಅದರ ಹಿಂದೆಯೇ ಸುಂದತ್ತಾ ಫ್ಯಾಕ್ಟರಿ ಕ್ಲೋಸ್ ಆಯಿತು. ಎ.ಕೆ. ಇಂಡಸ್ಟ್ರಿಸ್, ಬಿಡಿಕೆ, ಮೈಕ್ರೊಫಿನಿಷ್‌ನಂತಹ ಫ್ಯಾಕ್ಟರಿಗಳು ಹಾಗೂಹೀಗೂ ಜೀವ ಹಿಡಿದು ಬದುಕುತ್ತಿವೆಯಷ್ಟೇ. ರೈತರ 600 ಎಕರೆ ಫಲವತ್ತಾದ ಭೂಮಿ ನುಂಗಿ ಧಾರವಾಡದಲ್ಲಿ ಸ್ಥಾಪನೆಗೊಂಡ ಟಾಟಾ ಮೋಟಾರ್ಸ್‌ನಲ್ಲಿ ಒಂದು ಸಾವಿರ ಚಿಲ್ಲರೆ ಜನರಿಗೆ ಕೆಲಸ ಸಿಕ್ಕಿದೆಯಷ್ಟೇ. ಇದರಲ್ಲಿ ಸ್ಥಳೀಯರಿಗೆ ಆದ್ಯತೆಯನ್ನು ನೀಡಿಲ್ಲ.

ಇನ್ನು ಇಲ್ಲೊಂದು ಐಟಿ ಪಾರ್ಕ್ ಇದೆಯಾದರೂ, ಹುಬ್ಬಳ್ಳಿಯ ಸುಧಾಮೂರ್ತಿಯೇ ಇನ್ಫೋಸಿಸ್ ಬ್ರ್ಯಾಂಚ್ ಆರಂಭಿಸಲು ಒಲ್ಲರು. ಹೀಗಾಗಿ ಈ ಐಟಿಪಾರ್ಕು ಖಾಲಿ ಹೊಡೆಯುತ್ತಿದೆ. ಆದರೂ ಕೈಗಾರಿಕಾ ಮಂತ್ರಿ ನಿರಾಣಿ ಮಾತ್ರ ಹೊಸ ಕೈಗಾರಿಕೆಯ ಹೆಸರಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ಕೈಹಾಕುತ್ತಲೇ ಇದ್ದಾನೆ.


ಎಲ್ಲವೂ ಬೆಂಗಳೂರು ಕೇಂದ್ರಿತವಾದ ನಾಡಲ್ಲಿ ಇನ್ನೇನಾಗುತ್ತದೆ?

ಕೃಷ್ಣಾತೀರದ ಜಾತಿವ್ಯವಸ್ಥೆಗೆ ನೀಲು ಎಂಬ ಯುವತಿ ಬಲಿ

ಕೃಷ್ಣಾತೀರದ ಜಾತಿವ್ಯವಸ್ಥೆಯ ಕಿನ್ನಾಲಿಗೆಗೆ ನೀಲು ಎಂಬ ಹೂವು ಸುಟ್ಟು ಬೂದಿಯಾಗಿದೆ. ದಲಿತನೊಂದಿಗೆ ಪ್ರೇಮವಿವಾಹವಾದ ಕಾರಣಕ್ಕಾಗಿ ತನ್ನದೇ ಪಂಚಮಸಾಲಿ ಲಿಂಗಾಯತರ ಆಕ್ರೋಶಕ್ಕೆ ನೀಲು ಬಲಿಯಾಗಿದ್ದಾಳೆ.

ನೀಲುಳನ್ನು ಸುಟ್ಟವರ್ಯಾರು? ಆಕೆಯ ತಂದೆತಾಯಿಗಳೇ ಇದಕ್ಕೆ ಸಾಕ್ಷಿಯಾದರೆ? ಜಮಖಂಡಿಯ ಸಿಪಿಐ ಸಂಕದ ಇದನ್ನು ತಪ್ಪಿಸಬಹುದಿತ್ತೆ?

ಜಮಖಂಡಿ ಶಾಸಕ ಶ್ರೀಕಾಂತ ಕುಲಕರ್ಣಿಗಿದು ಗೊತ್ತೇ ಆಗಲಿಲ್ಲವೆ? ತೇರದಾಳ ಶಾಸಕ ಸಿದ್ದು ಸವದಿ ಸಹೋದರ ಯೋಗಪ್ಪ (ಏಗಪ್ಪ) ಸವದಿಯೂ ನೀಲು ಸಾವಿಗೆ ಕಾರಣವಲ್ಲವೆ? ಹೀಗೆ ಪ್ರಶ್ನೆಗಳ ಸರಮಾಲೆಯೇ ಕಣ್ಮುಂದೆ ಬರುತ್ತದೆ. ಜಮಖಂಡಿ ತಾಲ್ಲೂಕಿನ ತುಬಚಿ ಗ್ರಾಮದ ಲಿಂಗಾಯತ ಪಂಚಮಸಾಲಿ ಸಮುದಾಯದ ನೀಲು ಬಿರಾದಾರ್ ಪಾಟೀಲ್‌ಗೆ ತನ್ನೂರಿನ ದಲಿತ ಯುವಕ ಈಶ್ವರ ಮಾಂಗ ಎನ್ನುವಾತನೊಂದಿಗೆ ಪ್ರೇಮಾಂಕುರವಾಯಿತು. ಮುಂಬೈನ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುವ ಈಶ್ವರ್ ಊರಿಗೆ ರಜೆಗೆಂದು ಬಂದಾಗ ಈ ಪ್ರೀತಿ ಮೊಳಕೆಯೊಡೆದಿದೆ. ಮುಂದೆ ಆತ ಮುಂಬೈಗೆ ವಾಪಾಸಾದ ಮೇಲೆ ಮೊಬೈಲ್‌ನಲ್ಲಿ ಪ್ರೇಮ ಗಟ್ಟಿಗೊಳ್ಳುತ್ತಾ ಸಾಗಿದೆ. ದಲಿತನೊಬ್ಬ ಪಂಚಮಸಾಲಿ ಹುಡುಗಿಯನ್ನು ವರಿಸುವುದನ್ನು ಜಮಖಂಡಿಯ ಜಾತಿವ್ಯವಸ್ಥೆ ಸಹಿಸುವುದಿಲ್ಲ ಎಂಬುದರ ಅರಿವಿದ್ದ ಈಶ್ವರ್ ಮತ್ತು ನೀಲು ಮುಂಬೈನಲ್ಲಿ ಮದುವೆಯಾಗುವ ನಿರ್ಧಾರ ಮಾಡಿದರು. ಅದರಂತೆ 20, ಸೆಪ್ಟೆಂಬರ್ 2009ರಂದು ಮುಂಬೈನಲ್ಲಿ ಈಶ್ವರನ ತಂದೆತಾಯಿ, ಗೆಳೆಯರ ಸಮ್ಮುಖದಲ್ಲಿ ಸರಳವಾಗಿ ಮದುವೆಯಾದರು.



ಅಲ್ಲಿಂದಲೇ ತನ್ನ ತಂದೆತಾಯಿಗೆ ಪತ್ರ ಬರೆದ ನೀಲು "ನಾನು ಗಂಡ, ಅತ್ತೆ-ಮಾವರೊಂದಿಗೆ ಸುಖವಾಗಿರುವೆ. ನೀವು ಹುಡುಕುವ ಹುಡುಗರು ನಮ್ಮ ಆಸ್ತಿಗಾಗಿ ನನ್ನ ಮದುವೆಗೆ ಮುಂದಾಗುತ್ತಾ ಇದ್ದರಷ್ಟೇ, ಈಗ ನಾನು, ಈಶ್ವರ್ ಪರಸ್ಪರ ಪ್ರೀತಿಸಿ ವಿವಾಹವಾಗಿದ್ದೇವೆ. ನೀವು ಈ ವಿಷಯವನ್ನು ರಂಪ ಮಾಡಬೇಡಿ" ಎಂದು ಸ್ಪಷ್ಟವಾಗಿ ವಿನಮ್ರತೆಯಿಂದ ಕೇಳಿಕೊಂಡಿದ್ದಾಳೆ. ತಾಯಿಗೆ ಫೋನ್ ಮಾಡಿ ಎಲ್ಲ ವಿವರಿಸಿದ್ದಾಳೆ. ಅಲ್ಲಿಗೆ ಈ ಪ್ರಕರಣ ಮುಗಿದುಹೋಗಬೇಕಿತ್ತು. ಆದರೆ ಜಾತಿ ಅಹಂನಿಂದ ತುಂಬಿದ ಕೆಲ ಜನರೊಂದಿಗೆ ಪೊಲೀಸು, ಪುಢಾರಿಗಳು ಕೈಜೋಡಿಸಿದ್ದರಿಂದ ನೀಲು ಜೀವ ಕಳೆದುಕೊಳ್ಳುವಂತಾಯಿತು.

ನೀಲು ವಿವಾಹವಾದ ಸುದ್ದಿ ಗೊತ್ತಾದೊಡನೆ ಆಕೆಯ ಅಪ್ಪ ದುಂಡಪ್ಪ, ಚಿಕ್ಕಪ್ಪ ರಾಮಗೊಂಡ ಉರಿ ಉರಿಯಾಗಿದ್ದಾರೆ. ಹತ್ತಿರದ ಸಂಬಂಧಿ ಇಂಗಳೆ ಎಂಬ ಶಿಕ್ಷಕನಿಗೆ ಈ ವಿಷಯ ತಲುಪಿಸಿದ್ದಾರೆ. ಈ ಇಂಗಳೆ ಸಚಿವ ಮುರುಗೇಶ ನಿರಾಣಿಯ ಅಳಿಯ. ಇವರೆಲ್ಲ ಸೇರಿ ಪಂಚಮಸಾಲಿ ಸಿಪಿಐ ಸಂಕದನ ಬಳಿ ಬಂದು, ನೀಲಾಳನ್ನು ಕರೆತರುವ ಪ್ಲಾನು ಹಾಕಿದ್ದಾರೆ. ಸಂಕದನ ಆದೇಶದಂತೆ ಪೊಲೀಸ್ ಪೇದೆಗಳಾದ ಬೊರ್ಜಿ ಮತ್ತು ಚವ್ಹಾಣ್‌ಗಳು ಈಶ್ವರನ ಮುಂಬೈ ವಿಳಾಸ ಪತ್ತೆಹಚ್ಚಿದ್ದಾರೆ. ಮುಂಬೈಗೆ ಹೋದ ಈ ತಂಡ ನೀಲುಳನ್ನು ಪುಸಲಾಯಿಸಿ ಮತ್ತೆ ವಾಪಸ್ ಕಳಿಸುವುದಾಗಿ ನಂಬಿಸಿ ಕರೆತಂದಿದ್ದಾರೆ. ಆದರೆ ತನಗೇನಾದರೂ ಕಿರುಕುಳ ನೀಡಿದರೆ ನಿಮ್ಮೆಲ್ಲರ ಮೇಲೆಕೇಸ್ ಹಾಕುವೆ ಎಂದು ಎಚ್ಚರಿಸಿಯೇ ನೀಲು ಅವರ ಜೊತೆ ಊರಿಗೆ ಮರಳಿದ್ದಾಳೆ. ಎರಡು ಮೂರು ದಿನ ಸುಮ್ಮನಿದ್ದ ಮನೆಯವರು ಮತ್ತು ಸಂಕದನ ತಂಡ ನಂತರ ಗಂಡನನ್ನು ತ್ಯಜಿಸುವಂತೆ ನೀಲುಗೆ ಗಂಟುಬಿದ್ದರು. ನೀಲು ಜಗ್ಗದಿದ್ದಾಗ, "ಮುಂದೆ ನಿನ್ನ ಗಂಡ ಮುಂಬೈಯಲ್ಲಿ ನಿನ್ನ ಮಾರಿಕೊಂಡರೆ, ಕ್ರಮಕೈಗೊಳ್ಳಲು ಅನುಕೂಲ ಮಾಡಲು ಒಂದು ಪತ್ರ ಬರೆದುಕೊಡು" ಎಂದು ತಲೆ ತಿಕ್ಕಿದ್ದಾರೆ. ಅಲ್ಲಿಂದ ಪಾರಾದರೆ ಸಾಕು ಅಂದುಕೊಂಡ ನೀಲು ಗಂಡನ ಮನೆಯ ಪರವಾಗಿಯೇ ಒಂದು ಪತ್ರ ಬರೆದುಕೊಟ್ಟಿದ್ದಾಳೆ.



ಮುಂದೆ ನಡೆಯುವ ಘಟನೆಯೇ ಅನುಮಾನಾಸ್ಪದವಾಗಿದೆ. ಮುಂಬೈಗೆ ಹೋಗಲೆಂದು ಬೆಳಗಾವಿ ಕಡೆ ನೀಲು ಹೊರಡುತ್ತಾಳೆ. ಅಥಣಿ ತಾಲ್ಲೂಕಿನ ಐಗಳಿ ಠಾಣಾ ವ್ಯಾಪ್ತಿಯ ತೋಟವೊಂದರಲ್ಲಿ ಆಕೆಯ ಹೆಣ ದೊರೆಯುತ್ತದೆ. ಸುಟ್ಟು ಕರಕಲಾದ ನೀಲು ದೇಹವನ್ನು ತಪಾಸಿಸುವ ಐಗಳಿ ಠಾಣೆಯವರು ಯು.ಡಿ. ಕೇಸ್ ಎಂದು ದಾಖಲಿಸುತ್ತಾರೆ.


ಬೆಳಗಾವಿಗೆ ನೀಲುಳನ್ನು ಕಳಿಸಲು ಯಾರೂ ಹೋಗಲಿಲ್ಲವೇಕೆ? ನೀಲುಗೆ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ತುಬಚಿ ಬಿಡುವ ಮುನ್ನ ನೀಡಲಾಗಿತ್ತೆ? ಒಟ್ಟಿನಲ್ಲಿ ನಿಗೂಢವಾಗಿ, ಅಪರಿಚಿತ ಜಾಗದಲ್ಲಿ ನೀಲು ಕೊಲೆಯಾಗಿದ್ದಾಳೆ.

ಕೃಷ್ಣಾ ತೀರ ಪ್ರದೇಶದಲ್ಲಿ ಹೆಪ್ಪುಗಟ್ಟಿರುವ ಜಾತಿಕ್ರೌರ್ಯ ಆಗಾಗ್ಗೆ ದಲಿತರ ಮೇಲೆ ಪ್ರಹಾರ ಮಾಡುತ್ತಲೇ ಇರುತ್ತದೆ. ಸಂಕದನಂತಹ ಸಿಪಿಐ. ಸವದಿ, ಕುಲಕರ್ಣಿಗಳಂತಹ ರಾಜಕಾರಣಿಗಳು ಸದಾ ಮೇಲ್ಜಾತಿಯವರ ಪರ ನಿಲ್ಲುತ್ತಲೇ ಬಂದಿದ್ದಾರೆ.

ಈಗ ನೀಲುವಿನ ಸಾವಿಗೆ ಕಾರಣರಾದವರನ್ನು ಪತ್ತೆಹಚ್ಚಿ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದು ಶಾಸಕ ಕುಲಕರ್ಣಿ, ಸಿಪಿಐ ಸಂಕದಗಳ ಜವಾಬ್ದಾರಿಯಾಗಿದೆ.

● ಮೇಘರಾಜ್

ದಲಿತ ವಿರೋಧಿ ಸಂಕದ-ಸವದಿ



ಈ ಹಿಂದೆ ಜಮಖಂಡಿಗೆ ಸಿದ್ದು ಸವದಿ ಶಾಸಕನಾಗಿದ್ದಾಗ ಸಿದ್ದು ಸವದಿ ಸಹೋದರ ಯೋಗಪ್ಪ ಸವದಿಯ ಆಶೀರ್ವಾದದಿಂದ ಜಮಖಂಡಿಗೆ ವಕ್ಕರಿಸಿದ ಸಿಪಿಐ ಸಂಕ ಮಧ್ಯದಲ್ಲೊಮ್ಮೆ ಟ್ರಾನ್ಸ್‌ಫರ್ ಆಗಿದ್ದ ಆದರೆ ಯೋಗಪ್ಪ ಸವದಿ ಬಿಡಬೇಕಲ್ಲ? ಮತ್ತೆ ಸಂಕದನನ್ನು ಜಮಖಂಡಿಗೆ ತಂದ. ಲಾಡ್ಜು ಬಾರುಗಳಿಂದ ಇವರಿಬ್ಬರೂ ಸರಿಯಾದ ಕಾಣಿಕೆ ಪಡೆಯುತ್ತಾರೆಂದು, ದಲಿತ ಸಂಘಟನೆಗಳ ಹೋರಾಟಗಳನ್ನು ಬಗ್ಗುಬಡಿಯುತ್ತಾರೆಂದು ಆರೋಪಗಳನ್ನು ಎದುರಿಸುತ್ತಿದ್ದಾರೆ. ಶಾಸಕ ಶ್ರೀಕಾಂತ ಕುಲಕರ್ಣಿ ಇವರಿಬ್ಬರೊಡನೆ ಹೊಂದಾಣಿಕೆ ಮಾಡಿಕೊಂಡು ಕಾಲ ನೂಕುತ್ತಿದ್ದಾನೆ.




ಶಿವಮೊಗ್ಗ: ಡಿವಿಎಸ್ ಸಂಸ್ಥೆ ಮೇಲೆ ಕೈ ಇಟ್ಟ ಭಸ್ಮಾಸುರರು

ಮೊನ್ನೆ ಫೆ.11 ರ ರಾತ್ರಿ ಒಂಭತ್ತೂವರೆ ಸಮಾರಿಗೆ ಶಿವಮೊಗ್ಗದ ಪ್ರತಿಷ್ಠಿತ ಡಿ.ವಿ.ಎಸ್. (ದೇಶೀಯ ವಿದ್ಯಾಶಾಲಾ ಸಂಸ್ಥೆ) ಶಿಕ್ಷಣ ಸಂಸ್ಥೆಯ ನಿವೃತ್ತ ಸಂಸ್ಕೃತ ಉಪನ್ಯಾಸಕರಾದ ಎ.ಎಸ್ ಕೃಷ್ಣಮೂರ್ತಿ(ಕಿಟ್ಟಿ)ಯವರ ಮೇಲೆ ಏಕಾಏಕಿ ಮಾರಣಾಂತಿಕ ಹಲ್ಲೆ ನಡೆಯಿತು. ಕಾರಣ ಸ್ಪಷ್ಟ: ಕೃಷ್ಣಮೂರ್ತಿಯವರು ಹಲವಾರು ವರ್ಷಗಳಿಂದ ಶಿಕ್ಷಣ ಸಂಸ್ಥೆಯಲ್ಲಿ ನಡೆಯುತ್ತಿರುವ ಅವ್ಯವಹಾರ, ಬದಾದುಂದಿಗಳ ವಿರುದ್ಧ ದೃಢವಾಗಿ ಕಾನೂನು ಹೋರಾಟ ನಡೆಸಿದ್ದರು ಮಾತ್ರವಲ್ಲ ಒಂದಷ್ಟು ಯಶಸ್ಸನ್ನೂ ಪಡೆದಿದ್ದರು. ಈಗ ಮತ್ತೆ ಇದೀ ಸಂಸ್ಥೆಯನ್ನು ಹಳ್ಳಕ್ಕೆ ಕೆಡವಿಕೊಳ್ಳಲು ಶಿವಮೊಗ್ಗದ ರಾಜಕೀಯ ಧುರೀಣರು, ಬಡ್ಡಿಕೋರರು ತೆರೆಮರೆಯ ಸರ್ಕಸ್ಸುಗಳನ್ನು ನಡೆಸಲು ಹೊರಟಿರುವಾಗ ಇದನ್ನೂ ಎದುರಿಸುವ ಧೈರ್ಯವನ್ನು ಕಿಟ್ಟಿ ತೋರಿದ್ದರು. ಇದೇ ಪಾತಕರಿಗೆ ದೊಡ್ಡ ತಪ್ಪಾಗಿ ಕಂಡಿದ್ದು ಅವರ ಮೇಲೆ ಹಲ್ಲೆ ಮಾಡಿದ್ದಾರೆ. ಅದೃಷ್ಟವಶಾತ್ ಕೃಷ್ಣಮೂರ್ತಿಯವರು ಈ ಹತ್ಯಾಯತ್ನದಲ್ಲಿ ಬದುಕುಳಿದಿದ್ದಾರೆ.


ಆದರೆ ಸರ್ಕಲ್ ಇನ್‌ಸ್ಪೆಕ್ಟರ್ ವಸಂತ್ ಕುಮಾರ್‌ರವರಿಗಾಗಲೀ, ಎಸ್‌ಪಿ ಮುರುಗನ್ ಕೇಬರಿಗಾಗಲೀ ಹಲ್ಲೆ ನಡೆಸಿದವರು 'ಮುಸುಕುಧಾರಿ'ಗಳಾಗಿದ್ದರಿಂದ ಅವರು ಯಾರೆಂದು ಪತ್ತೆ ಹಚ್ಚಲು ಸಾಧ್ಯವೇ ಆಗುತ್ತಿಲ್ಲ.

ಈ ಎಲ್ಲಾ ಘಟನೆಗಳು ಡಿ.ವಿ.ಎಸ್ ಎಂಬ ಪ್ರತಿಷ್ಠಿತ ಸಂಸ್ಥೆ ಸದ್ಯದಲ್ಲಿಯೇ ಸಂಪೂರ್ಣವಾಗಿ ಭ್ರಷ್ಟರ, ಖದೀಮರ ಹಾಗೂ ರೋಗಗಳ ಕೈವಶವಾಗಲಿರುವುದಕ್ಕೆ ಮುನ್ಸೂಚನೆಯಾಗಿದೆ.


ಸ್ವಾತಂತ್ರ್ಯ ಪೂರ್ವದಲ್ಲಿಯೇ ನಾಲ್ಕಾರು ಮಂದಿ ಶಿಕ್ಷಣ ಪ್ರೇಮಿಗಳು ಕಟ್ಟಿ ಬೆಳೆಸಿದ್ದು ಡಿ.ವಿ.ಎಸ್ ಸಂಸ್ಥೆ. ಕೆಲವೇ ವರ್ಷಗಳ ಹಿಂದೆ ಡಿವಿಎಸ್ ಸಂಸ್ಥೆಯ ಕಾಲೇಜು-ಶಾಲೆಗೆ ಸೇರುವುದೆಂದರೇ ಹೆಮ್ಮೆಯ ವಿಷಯವಾಗಿತ್ತು, ಆದರೆ ಇಂದು ಇದು ತನ್ನ ಗುಣಮಟ್ಟವನ್ನು ಕಳೆದುಕೊಂಡು ಕುತಂತ್ರ ರಾಜಕೀಯದ ಅಡ್ಡೆಯಾಗಿರುವುದು ನಿಜಕ್ಕೂ ದುರಂತ. ಇರುವೆ ಕಟ್ಟಿಟ್ಟ ಹುತ್ತಕ್ಕೆ ಹಾವು ಬಂದು ಸೇರಿಕೊಂಡಂತೆ ಬಂದು ವಕ್ಕರಿಸಿಕೊಂಡ ವ್ಯಾಪಾರೀ ಬುದ್ಧಿಯವರ, ಅಧ್ಯಾಪಕರ ಸೋಗಿನಲ್ಲಿದ್ದುಕೊಂಡು ಉಂಡ ಮನೆಗೇ ಎರಡು ಬಗೆಯುವ ದಗಲ್ಬಾಜಿಗಳ



ಶ್ರೀನಾಥ್ ನಗರಗದ್ದೆ



ಎಂ.ಎಲ್.ವೈಶಾಲಿ



ಈಶ್ವರಪ್ಪ

ಹಗಲು ದರೋಡೆಗೆ ಇಡೀ ಸಂಸ್ಥೆ ನಲುಗಿಹೋಗಿದೆ. ಇಂತಹ ಸ್ಥಿತಿಯಲ್ಲಿ ಬರುವ ಮಾರ್ಚ್ 7ರಂದು ಆಡಳಿತ ಮಂಡಳಿಯ ಚುನಾವಣೆ ನಡೆಯುವುದೆಂದು ಡಿವಿಎಸ್ ಆಡಳಿತಾಧಿಕಾರಿ ಕಂ ಉಪವಿಭಾಗಾಧಿಕಾರಿ ಎಂ.ಎಲ್.ವೈಶಾಲಿ ಘೋಷಿಸಿರುವುದು ಹಲವಾರು ಆತಂಕಗಳಿಗೆ ಕಾರಣವಾಗಿದೆ. ತೆರೆಮರೆಯ ಹಿತಾಸಕ್ತಿಗಳು ವಿಜೃಂಭಿಸತೊಡಗಿವೆ.


ಫೋರ್‌ಟ್ವೆಂಟಿ '208' ಕುತಂತ್ರ

ಈ ಸಂಸ್ಥೆ 1975ರ ವರೆಗೂ ಹಾಗೂಹೀಗೂ ಶಿಸ್ತುಬದ್ಧವಾಗೇ ನಡೆದಿತ್ತು, ಆದರೆ 1975ರಿಂದೀಚೆಗೆ ವಾರ್ಷಿಕ ಸಭೆಗಳೂ ಸರಿಯಾಗಿ ನಡೆಯದೆ, ಲೆಕ್ಕ ಪತ್ರಗಳೂ ಕ್ರಮಬದ್ಧವಾಗಿಲ್ಲದಂತಾಗಿ ಆಡಳಿತ ಮಂಡಳಿಯ ಕೆಲವೇ ಮಂದಿ ನಡೆಸಿದ್ದೇ ಆಟವಾಗಿ ಹೋಯಿತು. ಮೂವತ್ತು ಆಜೀವ ಸದಸ್ಯರನ್ನೂ, ನೂರರಷ್ಟು ಉಪನ್ಯಾಸಕರನ್ನೂ ಹೊಂದಿದ್ದ ಸಂಸ್ಥೆ ಹಲವಾರು ವಿಷಯಗಳಲ್ಲಿ ಗೊಂದಲದ ಗೂಡಾಯಿತು. ಆಡಳಿತ ಮಂಡಳಿಯ ಚುನಾವಣೆಯಲ್ಲಿ ಶಿಕ್ಷಕರನ್ನು ಹೊರಗಿಡಲು ಸಂಚು ನಡೆಸಿದ್ದ ಆಡಳಿತ ಮಂಡಳಿಯ ವಿರುದ್ಧ ಅಧ್ಯಾಪಕರ ಒಂದು ಗುಂಪು ನ್ಯಾಯಾಲಯದ ಮೊರೆ ಹೋಗಿ ಅಧ್ಯಾಪಕರ ಪರವಾಗಿ ತೀರ್ಪನ್ನೂ ತಂದಿತ್ತು, 2005 ರ ಸೆ.30ರಂದು ಚುನಾವಣೆಯನ್ನು ನಡೆಸಲು ದಿನಾಂಕ ನಿಗದಿ ಗೊಳಿಸಲಾಗಿತ್ತಾದರೂ ಚುನಾವಣೆ ನಡೆಸಿದರೆ ತಮ್ಮ ಬೇಳೆಕಾಳು ಬೇಯುವುದಿಲ್ಲವೆಂದರಿತ ಆಡಳಿತ ಮಂಡಳಿ ಚುನಾವಣೆ ನಡೆಸದೇ ತನ್ನ ಬಲ ಹೆಚ್ಚಿಸಿಕೊಳ್ಳಲು ಕುಟಿಲ ನೀತಿಗಳನ್ನು ಅನುಸರಿಸ ತೊಡಗಿತು. ಈ ಕುಟಿಲ ತಂತ್ರೋಪಾಯದ ಭಾಗವಾಗಿಯೇ 2006ರ ಜನವರಿ 2 ರಂದು ತನ್ನ ಕಾರ್ಯಕಾರಿ ಸಮಿತಿ ಸಭೆಯಲ್ಲಿ 208 ಜನರಿಗೆ ಆಜೀವ ಸದಸ್ಯತ್ವ ನೀಡಲು ನಿರ್ಣಯ ಮಾಡಿತು. ಕಾರ್ಯಕಾರಿ ಸಮಿತಿಯ ಪ್ರಮುಖರಾಗಿದ್ದ ಅಶ್ವತ್ಥನಾರಾಯಣ ಶೆಟ್ಟಿಯ ಕೃಪೆಯೊಂದಿಗೆ ಈ 208 ಸದಸ್ಯರಲ್ಲಿ ಶೆಟ್ಟಿ ಸಮುದಾಯದವರೇ 110 ಜನ ತುಂಬಿಕೊಂಡರು. ಕಾಂಗ್ರೆಸ್‌ನ ಮಂಜುನಾಥ ಭಂಡಾರಿ, ಬೋಂಡಾ ರಮೇಶ, ಪ್ರಸನ್ನ ಕುಮಾರ್, ಅಂದು ದಳದಲ್ಲಿದ್ದ ವಿ.ರಾಜು, ಇನ್ನೊಂದೈದಾರು ಜನರನ್ನು ಬಿಟ್ಟರೆ 85 ಮಂದಿ ಬಿ.ಜೆ.ಪಿ.ಯವರೇ ಆಗಿದ್ದರು. ಅಲ್ಲಿಗೆ ವಿದ್ಯಾದಾನದ ಘನ ಉದ್ದೇಶವಿಟ್ಟುಕೊಂಡು ಆರಂಭಗೊಂಡಿದ್ದ ಡಿ.ವಿ.ಎಸ್‌ನಲ್ಲಿ ಗುತ್ತಿಗೆದಾರರು, ಲೇವಾದೇವಿಗಾರರು, ಬಡ್ಡಿ ವ್ಯಾಪಾರಿಗಳು, ಮನೆಹಾಳರು ಸೇರಿಕೊಂಡರು. ಸಂಸ್ಥೆ ಹೀಗೆ ಹಳ್ಳಹಿಡಿಯುತ್ತಿರುವುದನ್ನು ಕಂಡು ಬಹುವಾಗಿ ನೊಂದುಕೊಂಡ ಸಜ್ಜನ ಕೆ.ಜಿ.ಸುಬ್ರಹ್ಮಣ್ಯ ಈ ಹೊಸ ನೇಮಕಾತಿಗೆ ಅಂದೇ ತಮ್ಮ ಆಕ್ಷೇಪಣೆ ವ್ಯಕ್ತಪಡಿಸಿ ನ್ಯಾಯಾಲಯದ ಮೊರೆ ಹೋದರು. ಪ್ರತಿಯಾಗಿ ನೇಮಕಾತಿಯ ಪರವಾಗಿಯೂ ಕೆಲವರು ಹೋದರು. ಆದರೆ ನ್ಯಾಯಾಲಯವು ಈ ನೇಮಕಾತಿಯನ್ನು ಸಮರ್ಥಿಸಿ ತೀರ್ಪು ನೀಡಿತು. ನಂತರ ಇನ್ನೂ ಕೆಲ ಅಧ್ಯಾಪಕರು ಈ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿಗೂ ಹೋಗಿದ್ದಾರೆ. ಕಾನೂನು ಸಮರ ನಡೆದೇ ಇದೆ. ಆದರೆ ಭ್ರಷ್ಟ ಹಿತಾಸಕ್ತಿಗಳ ದಾರ್ಷ್ಟ್ಯ ಮಾತ್ರ ಹೀಗೆ ಪ್ರಶ್ನಿಸಿದವರನ್ನು ದೈಹಿಕವಾಗಿಯೇ ಮುಗಿಸಿಬಿಡುವ ಹಂತಕ್ಕೆ ಮುಟ್ಟಿದೆ.

ಕಾನೂನು ಸಮರ ನಡೆಯುತ್ತಿರುವಂತೆಯೇ 2005 ರ ಜುಲೈನಲ್ಲಿ ಸರ್ಕಾರವು ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸಿತು. ಈ ಹಿಂದಿನ ಆಡಳಿತಾಧಿಕಾರಿ ಡಾ.ಎ.ಸಿ.ನಾಗರಾಜ್ ಕೆಲವಾದರೂ ದಿಟ್ಟ ಕ್ರಮಗಳನ್ನು ಕೈಗೊಂಡಿದ್ದರೆಂದೇ ಹೇಳಬೇಕು. ಅವರು ಕಳೆದ 30 ವರ್ಷಗಳ ಅವಧಿಯ ಡಿವಿಎಸ್ ಸಮಿತಿ ಹಾಗೂ ಅದರ ಅಂಗಸಂಸ್ಥೆಗಳ ವಿಶೇಷ ಆಡಿಟ್ ನಡೆಸಿ 2006-07 ಕೊನೆಯವರೆಗಿನ ಎಲ್ಲಾ ಲಭ್ಯ ಲೆಕ್ಕಪತ್ರಗಳನ್ನು ತಪಾಸಣೆ ನಡೆಸಿದರು. ಅದರಲ್ಲಿ ಅವರಿಗೆ ಸಿಕ್ಕಿದ್ದು ಬರೀ ಬಿಲಗಳು! ಕೆಲ ಹೆಗ್ಗಣಗಳು ದೋಗೆದುಕೊಂಡು ಜಾಗ ಖಾಲಿ ಮಾಡಿದ್ದರೆ ಇನ್ನೂ ಕೆಲವು ಇನ್ನೂ ದೋಗೆಯುತ್ತಲೇ ಇದ್ದವು. ಇರುವ ಕಾಗದಪತ್ರಗಳಲ್ಲಿ ಒಂದಷ್ಟು ಅವ್ಯವಹಾರಗಳಾದರೆ ಇಲ್ಲದ ಕಾಗದಪತ್ರಗಳಲ್ಲಿ ಇನ್ನೊಂದಿಷ್ಟು ಅವ್ಯವಹಾರಗಳು. ಎ.ಸಿ.ನಾಗರಾಜ್ ಈ ಅವ್ಯವಹಾರಗಳ ಕುರಿತು ಕಂದಾಯ ಇಲಾಖೆ ಕಾರ್ಯದರ್ಶಿಗೆ ವರದಿ ಸಲ್ಲಿಸಿ ಅಪರಾಧಿಗಳ ಮೇಲೆ ಕ್ರಿಮಿನಲ್ ಹಾಗೂ ಸಿವಿಲ್ ದಾವೆ ಹೂಡುವುದಾಗಿ ತಿಳಿಸಿದ್ದರು. ಆಡಿಟ್ ಮುಗಿದನಂತರ ಜನರಲ್ ಬಾಡಿ ನಡೆಸಿ ಚುನಾವಣೆ ನಡೆಸಿ ಆಡಳಿತ ಮಂಡಳಿಗೆ ಅಧಿಕಾರ ವಹಿಸುವುದಾಗಿಯೂ ಹೇಳಿದ್ದರು.

ಡಿವಿಎಸ್‌ನಲ್ಲಿ ನಡೆದ ಅವ್ಯವಹಾರಗಳು ಬಯಲಾದಂತೆ ಭ್ರಷ್ಟರು ಆಡಳಿತಾಧಿಕಾರಿ ವಿರುದ್ಧವೇ ಸೆಡ್ಡು ಹೊಡೆದು ತಮ್ಮ ಹಿಂದಿದ್ದ ರಾಜಕೀಯ ಬಲವನ್ನೂ ಬಳಸಿಕೊಂಡು ಇವಾವುದೂ ನಡೆಯದಂತೆ ಮಾಡಿಬಿಟ್ಟರು. ನಾಗರಾಜ್ ಎತ್ತಂಗಡಿಯಾದರು. ಈ ಹಿಂದೆ ಡಿವಿಎಸ್‌ನಲ್ಲೇ ಇದ್ದ ವೈಶಾಲಿಯವರು ಉಪವಿಭಾಗಾಧಿಕಾರಿಯಾಗಿ ಬಂದು ಆಡಳಿತಾಧಿಕಾರಿಯಾಗಿ ಅಧಿಕಾರ ಪಡೆದವರೇ ನಾಗರಾಜ್ ನಡೆಸುತ್ತಿದ್ದ ಎಲ್ಲಾ ದಿಟ್ಟ ಕ್ರಮಗಳನ್ನು ಬದಿಗೊತ್ತಿ ಕುಟಿಲ ಹಿತಾಸಕ್ತಿಗಳ ಕೈದಾಳವಾಗಿಬಿಟ್ಟಿದ್ದಾರೆ. ಡಿವಿಎಸ್ ಸಂಸ್ಥೆಯಲ್ಲಿ ಎಲ್ಲವೂ ತಮ್ಮ ಅಣತಿಯಂತೆ ನಡೆಯಬೇಕು ಎಂದು ಬಯಸುವ ಈಶ್ವರಪ್ಪ ಸಂಸ್ಥೆಯ ಕಾರ್ಯದರ್ಶಿಯೂ ಆಗಿರುವ ಚೆಡ್ಡಿ ಶ್ರೀನಾಥ್ ನಗರಗದ್ದೆಯವರ ಮೇಲಾಟಗಳಲ್ಲಿ ಸಾವಿರಾರು ಪ್ರತಿಭಾವಂತರನ್ನು ತಯಾರಿಸಿರುವ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯ ಪ್ರತಿಷ್ಠೆ ಇಂದು ಮಣ್ಣುಪಾಲಾಗಲು ತಾವೂ ನೇರವಾಗಿಯೇ ಕಾರಣರಾಗುತ್ತಿದ್ದಾರೆ.

● ಹರ್ಷಕುಮಾರ್



ರಂಗನಾಥಯ್ಯ

ಬಯಲಾದ ಹಗರಣಗಳು

ಡಿವಿಎಸ್ ಸಂಸ್ಥೆಯ ವಿವಿಧ ಕಾಲೇಜುಗಳಲ್ಲಿ ಪ್ರಮುಖ ಹುದ್ದೆಗಳಲ್ಲಿರುವವರು ನಡೆಸಿರುವ ಹಗರಣಗಳಿಗೆ ಲೆಕ್ಕವೇ ಇಲ್ಲ, ಆದರೂ ಈ ಹಿಂದಿನ ಆಡಳಿತಾಧಿಕಾರಿ ನಡೆಸಿದ್ದ ಆಡಿಟ್‌ನಲ್ಲಿ ಕೆಲವರು ಮಾತ್ರ ಸಿಕ್ಕಿಬಿದ್ದಿದ್ದರು. ಅವರಲ್ಲಿ ಕಾಂಪೋಸಿಟ್ ಕಾಲೇಜಿನ ಪ್ರಾಂಶುಪಾಲ ರಂಗನಾಥಯ್ಯ, ಪಾಲಿಟೆಕ್ನಿಕ್ ಕಾಲೇಜಿನ ಸುಧಾಮಣಿ ಮತ್ತು ಸತ್ಯನಾರಾಯಣ ಮೂರ್ತಿಯವರಿಗೆ ಎ.ಸಿ. ನಾಗರಾಜ್ ನೋಟೀಸು ನೀಡಿ ನಂತರ ಅಮಾನತ್ತುಗೊಳಿಸಿದ್ದರು ಕೂಡ.

ಇವರುಗಳ ಮೇಲಿನ ಕೆಲ ಆರೋಪಗಳನ್ನು ನೋಡಿ-

ರಂಗನಾಥಯ್ಯ - 1994ನೇ ಸಾಲಿನಿಂದ ಪ್ರಾಂಶುಪಾಲರಾಗಿದ್ದ ಈ ಮಹನೀಯರು ಕಾಲೇಜು ಹೆಸರಿನ ಉಳಿತಾಯ ಸಂಖ್ಯೆ 42722, 50418, 50317 ಖಾತೆಗಳು ಪ್ರಾಂಶುಪಲರ ಹೆಸರಿನಲ್ಲಿದ್ದು, ಸರ್ಕಾರಿ ಶುಲ್ಕ ಜಮೆಯಾಗುವ ಪ್ರಿನ್ಸಿಪಾಲರು ಮತ್ತು ನಿರ್ದೇಶಕರ (ಪಿಯುಬಿ) ಹೆಸರಿನಲ್ಲಿ 51852 ಎಂಬ ಜಂಟಿ ಖಾತೆ ಇದೆ. ಕಾಲೇಜಿನ ವ್ಯವಹಾರಗಳು ಖಾತೆ ಸಂಖ್ಯೆ 42722 ಮತ್ತು 51852ರಲ್ಲಿ ಮಾತ್ರ ನಮೂದಾಗಿದೆ. ಆದರೆ ಖಾತೆ ಸಂಖ್ಯೆ 503117 ಮತ್ತು 503118 ರಲ್ಲಿ 1.74 ಕೋಟಿ ರೂ. (2000 ದಿಂದ 2006 ರವರೆಗೆ) ವ್ಯವಹಾರ ಜಮಾ ಖರ್ಚಿನ ತಖ್ತೆಯಲ್ಲಿ ಸೇರಿಲ್ಲ ಮತ್ತು ಅಧಿಕೃತ ಲೆಕ್ಕಪರಿಶೋಧನೆಗೂ ಒಳಪಟ್ಟಿಲ್ಲ, ಈ ಅವಧಿಯಲ್ಲಿ ಒಟ್ಟು 2.87 ಕೋಟಿ ರೂ. ವ್ಯವಹಾರ ನಡೆದಿರುವ ಬಗ್ಗೆ ಮಹನೀಯರು ಆರೋಪ ಎದುರಿಸುತ್ತಿದ್ದಾರೆ.

ಎಂ.ಪಿ.ಸುಧಾಮಣಿ - ಇಂಡಿಯನ್ ಬ್ಯಾಂಕ್ ಖಾತೆ ಸಂಖ್ಯೆ 15397 ರಲ್ಲಾಗಲೀ 2001 ರಿಂದ 2007 ರ ವರೆಗೆ ಜಮಾ ಆದ 36.43 ಲಕ್ಷ ರೂ. ಅವ್ಯವಹಾರಕ್ಕೆ ಲೆಕ್ಕಪತ್ರಗಳಿಲ್ಲ, ಕಾಲೇಜು ಖಾತೆಯಿಂದ 1.5 ಲಕ್ಷ ರೂ.ಗಳನ್ನು ಸೆಲ್ಫ್ ಚೆಕ್ ಮೂಲಕ ಡ್ರಾ ಮಾಡಿಸಿಕೊಂಡು ಸೂಕ್ತ ಓಚರ್ ನೀಡಿಲ್ಲ, ಈ ಐನಾತಿ ಹೆಂಗಸು ಪ್ರಾಂಶುಪಾಲಳಾಗಿದ್ದ ಅವಧಿಯಲ್ಲಿ ವಿದ್ಯಾರ್ಥಿಗಳಿಂದ ಹತ್ತಾರು ಸಾವಿರ ರೂ. ಡೊನೇಶನ್ ಬಾಚುತ್ತಿದ್ದರೂ ಕಾಲೇಜಿನಲ್ಲಿ ಕನಿಷ್ಠ ಮೂಲಭೂತ ವ್ಯವಸ್ಥೆಗಳೂ ಇರಲಿಲ್ಲ.


ಹಾಗೆಯೇ ಪ್ರೌಢಶಾಲಾ ವಿಭಾಗದಲ್ಲಿ ಬಿ.ಸತ್ಯನಾರಾಯಣಮೂರ್ತಿ 14.55 ಲಕ್ಷ ರೂ.ಗಳಿಗೆ ಸೂಕ್ತ ಓಚರ್/ಬಿಲ್ ಹಾಜರುಪಡಿಸಿಲ್ಲದಿರುವ ಆರೋಪ ಎದುರಿಸುತ್ತಿದ್ದಾರೆ.

ಡಿವಿಎಸ್ ಸಂಸ್ಥೆಯ 15 ಎಕರೆ ನೀರಾವರಿ ಭೂಮಿ ಸಂತೆಕಡೂರು ವ್ಯಾಪ್ತಿಯಲ್ಲಿದೆ. ಅಲ್ಲಿ ಕಳೆದ 20 ವರ್ಷಗಳಿಂದಲೂ ವರ್ಷಂಪ್ರತಿ ಎರಡೆರಡು ಬೆಳೆ ಬೆಳೆದುಕೊಂಡು ಬರಲಾಗಿದೆ. ಆದರೆ ಆಡಳಿತ ಮಂಡಳಿಯ ಪ್ರಕಾರ ಅಲ್ಲಿ ಇಷ್ಟು ವರ್ಷ ಯಾವುದೇ ಬೆಳೆ ಬೆಳೆಯಲಾಗಿಲ್ಲ, ಹಾಗೆಯೇ ಸುಮಾರು 45 ಎಕರೆ ಜಮೀನು ಶ್ರೀರಾಮಪುರದಲ್ಲಿದ್ದು ಅದನ್ನು ಮಾರಿಕೊಂಡಿರುವ ಕುರಿತೂ ವಿವಾದಗಳಿವೆ. ಹೀಗೆ ಹೆಜ್ಜೆಹೆಜ್ಜೆಗೂ ಅವ್ಯವಹಾರಗಳನ್ನೇ ಮಾಡಿಕೊಂಡು ಬರುತ್ತಿರುವ ಆಡಳಿತಮಂಡಳಿಯನ್ನು ಕಟಕಟೆಯಲ್ಲಿ ನಿಲ್ಲಿಸದೇ ಈಗ ಅದೇ ಆಡಳಿತ ಮಂಡಳಿಯನ್ನು ರಕ್ಷಿಸಿಕೊಳ್ಳುತ್ತಾ ಇದೀ ಡಿವಿಎಸ್ ಸಂಸ್ಥೆಯನ್ನು ಈಶ್ವರಪ್ಪ ಎಂಬ ಭಸ್ಮಾಸುರ ಭಕ್ಷಿಸಹೊರಟಿದ್ದಾನೆ. ●

ಉಂಡ ಮನೆಗೆ ಎರಡು ಬಗೆಯುತ್ತಿರುವವರು

[illegible] ಸಂಸ್ಥೆಯನ್ನು ಸಂಪೂರ್ಣವಾಗಿ ತಮ್ಮ [illegible] ಈ ಹಿಂದಿನ ಆಡಳಿತ ಮಂಡಳಿ [illegible] [illegible] ಅಧ್ಯಾಪಕರಾಗಿ [illegible] ನಡೆಸಿದ್ದ ಅವ್ಯವಹಾರಗಳು [illegible] ಮೊದಲು ಹೋಗಿ ಹಿಡಿದದ್ದು ಧುರೀಣ ಈಶ್ವರಪ್ಪನ ಕೃಪಾಳುಗಳು [illegible] ತವರಿನ ವಿದ್ಯಾಸಂಸ್ಥೆಯನ್ನು ಆರಂಭಿಸಿರುವ ಈಶ್ವರಪ್ಪನವರು ತಮ್ಮ [illegible] ನೀಡಿದ್ದ [illegible] ಮತ್ತೆ [illegible] ಇದಕ್ಕೆ ಪ್ರತಿಯಾಗಿ ಡಿವಿಎಸ್ ಪ್ರೌಢಶಾಲೆಯ [illegible] ವಿದ್ಯಾರ್ಥಿಗಳನ್ನು ಅವರು [illegible] ಬಳಿಕ 'ಪೇಸ್' ಪದವಿಪೂರ್ವ ಕಾಲೇಜಿಗೆ ತಂದು [illegible] ಈ ಖದೀಮರು ಒಪ್ಪಿಕೊಂಡಿದ್ದಾರೆ.


ಇದಕ್ಕೆ ಒಂದು ಉದಾಹರಣೆ ಎಂದರೆ ಕಳೆದ ನವೆಂಬರ್‌ನಲ್ಲಿ ಪೂರಾ ಡಿವಿಎಸ್ ಶಾಲೆಯ 10ನೇ ತರಗತಿ [illegible] ಮಾಧ್ಯಮ ವಿದ್ಯಾರ್ಥಿಗಳಿಗಾಗಿಯೇ ಹೊಸ ಪರೀಕ್ಷಾ ಪದ್ಧತಿ ಕುರಿತಂತೆ ತರಬೇತಿಯೊಂದು ನಡೆಯಿತು. [illegible] ಕಾಲೇಜಿನ ಬ್ಯಾನರ್‌ನಲ್ಲಿ! ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಈಶ್ವರಪ್ಪ ಅಂದು [illegible] ಡಿವಿಎಸ್ ಶಾಲೆಯಲ್ಲಿ ಡಿಸ್ಟಿಂಕ್ಷನ್ ಪಡೆದ 80 ವಿದ್ಯಾರ್ಥಿಗಳು ಪೇಸ್ [illegible] ಸೇರಿಕೊಂಡದ್ದು ಆಕಸ್ಮಿಕವೇನೂ ಅಲ್ಲ. ಹೀಗೆ ಉಂಡ ಮನೆಗೇ ಕನ್ನಹಾಕುವ ಖದೀಮರಿಂದಲೇ [illegible] ಡಿವಿಎಸ್ ಕಾಲೇಜು ಸೊರಗಿ ಹೋಗುತ್ತಿದೆ. ಮತ್ತೊಂದು ಸಂಸ್ಥೆ ಹೊಗದಸ್ತಾಗಿ ಬೆಳೆಯುತ್ತಿದೆ.



ಪ್ರೊಫೆಸರ್ ನಂಜುಂಡಸ್ವಾಮಿ: 'ರೈತ-ರಾಜ್ಯ'ದ ದಂಡನಾಯಕ!

ಶಿವಸುಂದರ್

ಇದೇ ಫೆಬ್ರವರಿ 14ಕ್ಕೆ ಈ ನಾಡಿನ ಅಪೂರ್ವ ಚಿಂತಕ, ಹೋರಾಟಗಾರ ಮತ್ತು ಮಣ್ಣಿನಮಕ್ಕಳ ಬದುಕನ್ನು ರಕ್ಷಿಸಲು ದೇಶದ ಒಳಗಿನ ಹಾಗೂ ಹೊರಗಿನ ಶತ್ರುಗಳ ವಿರುದ್ಧ ಸತತ ಹೋರಾಡಿದ ರೈತರಾಜ್ಯದ ಮಹಾನ್ ದಂಡನಾಯಕ ಪ್ರೊಫೆಸರ್ ನಂಜುಂಡಸ್ವಾಮಿಯವರು ಹುಟ್ಟಿ 75 ವರ್ಷಗಳಾಗುತ್ತವೆ. ಇದೇ ಮಾರ್ಚ್ 8 ಕ್ಕೆ ಈ ನಾಡಿನ ಮತ್ತೊಬ್ಬ ಮಹಾನ್ ಚಿಂತಕ ಹಾಗೂ ಒಂದು ಪೀಳಿಗೆಯ ಚಿಂತನೆಯ ಧಾಟಿಯನ್ನೇ ಆರೋಗ್ಯಪೂರ್ವಕವಾಗಿ ಬದಲಾಯಿಸಿದ ಪಿ. ಲಂಕೇಶ್‌ರವರು ಹುಟ್ಟಿ 75 ವರ್ಷಗಳಾಗುತ್ತವೆ. ಇವರೆಲ್ಲರ ಬದುಕು, ಚಿಂತನೆ ಮತ್ತು ಕ್ರಿಯೆಗಳಿಂದಾಗಿಯೇ 70-80ರ ದಶಕ ಕರ್ನಾಟಕ ಇತಿಹಾಸದ ಉಜ್ವಲ ಭಾಗವಾಗುಳಿದಿದೆ. ಸಾಹಿತ್ಯದಲ್ಲಾಗಲೀ, ಪತ್ರಿಕೋದ್ಯಮದಲ್ಲಾಗಲೀ, ಹೋರಾಟದ ರಾಜಕಾರಣ ಮತ್ತು ಚಿಂತನೆಯಲ್ಲಾಗಲೀ ಪ್ರೊಫೆಸರ್ ನಂಜುಂಡಸ್ವಾಮಿ ಹಾಗೂ ಲಂಕೇಶರು ನೀಡಿದ ದಾರ್ಶನಿಕ ನೋಟ ಅಥವಾ ಹೋರಾಟಗಳೇಕಿಲ್ಲವೆಂದು ಈ ಪೀಳಿಗೆ ಯೋಚಿಸಲೇ ಬೇಕಿದೆ. ರೈತಸಂಘ ಕಟ್ಟಿದ ಹೋರಾಟ, ದಲಿತ ಸಂಘರ್ಷ ಸಮಿತಿ ನೀಡಿದ ಎಚ್ಚರ, ಲಂಕೇಶ್ ಕಾಲದ ಸಾಹಿತಿಗಳು ನೀಡಿದ ಆರೋಗ್ಯಪೂರ್ಣ ಜೀವನ ದೃಷ್ಟಿಗಳು ಒಂದು ತಲೆಮಾರನ್ನೇ ರೂಪಿಸಿದವು. ಈ ಕಾರಣದಿಂದಲೇ ದೇಶವನ್ನು ಒಳಗಿನಿಂದಲೇ ತಿನ್ನುವ ಹಿಂದುತ್ವವಾದಿ ಶಕ್ತಿಗಳು ಕರ್ನಾಟಕದಲ್ಲಿ ತಲೆ ಎತ್ತಲು ಸಾಧ್ಯವಾಗಿರಲಿಲ್ಲ, ರೈತಸಂಘ ಮತ್ತು ಪ್ರೊಫೆಸರರು ಜೀವಂತವಿರುವವರೆಗೆ ಬಹುರಾಷ್ಟ್ರೀಯ ಕಂಪನಿಗಳು ಕರ್ನಾಟಕವನ್ನು ಸುಲಭದ ತುತ್ತಾಗಿ ಮಾಡಿಕೊಳ್ಳಲು ಸಾಧ್ಯವಾಗಿರಲಿಲ್ಲ.




ಇಂದು ಜಾಗತೀಕರಣ ಮತ್ತು ಹಿಂದುತ್ವವಾದಿ ಶಕ್ತಿಗಳೆರಡಕ್ಕೂ ಕರ್ನಾಟಕ ಭದ್ರವಾದ ತಳಹದಿಯಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಪ್ರೊಫೆಸರ್ ನಂಜುಂಡಸ್ವಾಮಿ ಮತ್ತು ಲಂಕೇಶರು ದೈಹಿಕವಾಗಿ ನಮ್ಮಿಂದ ದೂರವಾಗಿರುವುದು ಮಾತ್ರವಲ್ಲ, ಆ ಎರಡು ಚಳವಳಿಗಳ ಮತ್ತು ಅದರ ಆಧ್ವರ್ಯುಗಳ ಚಿಂತನೆಯನ್ನು ಈ ಕಾಲದವರು ಅರ್ಥಮಾಡಿಕೊಳ್ಳದೇ ಇರುವುದು ಮತ್ತು ಅರಗಿಸಿಕೊಳ್ಳದೇ ಇರುವುದೇ ಕಾರಣವಾಗಿದೆ.

ಪ್ರಖ್ಯಾತ ಕಮ್ಯುನಿಸ್ಟ್ ಚಿಂತಕ ಗ್ರಾಮ್ಷಿ ಜನಪರ ಚಳವಳಿಗಳು ಪರ್ಯಾಯ ನೈತಿಕ ಶಕ್ತಿಯಾಗಿ ರೂಪುಗೊಂಡ "ರಾಷ್ಟ್ರೀಯ ಜನಪ್ರಿಯ ಇಚ್ಛಾಶಕ್ತಿಯ" ಅಭಿವ್ಯಕ್ತಿಗಳಾಗದೆ ಯಶಸ್ವಿಯಾಗಲು ಸಾಧ್ಯವೇ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತಾನೆ. ಪ್ರೊಫೆಸರ್ ಮತ್ತು ಲಂಕೇಶ್‌ರಂಥವರು ಯಾವುದೇ ಅಧಿಕಾರವಿಲ್ಲದಿದ್ದರೂ 'ಜನಮಾನಸದ ನಾಯಕರಾದದ್ದು ಈ ನೈತಿಕ ಶಕ್ತಿಯಿಂದಲೇ! ಈ ಕಾಲದ ಚಳವಳಿಗಳು ಪ್ರೊಫೆಸರರ ಕಾಲದ ನೈತಿಕ ಶಕ್ತಿಯನ್ನಾಗಲೀ ಸೈದ್ಧಾಂತಿಕ ಕಸುವನ್ನಾಗಲೀ ಉಳಿಸಿಕೊಳ್ಳದೇ ಇರುವುದರಿಂದಲೇ ಜನತೆಯ ಶತ್ರುಗಳು ಸುಲಭವಾಗಿ ನಾಡಿನ ಮೇಲೆ ದಾಳಿ ನಡೆಸಲು ಸಾಧ್ಯವಾಗುತ್ತಿದೆ. ಆದ್ದರಿಂದಲೇ ಇಂದು ಆ ಚೇತನಗಳನ್ನು ನೆನೆಸಿಕೊಳ್ಳುವುದು ಈ ನಾಡಿನ ಕಳೆದುಹೋಗಿರುವ ಸಾಕ್ಷಿಪ್ರಜ್ಞೆಯನ್ನು ಕಟ್ಟಿಕೊಳ್ಳುವುದೇ ಆಗಿದೆ.

ಪ್ರೊ. ನಂಜುಂಡಸ್ವಾಮಿಯವರನ್ನು ನೆನೆಸಿಕೊಳ್ಳುವುದೆಂದರೆ, ಭಾರತದಲ್ಲೇ ವಿಶಿಷ್ಟವಾದ ಹಾಗೂ ಪ್ರಬಲವಾಗಿದ್ದ ರೈತ ಚಳವಳಿಯ ಪುಟಗಳನ್ನು ತಿರುವು ಹಾಕಿದಂತೆ. ನಂಜುಂಡಸ್ವಾಮಿಯವರಂತ ಧೀಮಂತ ನಾಯಕರು ನಿಧನರಾದಾಗಲೆಲ್ಲ ವ್ಯಕ್ತವಾಗುವ ಶ್ರದ್ಧಾಂಜಲಿಗಳು ವ್ಯಕ್ತಿಪೂಜೆಯ ಪೈಪೋಟಿಗಳೋ, ಉತ್ತರಾಧಿಕಾರತ್ವಕ್ಕೆ ಹೊಡೆದಾಟಗಳೋ ಆಗಿಬಿಡುತ್ತಿರುವ 75ನೇ ವರ್ಷದ ಈ ಸಂದರ್ಭದಲ್ಲಿ ಪ್ರೊಫೆಸರಿಗೆ ಯೋಗ್ಯವಾದ ಶ್ರದ್ಧಾಂಜಲಿ ಅರ್ಪಿಸುವ ಹೊಣೆ ಕರ್ನಾಟಕದ ಜನತೆಯ ಮೇಲಿದೆ. ಪ್ರೊಫೆಸರರು ಕಟ್ಟಿದ ರೈತ ಚಳವಳಿಯ ಶಕ್ತಿ-ಸಾಮರ್ಥ್ಯಗಳನ್ನು ಅರಿತುಕೊಳ್ಳುವುದು-ಅರಗಿಸಿಕೊಳ್ಳುವುದರ ಮೂಲಕ ಮತ್ತು ಅದೇ ಸಮಯದಲ್ಲಿ ಅದರ ಇತಿ-ಮಿತಿಗಳನ್ನು ಅರಿಯುವ ಹಾಗೂ ಮೀರುವ ಮೂಲಕ ಮಾತ್ರ ಪ್ರೊಫೆಸರರಂತಹ ಹೋರಾಟಗಾರರಿಗೆ ಸೂಕ್ತ ನಮನ ಸಲ್ಲಿಸಿದಂತಾಗುತ್ತದೆ.


ಜಾಗತೀಕರಣದ ಹೆಸರಲ್ಲಿ ವಿಶ್ವ ಸಾಮ್ರಾಜ್ಯಶಾಹಿ ವ್ಯವಸ್ಥೆಯು ಜನತೆಯ ಮೇಲೆ ಹಾಗೂ ಬಡರಾಷ್ಟ್ರಗಳ ಮೇಲೆ ನಡೆಸುತ್ತಿರುವ ಆಕ್ರಮಣದ ವಿರುದ್ಧ ಪ್ರೊಫೆಸರ್ ನಂಜುಂಡಸ್ವಾಮಿಯವರು ಎತ್ತಿದ ದನಿ ಕೇವಲ ಈ ರಾಜ್ಯದ ಅಥವಾ ದೇಶದ ಗಡಿಗಳಿಗೆ ಸೀಮಿತವಾಗಿರಲಿಲ್ಲ, ಆ ಅರ್ಥದಲ್ಲಿ ಅವರು ವಿಶ್ವದ ರೈತ ಚಳವಳಿಗೂ 'ಪ್ರೊಫೆಸರ್' ಆಗಿದ್ದರು.

1970-80ರ ದಶಕದಲ್ಲಿ ಭಾರತದ ಹಲವು ಭಾಗಗಳಲ್ಲಿ ಆಳುವ ಸರ್ಕಾರಗಳ ವಿರುದ್ಧ ಹಲವು ರೈತ ಹೋರಾಟಗಳು ಹುಟ್ಟಿಕೊಂಡವು. ಆದರೆ ಅವುಗಳಲ್ಲಿ ಒಂದು ಸಂಘಟನಾತ್ಮಕ ರೂಪ, ನಿಶ್ಚಿತ ಸಿದ್ಧಾಂತ ಹಾಗೂ ಆಶಯಗಳನ್ನು ಪಡೆದುಕೊಂಡು ಚಳವಳಿಯ ರೂಪ ಪಡೆದುಕೊಂಡಿದ್ದು ಕೆಲವು ಮಾತ್ರ. ಉತ್ತರ ಭಾರತದ ಕಿಸಾನ್ ಯೂನಿಯನ್ (BKU), ತಮಿಳುನಾಡಿನ ನಾರಾಯಣಸ್ವಾಮಿ, ಮಹಾರಾಷ್ಟ್ರದ ಶರದ್ ಜೋಷಿ ನೇತೃತ್ವದ ಚಳವಳಿಗಳೂ 'ಹೋರಾಟ'ದ ತಾತ್ಕಾಲಿಕತೆಯನ್ನು ಮೀರಿ ಶಾಶ್ವತತೆಯನ್ನು ಪಡೆದುಕೊಳ್ಳುತ್ತಿರುವಾಗಲೇ ಕರ್ನಾಟಕದಲ್ಲಿ ಕಬ್ಬು ಬೆಳೆಗಾರರ ಸಮಸ್ಯೆಗಳಿಗಾಗಿ ಹುಟ್ಟಿಕೊಂಡ ರೈತ ಹೋರಾಟ 'ಕರ್ನಾಟಕ ರಾಜ್ಯ ರೈತ ಸಂಘ (KRRS)' ಚಳವಳಿಯ ವಿಸ್ತಾರವನ್ನು ಪಡೆದುಕೊಂಡಿತು. ಈ ಕಾಲಘಟದಲ್ಲಿ ಪ್ರೊಫೆಸರರ ವ್ಯಕ್ತಿಗತ ಕೊಡುಗೆ ಮುಖ್ಯವಾಗಿತ್ತು.



ಅವರು ಕಬ್ಬು ಬೆಳೆಗಾರರ ಸಮಸ್ಯೆಗೆ ವ್ಯವಸ್ಥಾತ್ಮಕ ಕಾರಣಗಳನ್ನು ತೋರಿಸಿಕೊಟ್ಟಿದ್ದು ಮಾತ್ರವಲ್ಲದೆ, ರೈತರ ಒಟ್ಟಾರೆ ಸಮಸ್ಯೆಗಳಿಗೆ ಆಳುವ ವರ್ಗಗಳು ಹಿಡಿದಿರುವ ಅಭಿವೃದ್ಧಿ ಮಾದರಿಯೇ ಕಾರಣವೆಂದು ರೈತರಿಗೆ ಮತ್ತು ಇಡೀ ನಾಡಿಗೆ ತಿಳಿಸಿಕೊಟ್ಟರು. ರೈತ ಚಳವಳಿಗೆ "ಬಂಡವಾಳಶಾಹಿ" ಮಾದರಿ ಹಾಗೂ "ಕಮ್ಯುನಿಸ್ಟ್ ಮಾದರಿ" ಎರಡರಿಂದಲೂ ಹೊರತಾದ ಸಮಾಜವಾದಿ ಮಾದರಿ (?) ಸಮಾಜಸೃಷ್ಟಿಯ ಕನಸುಗಳನ್ನು ಕಟ್ಟಿಕೊಟ್ಟರು. 1980ರಲ್ಲಿ ಮೊದಲ ಭಾಗದಲ್ಲಿ ತಾರಕಕ್ಕೇರಿದ ರೈತ ಚಳವಳಿಯ ಬೇಡಿಕೆಗಳು ಇದನ್ನೇ ಸ್ಪಷ್ಟವಾಗಿ ಮುಂದಿಟ್ಟಿತು. ಕರ್ನಾಟಕದ ಮತ್ತು ಭಾರತದ ರಾಜಕಾರಣದಲ್ಲಿ ಪ್ರೊಫೆಸರರ ನೇತೃತ್ವದ ರೈತ ಚಳವಳಿ ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದು ಈ ಕಾರಣಕ್ಕಾಗಿಯೇ. ಈ ನಿಲುವಿನ ಬಗ್ಗೆ ಭಿನ್ನಾಭಿಪ್ರಾಯಗಳಿರಬಹುದಾದರೂ, ವಾಸ್ತವವಾಗಿ ಭಾರತದ ಇತರ ಭಾಗಗಳಲ್ಲಿದ್ದ ರೈತ ಚಳವಳಿಗಿಂತ ವಿಶಿಷ್ಟವಾದ ಒಂದು ಸ್ಪಷ್ಟತೆಯುಳ್ಳ ಸೈದ್ಧಾಂತಿಕ ತಳಹದಿಯ ಕಸುವು ಪಡೆದುಕೊಂಡಿದ್ದು KRRS ಮಾತ್ರ. ಭಾರತ ಮತ್ತು ಇಂಡಿಯಾ (ಗ್ರಾಮೀಣ ಹಾಗೂ ನಗರ)ದ ನಡುವಿನ ವೈರುಧ್ಯ ಮತ್ತು ರೈತ ಸಮುದಾಯ ಮತ್ತು ನೌಕರಶಾಹಿ ನಡುವಿನ ವೈರುಧ್ಯ ಮುಂದಿನ ಒಂದು ದಶಕಗಳ ಕಾಲ ರೈತ ಸಂಘದ ಹೋರಾಟಗಳ ಪ್ರಮುಖ ಧಾತುವಾಗಿತ್ತು, ಪ್ರೊಫೆಸರರು ಆ ವೈರುಧ್ಯಗಳನ್ನು ತಮ್ಮ ಪ್ರಚಾರದ ಪ್ರಮುಖ ಅಸ್ತ್ರವನ್ನಾಗಿ ಮಾಡಿಕೊಂಡಿದ್ದು ನಿಜವಾದರೂ ಅದನ್ನೂ ದಾಟ ಸರ್ಕಾರಗಳ ಬಂಡವಾಳಶಾಹಿಪರ ನೀತಿಗಳು ಹೇಗೆ ರೈತ ಬದುಕನ್ನು ಬವಣೆಗೀಡುಮಾಡಿದೆ ಎಂದು ತಿಳಿಹೇಳುತ್ತಾ ರೈತ ಚಳವಳಿಯು ಮತ್ತೊಂದು ಟ್ರೇಡ್‌ಯೂನಿಯನ್ ಚಳವಳಿ ಮಾತ್ರ ಆಗಿಬಿಡುವ ಅಪಾಯದಿಂದ ರೈತಸಂಘವನ್ನು ಪಾರುಮಾಡಿದರು. ರೈತರ ಅಜೆಂಡಾಗೆ ಪ್ರಬಲವಾದ ಪರ್ಯಾಯ ರಾಜಕೀಯ ತಳಹದಿಯನ್ನು ಕಟ್ಟಿಕೊಟ್ಟರು.

ರೈತ ಸಮುದಾಯವನ್ನು ಬಡ-ಮಧ್ಯಮ-ಶ್ರೀಮಂತ-ಭೂಮಾಲೀಕ ವರ್ಗಗಳೆಂದು ವರ್ಗೀಕರಿಸಬಾರದೆಂಬುದು ಪ್ರೊಫೆಸರರ ವಾದವಾಗಿತ್ತು, ಪ್ರಾಯಶಃ ಇದಕ್ಕೆ ಅವರು ಅಪಾರವಾಗಿ ಗೌರವಿಸುತ್ತಿದ್ದ ಲೋಹಿಯಾ ಚಿಂತನೆಯೇ ಪ್ರೇರಣೆಯಾಗಿರಬೇಕು. ಲೋಹಿಯಾರವರೂ ಕೂಲಿಕಾರ್ಮಿಕರ ಹೋರಾಟ ರೈತರ ಹೋರಾಟಕ್ಕೆ ಪೂರಕವಾಗಿರಬೇಕೇ ವಿನಃ ಪರ್ಯಾಯವಾಗಬಾರದೆಂಬ ಸ್ಪಷ್ಟವಾದ ಅಭಿಪ್ರಾಯ ಹೊಂದಿದ್ದರು. ಈ ವಾದದಲ್ಲಿ ಒಂದು ಅಂತರ್ಗತ ಮಿತಿ ಇದ್ದದ್ದು ಸ್ಪಷ್ಟ. ಗ್ರಾಮೀಣ ಭಾರತದ ಭೂಮಾಲೀಕ ವ್ಯವಸ್ಥೆಯ ದೌರ್ಜನ್ಯವನ್ನು ಗ್ರಹಿಸದೆ ಹೋದದ್ದರಿಂದಲೇ, ಅದನ್ನು ವಿರೋಧಿಸಿ ಹುಟ್ಟಿಕೊಂಡ ದಲಿತ ಚಳವಳಿಯೊಡನೆ ಈವರೆಗೂ ರೈತಸಂಘ ಪರಿಣಾಮಕಾರಿ ಐಕ್ಯರಂಗ ಸ್ಥಾಪಿಸಿಕೊಳ್ಳುವಲ್ಲಿ ಪದೇಪದೇ ವಿಫಲವಾಗುತ್ತಿದೆ. ಅದೇ ರೀತಿ ತೀರಾ ಇತ್ತೀಚಿನವರೆಗೂ ನಗರ ಪ್ರದೇಶದ ಬಡಜನತೆಯೂ ರೈತ ಸಂಘದ "ನಗರ" ವಿರೋಧಕ್ಕೆ ತುತ್ತಾಗಿದ್ದರು.


ಸಮಾಜವಾದಿ ಯುವಜನ ಸಭಾ ಮೆರವಣಿಗೆಯಲ್ಲಿ ಲಂಕೇಶ್

ಆದರೆ ನಂತರದ ವರ್ಷಗಳಲ್ಲಿ ಜಾಗತೀಕರಣದ ದಾಳಿ ಎಲ್ಲಾ ಚಳವಳಿಗಳ ಪ್ರಾಧಾನ್ಯತೆ ಬದಲಿಸಿಕೊಳ್ಳುವ ಒತ್ತಡ ಸೃಷ್ಟಿಸಿತು. ಹೀಗಾಗಿಯೇ ಇತ್ತೀಚಿನ ವರ್ಷಗಳಲ್ಲಿ ರೈತ-ದಲಿತ-ಕೂಲಿಕಾರರ ಚಳವಳಿಗಳು ಸಮಾನ ನೆಲೆಯ ಸಂವಾದ ನಡೆಸಲು ಬೇಕಾದ ಭೂಮಿಕೆ ಸೃಷ್ಟಿಯಾಗುತ್ತಿದೆ. ಕೆಲವು ಕಡೆ ನಾಯಕರ ಮಟ್ಟದಲ್ಲಿ ರೈತ-ದಲಿತ ಐಕ್ಯತೆ ಕಾಣುತ್ತಿದೆಯಾದರೂ ಅದು ನಿಜವಾದ ಸೈದ್ಧಾಂತಿಕ ಐಕ್ಯತೆಯೋ ಅಥವಾ ತಾತ್ಕಾಲಿಕ ಅಗತ್ಯಗಳ ಒತ್ತಡದ ಅಥವಾ ಅವಕಾಶವಾದಿ ಮೈತ್ರಿಯೋ ಎಂಬುದು ಚರ್ಚಾರ್ಹ ವಿಷಯವಾಗಿಯೇ ಉಳಿದಿದೆ. ಆಯಾ ಚಳವಳಿಗಳಲ್ಲಿ ದಟ್ಟವಾಗಿ ಹರಡಿರುವ ಅವಕಾಶವಾದ ಮತ್ತು ಸುಧಾರಣಾವಾದೀ ಪ್ರವೃತ್ತಿಗಳು ಆಚರಣೆಯಲ್ಲಿ ಒಂದು ಐಕ್ಯವಾದ ಬೃಹತ್ ಜನಾಂದೋಲನವಾಗದಂತೆ ತಡೆಗಟ್ಟಿದೆ. ಪ್ರೊಫೆಸರರು ತಮ್ಮ ಕೊನೆಯ ದಿನಗಳಲ್ಲಿ ಈ ಮಿತಿಯನ್ನು ಬಹಳ ಸ್ಪಷ್ಟವಾಗಿ ಅರಿತುಕೊಂಡು ಅದನ್ನು ಮೀರುವ ನಿಟ್ಟಿನಲ್ಲಿ ಪ್ರಯೋಗಶೀಲ ಆಚರಣೆಗಳ ಬಗ್ಗೆ ತಲೆಕೆಡಿಸಿಕೊಂಡಿದ್ದರು.

ಎಲ್ಲಕ್ಕಿಂತ ಮುಖ್ಯವಾಗಿ, ಪ್ರೊಫೆಸರರ ರಾಜಕೀಯ ದೂರದೃಷ್ಟಿ ಹಾಗೂ ಸೈದ್ಧಾಂತಿಕ ಸ್ಪಷ್ಟತೆ ಚಳವಳಿಗಳ ಮೇಲೆ ಪರಿಣಾಮಕಾರಿ ಹಾಗೂ ನಿರ್ಣಯಾತ್ಮಕ ಪ್ರಭಾವ ಬೀರಿದ್ದು 90 ರ ದಶಕದಲ್ಲಿ, ಸಾಮ್ರಾಜ್ಯಶಾಹಿ-ಜಾಗತೀಕರಣವನ್ನು ಅವರು ಅರ್ಥೈಸಿದ ರೀತಿಯಲ್ಲಿ ಹಾಗೂ ಅದರ ವಿರುದ್ಧ ಹೋರಾಟ ಕಟ್ಟಿದ ರೀತಿಯಲ್ಲಿ, 1992 ರಲ್ಲಿ ಕಾರ್ಗಿಲ್ ಕಂಪನಿಯ ಮೇಲೆ ರೈತ ಸಂಘದ ಕಾರ್ಯಕರ್ತರು ನಡೆಸಿದ ದಾಳಿ, ಮತ್ತು 1992ರಲ್ಲಿ ಅವರು ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಸಂಘಟಿಸಿದ್ದ "ಸಾಮ್ರಾಜ್ಯಶಾಹಿ ವಿದೇಶೀಕರಣ ವಿರೋಧಿ ಸಮಾವೇಶ" ಜಾಗತೀಕರಣ ವಿರೋಧಿ ಹೋರಾಟದ ದಿಕ್ಕು-ದಿಸೆಗಳನ್ನು ಅರಸುತ್ತಿದ್ದ ಅಂತರ ರಾಷ್ಟ್ರೀಯ ರೈತ ಚಳವಳಿಗೆ ಹೊಸ ಪರಿಭಾಷೆಯನ್ನೇ ಒದಗಿಸಿತು. ದೇಶದ ಸಾರ್ವಭೌಮತೆಯನ್ನು ರೈತ ಬದುಕಿನ ಸಾರ್ವಭೌಮತೆಯೆಂದೇ ಗ್ರಹಿಸಿದ್ದ ಪ್ರೊಫೆಸರರು, ಜಾಗತೀಕರಣದ ಹೆಸರಲ್ಲಿ ದೇಶದ ಸಾರ್ವಭೌಮತೆಯ ಮೇಲೆ ನಡೆಯುತ್ತಿರುವ ದಾಳಿ ರೈತ ಸಾರ್ವಭೌಮತೆಯ ಮೇಲಿನ ದಾಳಿಯೆಂದೇ ಗ್ರಹಿಸಿ ಅದರ ವಿರುದ್ಧ "ನೇರ ಪ್ರಜಾತಾಂತ್ರಿಕ ಕಾರ್ಯಾಚರಣೆ"ಗೆ ಕರೆ ನೀಡಿದ್ದರು. ಬಹುರಾಷ್ಟ್ರೀಯ ಕಂಪನಿಯ ಮೇಲಿನ ದಾಳಿಯನ್ನು ಬಲವಾಗಿ ಸಮರ್ಥಿಸಿಕೊಳ್ಳುತ್ತಿದ್ದ ಪ್ರೊಫೆಸರ್ ಅದನ್ನು **non-voilent militancy** (ಅಹಿಂಸಾತ್ಮಕ ಸಮರಶೀಲತೆ)ಯೆಂದು ಕರೆಯುತ್ತಿದ್ದರು. ವಿಶ್ವದ ಸಂಪನ್ಮೂಲವನ್ನೆಲ್ಲಾ ತನ್ನದೆನ್ನುವ ಅಮೆರಿಕದ ಸಾಮ್ರಾಜ್ಯಶಾಹಿ ಬಡರಾಷ್ಟ್ರಗಳ ಕೃಷಿಯನ್ನು ಮಾಪಹತೀಕರಿಸಲು "ಆಹಾರ ಭದ್ರತೆ" (ವಿಶ್ವಕ್ಕೆಲ್ಲಾ ತಾನೇ ಆಹಾರ ಸರಬರಾಜು ಮಾಡುವುದರಿಂದ, ಪ್ರತಿರಾಷ್ಟ್ರವು ತನ್ನ ದೇಶೀಯ ಆಹಾರ ಸ್ವಾವಲಂಬನೆಯ ಬಗ್ಗೆ ಯೋಚಿಸಬೇಕಿಲ್ಲವೆಂಬ ಕುತಂತ್ರದ ವಾದ) ವಾದವನ್ನು ಮುಂದಿಟ್ಟಾಗ ಅದನ್ನು ಬಲವಾಗಿ ವಿರೋಧಿಸಿ "food sovereingity' (ಆಹಾರ ಸಾರ್ವಭೌಮತೆ) ಪ್ರತಿಯೊಂದು ದೇಶದ ಹಕ್ಕೆಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರೊಫೆಸರ್ ಪ್ರತಿಪಾದಿಸಿದರು. ಇದನ್ನು ವಿಶ್ವದ ಬಹುಪಾಲು ಬಡರಾಷ್ಟ್ರಗಳ ರೈತ ಸಂಘಟನೆಗಳು ತಮ್ಮ ಪ್ರಮುಖ ರಾಜಕೀಯ ಅಜೆಂಡಾವನ್ನಾಗಿ ಮಾಡಿಕೊಂಡಿದೆ.

1993-94ರಲ್ಲಿ ಡಂಕೆಲ್ ಪ್ರಸ್ತಾಪಕ್ಕೆ ಸರ್ಕಾರ ಸಹಿ ಹಾಕಲು ತುದಿಗಾಲಲ್ಲಿ ನಿಂತಿದ್ದಾಗ ಅದರ ವಿರುದ್ಧ ಜನಜಾಗೃತಿ ಮೂಡಿಸಿದ್ದು ಪ್ರೊಫೆಸರ್‌ರವರ ರೈತಸಂಘ ಮಾತ್ರವೇ! ಡಂಕೆಲ್‌ನಲ್ಲಿರುವ ರೈತ ವಿರೋಧಿ ಅಂಶಗಳೇನು ಎಂಬುದರ ಬಗ್ಗೆ ಸಂಸತ್ ಸದಸ್ಯರಿಗೂ ಗೊತ್ತಿಲ್ಲದಿದ್ದರೂ ಕರ್ನಾಟಕ ರೈತಸಂಘದ ಹಲವಾರು ನಾಯಕರು ಅದರ ಬಗ್ಗೆ ಅಧಿಕಾರ ಪೂರ್ವಕವಾಗಿ ಮಾತಾಡಬಲ್ಲವರಾಗಿದ್ದಕ್ಕೆ ಪ್ರೊಫೆಸರ್‌ರವರು ನೀಡಿದ ಶಿಕ್ಷಣವೇ ಕಾರಣ ಎಂದರೆ ಅತಿಶಯೋಕ್ತಿಯಲ್ಲ. 1995 ರಲ್ಲಿ ಉಂಖಿಖಿ, WTO ಎಂಬ ಸಾಮ್ರಾಜ್ಯಶಾಹಿ ಅಸ್ತ್ರವಾಗಿ ಪರಿವರ್ತನೆಯಾದಾಗ ವಿಶ್ವದ ಹಾಗೂ ಭಾರತದ ಹಲವಾರು ಸಂಘಟನೆಗಳು ಏನು ನಿಲುವು ತೆಗೆದುಕೊಳ್ಳಬೇಕೆಂಬ ಗೊಂದಲಕ್ಕೆ ಒಳಗಾಗಿದ್ದವು. WTO ವನ್ನು ಸಾರಾಸಗಟು ತಿರಸ್ಕರಿಸುವುದೋ? ಅಥವಾ ಕೃಷಿಯನ್ನು ಮಾತ್ರ ಅದರಿಂದ ಹೊರಗಿಡಬೇಕೆಂದು ಕೇಳುವುದೋ? ಅಥವಾ WTO ಒಳಗಡೆ ಸಮಾನ ತಳಹದಿಯ ಸ್ಥಾನಮಾನ ಕೇಳುವುದೋ? ಎಂಬ ನಿಲುವುಗಳನ್ನು ಆಧರಿಸಿ ವಿಶ್ವಮಟ್ಟದಲ್ಲೇ ದೊಡ್ಡ ಗೊಂದಲ ಏರ್ಪಟ್ಟಿತ್ತು. ಶರದ್ ಜೋಷಿಯಂತ ರೈತ ಚಳವಳಿ ನಾಯಕರು WTO ವನ್ನು ಸಂಪೂರ್ಣವಾಗಿ ಸ್ವಾಗತಿಸಿದರು. ಹಲವಾರು ಸಂಸದೀಯ ಎಡಪಕ್ಷಗಳು "WTO ಬೇಕು- ಆದರೆ ಒಳಗಡೆ ಸಮಾನ ಸ್ಥಾನಮಾನಕ್ಕಾಗಿ ಹೋರಾಡಬೇಕು" ಎಂಬ ನಿಲುವು ತಾಳಿದರು. ದೇಶದ ಹಲವು ಕ್ರಾಂತಿಕಾರಿ ರೈತ-ಕೂಲಿಕರ ಸಂಘಟನೆಗಳು ಮಾತ್ರ ಅತ್ಯಂತ ಸ್ಪಷ್ಟವಾಗಿ WTO ಒಂದು ಸಾಮ್ರಾಜ್ಯಶಾಹಿ ಸಾಧನವೆಂದೂ, ಭಾರತ WTO ಇಂದ ಹೊರಬರಬೇಕೆಂದೂ ನಿಲುವು ತಾಳಿದರು. ಮೊದಲು ಕೃಷಿಯನ್ನು ಮಾತ್ರ WTO ಇಂದ ಹೊರಗಿಡಬೇಕೆಂಬ ನಿಲುವು ಹೊಂದಿದ್ದ ಪ್ರೊಫೆಸರ್, ಕ್ರಮೇಣವಾಗಿ ಭಾರತ WTO ಇಂದ ಹೊರಬರಬೇಕು ಹಾಗೂ WTO ನಶಿಸಬೇಕೆಂಬ ನಿಲುವಿಗೆ ಬಂದು, ಸಮಾನ ಅಭಿಪ್ರಾಯ ಉಳ್ಳ ಕ್ರಾಂತಿಕಾರಿ ರೈತ, ಕೂಲಿ ಸಂಘಟನೆಗಳೊಂದಿಗೆ ಹೋರಾಟಕ್ಕೆ ಕೈಗೂಡಿಸಿದರು. ರೈತ ಸಂಘ ಮತ್ತು ದೇಶದ ಪ್ರಮುಖ ರೈತ ಹಾಗೂ ರೈತಕೂಲಿ ಸಂಘಗಳೂ ಮತ್ತು ಸಾಮ್ರಾಜ್ಯಶಾಹಿ ವಿರೋಧೀ ಕ್ರಾಂತಿಕಾರಿ ಸಂಘಟನೆಗಳು ಒಟ್ಟಾಗಿ ರಚಿಸಿಕೊಂಡ "WTO ವಿರುದ್ಧ ಭಾರತ ಜನತೆಯ ಜಂಟಿ ಕ್ರಿಯಾ ವೇದಿಕೆ (JAFIP)" ನಲ್ಲಿ ನಂತರ ದೇಶದ ಎಲ್ಲಾ ರೈತ ಸಂಘಟನೆಗಳೂ ಸೇರಿಕೊಂಡವು. ಈ ವೇದಿಕೆ 1998 ರ ಮೇ 1 ರಂದು ಹೈದ್ರಾಬಾದಿನಲ್ಲಿ ಹಾಗೂ ಸೆಪ್ಟೆಂಬರ್ 17 ರಂದು ದೆಹಲಿಯಲ್ಲಿ WTO ವಿರುದ್ಧ ನಡೆಸಿದ ರ್‍ಯಾಲಿ ಹಾಗೂ ಜನತೆಯ ಘೋಷಣೆ ಅತ್ಯಂತ ಐತಿಹಾಸಿಕವಾಗಿತ್ತು ಹಾಗೂ ವಿಶ್ವದ ಇತರ ಚಳವಳಿಗೂ ಮಾರ್ಗದರ್ಶಿಯಾಗಿತ್ತು.

1994ರಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ರಚಿತವಾದ ರೈತ ಚಳವಳಿಗಳ ...ತ (*via campesina*) "ವಯಾ ಕ್ಯಾಂಪಸೀನ"ಕ್ಕೆ ಪ್ರೊಫೆಸರ್ ...ರ್ಗದರ್ಶಿಗಳೂ ಹಾಗೂ ದಕ್ಷಿಣ ಏಷ್ಯಾ ಹಾಗೂ ಏಷ್ಯಾ ವಿಭಾಗದ ...ರ್ಗದರ್ಶಿಯೂ ಆಗಿದ್ದರು. ಇದರಲ್ಲಿ ಯುರೋಪಿನ ಹಲವು ರೈತ ...ಟನೆಗಳು ಮಾತ್ರವಲ್ಲದೆ ಬ್ರೆಜಿಲ್‌ನ MST (ಭೂಹೀನ ರೈತರ ...ಳಿ)ಯಂತ ಮಿಲಿಟೆಂಟ್ ರೈತ ಸಂಘಟನೆಗಳೂ ಭಾಗಿಯಾಗಿದ್ದವು. "ವಯಾ ಕ್ಯಾಂಪಸೀನ" ಹಾಗೂ ಪ್ರಪಂಚದ ಇತರ ಜಾಗತೀಕರಣ ...ೀಧಿ-ಬಂಡವಾಳಶಾಹಿ ವಿರೋಧಿ ಸಂಘಟನೆಗಳು ಒಟ್ಟಾಗಿ ರಚಿಸಿಕೊಂಡ ...ತೆಯ ವಿಶ್ವ ಕಾರ್ಯಾಚರಣೆ" (peoples global action-...A) ಯೆಂಬ ಒಕ್ಕೂಟಕ್ಕೂ ಪ್ರೊಫೆಸರ್ ಪ್ರಮುಖ ಸ್ಥಾನದಲ್ಲಿದ್ದರು.

ಪ್ರಣಾಳಿಕೆ ರಚನೆ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿಗಳಿಂದ ಹಣ ...ಮುವ ಎನ್‌ಜಿಓಗಳಿಂದ ದೂರವಿರಬೇಕೆಂದೂ ಹಾಗು "ಸಮರಶೀಲ ...ರಾಟ" ಸ್ವರೂಪ ಹೊಂದಿರಬೇಕೆಂದೂ ಬಲವಾಗಿ ಪ್ರತಿಪಾದಿಸಿದರು. ...ಶದ ದಿನಗಳಲ್ಲಿ "ವಯಾ ಕ್ಯಾಂಪಸೀನ" ಸಂಘಟನೆ WSF ಎಂಬ ...ಾಜ್ಯಶಾಹಿಯ ಸಮ್ಮತಿ ಮತ್ತು ಪರೋಕ್ಷ ಬೆಂಬಲ ಹೊಂದಿದ್ದ ...ೀಕರಣ ವಿರೋಧಿ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದರ ... ಅತ್ಯಂತ ಅಸಮಾಧಾನ ಹೊಂದಿದ್ದರು. ಹಾಗೂ AIPRF, ...ೀವಾದಿ ಬಿ.ಡಿ. ಶರ್ಮಾ, ಛತ್ತೀಸ್‌ಗಢ್ ಮುಕ್ತ ಮೋರ್ಚಾ ಇತ್ಯಾದಿ ...ಟನೆಗಳು ಹಾಗೂ ವ್ಯಕ್ತಿಗಳು ಈ ಸಂಚನ್ನು ವಿರೋಧಿಸಿ WSF ಗೆ ...ರ್ಯಾಗಿ ಒಖ-2004 (ಜಾಗತೀಕರಣ ಮತ್ತು ಯುದ್ಧದ ವಿರುದ್ಧ ...ಟ್ರೈ ಪ್ರತಿರೋಧ-2004) ಎಂಬ ವೇದಿಕೆ ಹುಟ್ಟುಹಾಕಿ ಭಾಗವಹಿಸಲು ...ಸರರನ್ನು ಕೋರಿದಾಗ ಅವರು "ಅದು WSF ನ್ನು ವಿರೋಧಿಸುತ್ತಿದ್ದರೆ ... ಭಾಗವಹಿಸುತ್ತೇನೆ" ಎಂದು WSF ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ...ಡಿಸಿದ್ದರು. ಆ ನಂತರ ಅವರು MR-2004ನ ಪ್ರಮುಖ ...ಕರಲ್ಲೊಬ್ಬರಾದರು. ಮುಂಬೈನಲ್ಲಿ ನಡೆದ MR-2004 ಸಭೆಯಲ್ಲಿ ... ರಾಜಿರಹಿತ ಸಮಾಜವಾದಿ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ... ಪಟ್ನಾಯಕ್ ಸಹ ಭಾಗವಹಿಸಿದ್ದರು. ಆಗ ಕಿದ್ವಾಯಿ ಆಸ್ಪತ್ರೆಯಲ್ಲಿ ...್‌ನಿಂದ ನರಳುತ್ತಿದ್ದರೂ, ನಂಜುಂಡಸ್ವಾಮಿಯವರ ಮನಸ್ಸೆಲ್ಲಾ ...-2004 ಸುತ್ತಲೇ ಇರುತ್ತಿತ್ತು.

...ವರನ್ನು ನಾನು ಕೊನೆಯ ಬಾರಿ ಕಂಡಿದ್ದು ಜನವರಿ 31 ರಂದು. ...ಖ ಆಸ್ಪತ್ರೆಯಲ್ಲಿ. ಅಂದು ಅವರು ಆಂಧ್ರದ ಕ್ರಾಂತಿ ಕವಿ ಗದ್ದರ್‌ರೊಂದಿಗೆ ...ನಡೆಸಿದ ಸಂಭಾಷಣೆಯನ್ನು ನೆನೆಸಿಕೊಂಡರು. ಕೆಲವು ತಿಂಗಳ ಹಿಂದೆ ... ಪ್ರೊಫೆಸರ್ ಅವರನ್ನು ಭೇಟಿಯಾಗಿದ್ದಾಗ ಸಾಮ್ರಾಜ್ಯಶಾಹಿ ಆಕ್ರಮಣವನ್ನು ...ಟ್ಟಿಸಲು ಬಹುರಾಷ್ಟ್ರೀಯ ಕಂಪನಿಗಳ ಮೇಲಿನ ಕೆಲವು ಧಾಳಿಗಳು ... ಸಾಲುವುದಿಲ್ಲ, ದೇಶದ ಸ್ವಾತಂತ್ರ್ಯ ಕಾಪಾಡಿಕೊಳ್ಳಲು ದೇಶಪ್ರೇಮಿ ...ಂ ಅಗತ್ಯವಿದೆಯೆಂದೂ ಹಾಗೂ ಅಂತಹ ಸೇನೆ ಆಂಧ್ರ ಹಾಗೂ ...ಾರಣ್ಯ ಬಿಹಾರಗಳಲ್ಲಿ ತಯಾರಾಗುತ್ತಿದೆಯೆಂದೂ ಗದ್ದರ್ ಹೇಳಿದ್ದರು. ...ಪು ಸೇನೆಯ ಜೊತೆಗೆ ಕೆಲಸ ಮಾಡಲು ತಾವೂ ಇಲ್ಲಿ 'ಹಸಿರು ...ಕಟ್ಟಲು ಯತ್ನಿಸುತ್ತಿರುವುದಾಗಿ ಪ್ರೊಫೆಸರ್ ಹೇಳಿದರು. ಜನವರಿ ...ಬದು ಸಹ ತಾವು ಆಸ್ಪತ್ರೆಯಿಂದ ಹೊರಗಡೆ ಬಂದೊಡನೆ ಒಂದು ...ನ 'ಹಸಿರು ಸೇನೆ' ನೋಂದಾವಣೆ ಪ್ರಾರಂಭಿಸುವುದಾಗಿ ಹೇಳಿದರು. ...ಪ್ರೊಫೆಸರರ ಶಕ್ತಿಯಾಗಿತ್ತು, ಅವರ ಚೇತನ ಅದಮ್ಯವಾಗಿತ್ತು.

...ಗ ಪ್ರೊಫೆಸರರ ನಿಧನದ ನಂತರ ಅವರ ಈ ಎಲ್ಲಾ ಸಕಾರಾತ್ಮಕ ...ಳನ್ನು ಅರಗಿಸಿಕೊಳ್ಳುವ ಅಗತ್ಯವಿದೆ. ಅದೇ ರೀತಿ ಪ್ರೊಫೆಸರರ ... ಭಾಗವೇ ಆಗಿದ್ದ 'ವ್ಯಕ್ತಿ ಪ್ರತಿಷ್ಠೆ'ಗಳ ಮಿತಿಯನ್ನು ಸಂಘಟನಾತ್ಮಕ ...ತ್ತಿಗಾಗಿ ಮೀರುವುದು ಇಂದಿನ ಅಗತ್ಯವಾಗಿದೆ. ಇಂದು ಇರುವ ... ಇಷ್ಟೇ. ದಮನಿತರೆಲ್ಲರೂ ವಿಮೋಚನೆಯಾಗಲು ಸಾಧ್ಯ ಅಥವಾ ... ವಿಮೋಚನೆಯಾಗಲು ಸಾಧ್ಯವಿಲ್ಲ! ಹೀಗಾಗಿ ರೈತ-ದಲಿತ-...ಮಹಿಳೆ-ಆದಿವಾಸಿಗಳೆಲ್ಲರೂ ಜಾಗತೀಕರಣ ಮತ್ತು ಹಿಂದೂತ್ವವಾದಿ ... ವಿರುದ್ಧ ಬಲವಾದ ಶಕ್ತಿಯಾಗುವ ಅಗತ್ಯ ಹಿಂದೆಂದಿಗಿಂತಲೂ ...ಗಿದೆ. ಅದೇ ರೀತಿ ನಗರ-ಗ್ರಾಮೀಣ ಭಾರತವೆಂಬ ಸರಳ ಧ್ರುವೀಕರಣ ...ನಗರ ಹಾಗೂ ಗ್ರಾಮೀಣದ ಬಡವರ ನಡುವೆ ಸಮಾನ ಹಿತಾಸಕ್ತಿ ... ಸಿದ್ಧಾಂತದೆಡೆ ಚಳವಳಿಗಳೂ ಸಾಗಬೇಕಿದೆ. ವರ್ಗ, ಜಾತಿ, ಲಿಂಗ, ...ಮತ್ತು ಪ್ರದೇಶಗಳ ಆಧಾರದ ಮೇಲೆ ಶೋಷಣೆ ಮತು ದಮನಕ್ಕೆ ...ಾಗುತ್ತಿರುವ ಶಕ್ತಿಗಳ ನಡುವೆ ಪರಿಣಾಮಕಾರಿ ಸೈದ್ಧಾಂತಿಕ ಮತ್ತು ...ತ್ಮಕ ರಾಜಕೀಯ ಒಗ್ಗೂಡುವಿಕೆ ಆಗಬೇಕಿದೆ. ಗ್ರಾಮೀಣ ಭಾರತದ ...ಲೀಕರ ವ್ಯವಸ್ಥೆ-ಜಾತಿ ವ್ಯವಸ್ಥೆಯ ನಿರ್ನಾಮ ಮತ್ತು ಕೂಲಿಕಾರರ ... ರೈತ ಮಹಿಳೆಯರ ಅಜೆಂಡಾ ರೈತ ಸಂಘದ ಕಾರ್ಯಸೂಚಿಯಲ್ಲಿ ...ಕಾಗಿದೆ. ಅದೇ ರೀತಿ WTO ಗಳ ಕೈಗೊಂಬೆಯಾಗಿರುವ ಈ ... ವ್ಯವಸ್ಥೆಯಲ್ಲಿ ರೈತಪರ ಅಧಿಕಾರದ ಹಗಲುಗನಸಿನ, ಸಂಸದೀಯ ...ರಣದ ಭ್ರಮೆಯಿಂದ ಕೂಡಲೇ ಹೊರಬಂದು ಗಟ್ಟಿ ಹೋರಾಟ ...ದೆ. "ಹಸಿರು ಸೇನೆ"ಯನ್ನು ನಿಜವಾದ ಅರ್ಥದಲ್ಲಿ 'ವಿಮೋಚನಾ ...ಮಾಡಬೇಕಿದೆ.

...ಮು ರೈತ ಹೋರಾಟಗಳು ಭೂಕಬಳಿಕೆಯ ವಿರುದ್ಧ ಎಲ್ಲೆಡೆ ...ಟಾಗಿ ಧ್ವನಿ ಎತ್ತುತ್ತಿವೆ. ಈ ಸಂದರ್ಭದಲ್ಲೇ ಹೋರಾಟಗಳು ... ಮತ್ತು ರಾಜಕೀಯವನ್ನೇ ಮರೆತು ಕೇವಲ ಸ್ವಹಿತಾಸಕ್ತಿಯನ್ನು ... ಪೋಷಿಸುವ ಟ್ರೇಡ್ ಯೂನಿಯನ್‌ಗಳ ಮಟ್ಟಕ್ಕೆ ಮಾತ್ರ ...ಾಗದೆ ಪ್ರಬಲ ರಾಜಕೀಯ ಶಕ್ತಿಯಾಗಬೇಕಿದೆ. ಗ್ರಾಮ್ಷಿ ಹೇಳುವಂತೆ ...ಯ ನೈತಿಕ ಅಧಿಕಾರ ಕೇಂದ್ರಗಳನ್ನು ಕಟ್ಟಿಕೊಳ್ಳಬೇಕಿದೆ. ಪ್ರೊಫೆಸರ್ ...ವಾಗಿದ್ದಾಗ ರೈತಸಂಘ ಒಂದು ನೈತಿಕ ಶಕ್ತಿಯುಳ್ಳ ಸಾಂಸ್ಕೃತಿಕ ...ಯೂ ಆಗುವ ಚಹರೆಗಳನ್ನು ತೋರುತ್ತಿದ್ದದ್ದು ಹೀಗೆಯೇ. ಅವರು ...ನ್ನ ಚಳವಳಿ ಮತ್ತು ಚಿಂತನಾ ಶಿಬಿರಗಳು ಇದೇ ಉದ್ದೇಶವನ್ನು ...ಸುತ್ತಿತ್ತು, ಆದರೆ ಇಂದಿನ ಚಳವಳಿಗಳು ಆ ದಿನಗಳ ಕಳೇಬರದಂತಾ...ಗಾಹೋಸು ಎಂಬುದರ ಬಗ್ಗೆ ಎಲ್ಲರೂ ಆತ್ಮನಿರೀಕ್ಷಣೆ ಮಾಡಿಕೊಳ್ಳಲು ...ಕಾಲ! ಅದೇ ಪ್ರೊಫೆಸರ್ ನಂಜುಂಡಸ್ವಾಮಿಯವರಿಗೆ ನಾವು ...ವ ನಿಜವಾದ ಶ್ರದ್ಧಾಂಜಲಿ. ಅಲ್ಲವೇ? ●

ಆತ್ಮೀಯ ನಿರ್ದಯಿ ಸ್ನೇಹಿತ



ಲಂಕೇಶ್-75

ಲಂಕೇಶರ ಬಗ್ಗೆ ಬರೆಯುವುದೆಂದರೆ ನನ್ನ ಲೆಕ್ಕಣಿಕೆಗೆ ಒಂದು ರೀತಿಯ ಅವರ್ಣನೀಯ ಖುಷಿ. 'ಲಂಕೇಶ್ ಪತ್ರಿಕೆ' ಹೊರಬರುವವರೆಗೂ ನನಗವರು ಅಪರಿಚಿತರಾಗಿಯೇ ಇದ್ದವರು. ಲಂಕೇಶ್ ಪತ್ರಿಕೆ ಹೊರಬಂದು ಕರ್ನಾಟಕದಲ್ಲೆಲ್ಲ ತನ್ನ ನಿರ್ಭಿಡೆಯ ಅನಿಸಿಕೆಗಳನ್ನು ಪ್ರಸರಿಸತೊಡಗಿದಾಗ ನನಗೆ ಈ 'ಲಂಕೇಶ್' ಹೆಸರಿನೆಡೆಗೆಯೇ ವಿಚಿತ್ರವಾದ ಅವ್ಯಕ್ತ ಸೆಳೆತ. ಕಾಲೇಜಿನಲ್ಲಿ ಓದುವಾಗ ನಾನು ರಾಮನಿಗಿಂತ ರಾವಣನನ್ನು ಜಾಸ್ತಿಯಾಗಿ ಮೆಚ್ಚಿಕೊಂಡಿದ್ದುದರ ಪ್ರಭಾವ ಇದಕ್ಕೆ ಕಾರಣವಾಗಿತ್ತೇ ಎಂದು ಈಗಲೂ ಒಂದೊಂದು ಸಲ ಯೋಚನೆಯ ಅಲೆಯೊಂದು ನನ್ನ ತಲೆಯಲ್ಲಿ ಸುಳಿದಾಡುತ್ತಿರುತ್ತದೆ. ಹೌದು, ಹಲವಾರು ಕಾರಣಗಳಿಂದಾಗಿ ರಾಮಾಯಣದ ರಾವಣ ನನ್ನ ಮೆಚ್ಚಿನ ಪಾತ್ರ. ಅಂತೆಯೇ ಲಂಕೇಶರೂ ಸಹ.

ಲಂಕೇಶ್ ಪತ್ರಿಕೆ ಓದುತ್ತಿದ್ದಾಗಲೆಲ್ಲ ನಾನೂ ಅದಕ್ಕೆ ಏನಾದರೂ ಬರೆಯಬೇಕು ಎನಿಸುತ್ತಿತ್ತು, ಕ್ರಮೇಣ ಈ ಅನಿಸಿಕೆ ಹೆಮ್ಮರವಾಗಿ ಬೆಳೆದು, ಬರೆಯಲೇಬೇಕು ಎಂಬ ನಿರ್ಧಾರ ತಳೆದಾಗ ಏನು ಬರೆಯುವುದು ಎನ್ನುವ ಪ್ರಶ್ನೆ. ನನ್ನ ನೇರ ಅನುಭವಕ್ಕೆ ಬಂದ ಸತ್ಯಘಟನೆಯ ಸಂಭಾಷಣೆಯೊಂದನ್ನು 'ಜೋಗಿತಿಯೊಂದಿಗೆ ಮಾತುಕತೆ' ಎಂದು ನಮ್ಮ ಜಿಲ್ಲೆಯ ಹಳ್ಳಿಯ ಆಡುಭಾಷೆಯಲ್ಲಿಯೇ ಬರೆದು ಕಳಿಸಿದೆ. ಅದನ್ನು ಲಂಕೇಶ್ ಸ್ವೀಕರಿಸಬಹುದೆಂಬ ಭರವಸೆ ಖಂಡಿತ ಇರಲಿಲ್ಲ. ಆದರೆ ಸಂಚಿಕೆಯ ಎರಡನೆಯ ಪುಟದಲ್ಲಿಯೇ ನನ್ನ ಲೇಖನ ಪ್ರಕಟವಾಗಿದ್ದನ್ನು ಕಂಡಾಗ ನನಗೆ ನಿಜಕ್ಕೂ ಅಚ್ಚರಿಯಾಗಿತ್ತು, ಸಂತೋಷವೂ ಆಗಿತ್ತು. ಲಂಕೇಶ್ ಗುಲ್ಬರ್ಗಾ ಜಿಲ್ಲೆಯ ಹಳ್ಳಿಯ ಆಡುಭಾಷೆಯನ್ನು ಸ್ವೀಕರಿಸಿದ್ದುದು ನನ್ನ ಬರಹಕ್ಕೆಯೇ ಒಂದು ಹೊಸ ತಿರುವು ತಂದು ಕೊಟ್ಟಿತು. ಮುಂದೆ ನನ್ನ ಅನಿಸಿಕೆಗಳನ್ನು, ನನ್ನ ಸ್ವಂತ ಅನುಭವಕ್ಕೆ ಬಂದ ಸಾಮಾಜಿಕ ಕೆಡುಕುಗಳನ್ನು ಧೈರ್ಯದಿಂದ 'ಪತ್ರಿಕೆ'ಗೆ ಬರೆಯಲಾರಂಭಿಸಿದೆ. ಯಾರೋ ಏನೋ ಆಗಿ ಲಂಕೇಶ್ ಇನ್ನೂ ಅಪರಿಚಿತವಾಗಿಯೇ ಉಳಿದಾಗಲೇ ನನ್ನ ಬಹಳಷ್ಟು ಲೇಖನಗಳು ಲಂಕೇಶ್ ಪತ್ರಿಕೆಯ ಪುಟಗಳಲ್ಲಿ ಪ್ರಸರಿಸಿ ನಿಂತಿದ್ದವು.



ಈಗಲೂ ನನಗನಿಸುತ್ತದೆ. ಸತ್ಯವನ್ನು, ಕೆಡುಕನ್ನು ಅನ್ಯಾಯವನ್ನು ಬಯಲಿಗೆಳೆದು ಬರೆಯುವ ಧೈರ್ಯ ನನಗೆ ತಂದುಕೊಟ್ಟವರು ಲಂಕೇಶರೆ. ನಾನು ನಿಜಕ್ಕೂ ಮೊದಲು ಬಹಳ ಬೆದರುಬೊಂಬೆಯಾಗಿದ್ದೆ. ಲಂಕೇಶ್ ಪತ್ರಿಕೆಗೆ ಬರೆಯುತ್ತ ಹೋದಂತೆ ಕ್ರಮೇಣ ನನಗೆಯೇ ನನ್ನಲ್ಲಿ ಆತ್ಮವಿಶ್ವಾಸ ಮೂಡಿನಿಂತು ಗಟ್ಟಿಯಾಯಿತು. ನಿರ್ಭಿಡೆಯಿಂದ ಮುನ್ನುಗ್ಗಿ ಬರೆಯುವ ಧೈರ್ಯ ಕೂಡಿಬಂದಿತು. ದಲಿತ ಹೆಣ್ಣುಗಳ ಮೇಲಾಗುತ್ತಿರುವ ಅತ್ಯಾಚಾರ, ದುರ್ಬಲ ಗಂಡುಗಳ ಮೇಲಿನ ಅನ್ಯಾಯ, ಶೋಷಣೆ, ತುಳಿತಕ್ಕೊಳಪಟ್ಟ ಮುಗ್ಧ ಅಮಾಯಕರ ಮೇಲಿನ ದೌರ್ಜನ್ಯ ದಬ್ಬಾಳಿಕೆಗಳ ಅನುಭವಗಳನ್ನು ದಿಟ್ಟವಾಗಿ ಖುಲ್ಲಮ್ ಖುಲ್ಲಾ ಬರೆಯತೊಡಗಿದೆ. ನಾನು ಉಚ್ಚಕುಲದವಳಲ್ಲ ಎಂಬ ಒಂದೇ ಒಂದು ಕಾರಣಕ್ಕಾಗಿ ನಮ್ಮೂರಿನ ದೊಡ್ಡ ಜಾತಿಯ ವಿದ್ವಾಂಸರು, ಪ್ರತಿಭಾವಂತ ಶಿರೋಮಣಿಗಳು, ನನ್ನನ್ನು ಸಾಧ್ಯವಿದ್ದಷ್ಟೂ ಹತ್ತಿಕ್ಕಲು ಯತ್ನಿಸಿ ಸಫಲರಾಗುತ್ತಿದ್ದ ಸಮಯದಲ್ಲಿ ಲಂಕೇಶ್ ನನಗೆ ಪ್ರೋತ್ಸಾಹ ಕೊಟ್ಟರು. ಆಗ ನನಗೂ ಅವರಿಗೂ ಪರಿಚಯವಿರಲಿಲ್ಲ, ನನ್ನ ಕುಲಜಾತಿ ಒಂದೂ ಅವರಿಗೆ ತಿಳಿದಿರಲಿಲ್ಲ.

ಇದೇ ಹಿನ್ನೆಲೆಯಲ್ಲಿ ನಾನೊಮ್ಮೆ ಬೆಂಗಳೂರಿಗೆ ಹೋದಾಗ ಅವರಿಗೆ ಫೋನ್ ಮಾಡಿ ಭೇಟಿಯಾಗಲು ಅನುಮತಿ, ಸಮಯ ಕೇಳಿದೆ.

"ದಯವಿಟ್ಟು ಬನ್ನಿ, ನಾನು ಆಫೀಸ್‌ನಲ್ಲಿಯೇ ಇದ್ದೇನೆ" ಅವರ ಧ್ವನಿ ಮೊದಲ ಬಾರಿಗೆ ಫೋನಿನಲ್ಲಿ ಕೇಳಿದೆ. ತಾಸಿನ ನಂತರ ನಾನವರ ಕಾರ್ಯಾಲಯದಲ್ಲಿ ಅವರೊಂದಿಗೆ ಮಾತನಾಡುತ್ತಾ ಕುಳಿತಿದ್ದೆ. ಅವರ ಆತ್ಮೀಯ ಮಾತುಕತೆ, ಗಾಂಭೀರ್ಯ, ದೊಡ್ಡ ಪತ್ರಕರ್ತರೆಂಬ ಯಾವ ಪೊಳ್ಳು ಬಿಂಕ ಬಿಗುಮಾನಗಳಿಲ್ಲದ ಲಂಕೇಶರ ಸರಳತೆ ನನ್ನನ್ನು ಬಹಳ ಇಂಪ್ರೆಸ್ ಮಾಡಿದವು. ಕಾಫಿ ಕುಡಿದು ನಾನು ಅವರ ಕಾರ್ಯಾಲಯದಿಂದ ಹೊರಬಿದ್ದಾಗ ನನಗೆ ಅವರ್ಣನೀಯವಾದ ಖುಷಿ ಎನಿಸಿತ್ತು ದಿಟ್ಟ, ಧೀಮಂತ, ಧೈರ್ಯದ ಆಗರದಂತಿದ್ದ ಅವರ ವಿಶಿಷ್ಟ ವ್ಯಕ್ತಿತ್ವ ಕಂಡು ವಿಸ್ಮಯ ಸಂತಸಗಳ ಸಮ್ಮಿಶ್ರ ಭಾವನೆಗಳಲ್ಲಿ ನಾನು ತೇಲಿ ಹೋದೆ.

ಕ್ರಮೇಣ ನನ್ನ ಅವರ ಭೇಟಿಗಳು ಬೆಳೆದವು. ನಾನು ಬೆಂಗಳೂರಿಗೆ ಬಂದಾಗೊಮ್ಮೆ ಅವರನ್ನು ಕಂಡು ಮಾತಾಡಿ ಹೋಗುತ್ತಿದ್ದೆ. ಒಂದು ಕೈಯಲ್ಲಿ ಪೆನ್ನು ಇನ್ನೊಂದು ಕೈಯಲ್ಲಿ ಸಿಗರೇಟನ್ನು ಉರಿಸಿಕೊಂಡೇ ಲಂಕೇಶ್ ತಮ್ಮ ಚೇಂಬರ್‌ನಲ್ಲಿ ನನಗೆ ಯಾವಾಗಲೂ ಕಾಣಸಿಗುತ್ತಿದ್ದರು. ಮಾತಾಡುತ್ತಲೇ ತಮ್ಮ ಬರಹ ಮುಂದುವರೆಸುವ ಅವರ ಜಾಣ್ಮೆ, ಏಕಾಗ್ರತೆ ವಿಸ್ಮಯಗೊಳಿಸುತ್ತಿತ್ತು ನನ್ನನ್ನು.

ಲಂಕೇಶರದು ಬಹುಮುಖ ಪ್ರತಿಭೆ. ಅವರು ಬಹುಬಾಹುಗಳ ಮಹಾವ್ಯಕ್ತಿ, ಕಾರ್ಯದಲ್ಲಿ ಪರಶುರಾಮನ ಹರಿತ. ನಾಟಕ, ಕಾದಂಬರಿ, ಸಣ್ಣಕತೆ, ಸಾಹಿತ್ಯ ಚಲನಚಿತ್ರ, ಪತ್ರಿಕೋದ್ಯಮ-ಒಂದೊಂದರಲ್ಲಿಯೂ ಲಂಕೇಶರ ಮುದ್ರೆ ಸ್ಪಷ್ಟ ಮತ್ತು ಭದ್ರ. ಅವರ ಪ್ರತಿಭೆ ಅಸಾಧಾರಣ, ಅಗಮ್ಯ ಅದ್ಭುತ. ರಕ್ಕಸ ಪ್ರತಿಭೆ ಅದು! ಇಂದಿನ ಸಮಾಜದಲ್ಲಿ ಕಂಡುಬರುತ್ತಿರುವ ಸಣ್ಣತನ, ಹೇಡಿತನ, ಕ್ರೌರ್ಯ, ರಾಜಕೀಯದಲ್ಲಿನ ಹಲ್ಕಟ್‌ಗಿರಿ, ಮುಖಂಡರಲ್ಲಿಯ ಲುಚ್ಚಾಗಿರಿ, ಅಧಿಕಾರದ ಮದ, ಪ್ರತಿಷ್ಠಾ ಪೂಜೆ, ಮೊದಲಾದವುಗಳನ್ನು ನಿರ್ಭಿಡೆಯಿಂದ ತೀಕ್ಷ್ಣವಾಗಿ ಖಂಡಿಸುವ ಲಂಕೇಶ್ ನನಗೆ ತೀರ ಆತ್ಮೀಯರು. ಅವರು ಸಾಹಸಿ ಗಂಡು. ನೇರವಾದ ನಡೆನುಡಿಯ, ಸ್ವಚ್ಛ ಶ್ರೀಮಂತ ಮನಸ್ಸಿನ, ಉಲ್ಲಾಸ ಪ್ರವೃತ್ತಿಯ ಲಂಕೇಶ್ ಕೆಲವೊಮ್ಮೆ ತುಂಬಾ ಮೃದು; ನಿಸರ್ಗಪ್ರಿಯರೂ ಹೌದು.

ಲಂಕೇಶರ ಜ್ಞಾನ ಬರೀ ಪುಸ್ತಕದ ಬದನೆಕಾಯಿಯಲ್ಲ, ಬರಿಯ ಪದಾನುಕರಣೆಯಲ್ಲ, ಸ್ವತಂತ್ರ ವಿಚಾರ ಶಕ್ತಿ, ಆಲೋಚನಾ ಸಾಮರ್ಥ್ಯ ಮತ್ತು ಸ್ವಂತ ವೀಕ್ಷಣೆಯಿಂದಲೇ ಗಳಿಸಿಕೊಂಡದ್ದು, ಅವರದು ಬಹುಸೂಕ್ಷ್ಮ ಎಕ್ಸರೇ ದೃಷ್ಟಿ. ಅವರು ನಿಷ್ಠುರ ಸತ್ಯವಾದಿಗಳು. ಅಂತೆಯೇ ಕೆಲ ಸುಳ್ಳರಿಗೆ ಅವರೆಂದರೆ ಕಣ್ಣುರಿ, ಹೊಟ್ಟೆಯುರಿ, ರಾಜಕಾರಣಿಗಳಂತೂ ಲಂಕೇಶ್ ಎಂದರೆ ಹಾಸಿಗೆಯಲ್ಲಿಯೂ ನಡುಕ ಹುಟ್ಟಿಸುವ ಭೂತಸ್ವಪ್ನ, ಲಂಕೇಶ್ ನಮ್ಮ ತಲೆಮಾರಿನ ಒಬ್ಬ ಕ್ರಾಂತಿಪುರುಷ.

ರಾಜಕಾರಣಿಗಳ ಕಪಿಮುಷ್ಠಿಯಲ್ಲಿ ಸಿಕ್ಕು ಕನ್ನಡದ ಜನತೆ, ಅದರಲ್ಲಿಯೂ ಅಸಹಾಯಕ, ಮುಗ್ಧ ಬಡ, ದುರ್ಬಲ ವರ್ಗದ ಜನ ಗಾಬರಿಯಿಂದ ಕಕ್ಕಾಬಿಕ್ಕಿಯಾಗಿದ್ದಾಗ, ಕರ್ನಾಟಕದ ಯಾವ ಪತ್ರಿಕೆಯೂ ಈ ಧೂರ್ತ ಭ್ರಷ್ಟ ರಾಜಕಾರಣಿಗಳ ರಕ್ಕಸ ಕುಣಿತದ ವಿರುದ್ಧ ಸ್ಪಷ್ಟವಾಗಿ ದನಿಯೆತ್ತಿ ಬರೆಯದಿದ್ದಾಗ 'ಲಂಕೇಶ್ ಪತ್ರಿಕೆ' ಬರಸಿಡಿಲಿನಂತೆ ರಾಜಕೀಯ ರಂಗದ ಮೇಲೆರಗಿತು. ರಾಜಕಾರಣಿಗಳನ್ನು ಎದುರು ಹಾಕಿಕೊಂಡು ಬದುಕುವುದೆಂದರೆ ಈ ದಿನಗಳಲ್ಲಿ ನೀರಲ್ಲಿದ್ದು ಮೊಸಳೆಗಳೊಂದಿಗೆ ಸೆಣಸಾಡಿದಂತೆ. ಶಾಸಕರು, ಮಂತ್ರಿಗಳು, ಸರ್ಕಾರ, ಆಳುವವರು ಮುಂತಾದವರೆಲ್ಲರ ಕುಂದುಕೊರತೆಗಳನ್ನು ತಪ್ಪು ನಡೆಗಳನ್ನು ಎತ್ತಿ ತೋರಿಸಿ ಅವರನ್ನು ಸರಿದಾರಿಗೆ ತಿರುಗಿಸುವ ಮಾರ್ಗದರ್ಶಕ ಪತ್ರಿಕೆಯೊಂದರ ಕೊರತೆ ಬಹಳ ದಿನಗಳಿಂದ ನಮ್ಮ ರಾಜ್ಯಕ್ಕಿತ್ತು. ಲಂಕೇಶ್ ತುಂಬ ಎದೆಗಾರಿಕೆಯಿಂದ, ಸಾಹಸದಿಂದ ಈ ಕೆಲಸಕ್ಕೆ ಕೈಯಿಟ್ಟು 'ಲಂಕೇಶ್ ಪತ್ರಿಕೆ'ಯನ್ನು ಹೊರತಂದರು. ಪತ್ರಿಕೆ ರಾಜಕಾರಣಿಗಳಿಗೆ ಭೂತಸ್ವಪ್ನವಾದರೆ ಕನ್ನಡದ ಮುಗ್ಧಜನತೆಗೆ ಆಶ್ವಾಸನೆ ಭರವಸೆಗಳ ಅಭಯಹಸ್ತವಾಗಿದೆ!

ಲಂಕೇಶರ ಜನಪ್ರಿಯತೆಯ ಮೂಲ ಎಲ್ಲಿ? ಅವರ ಬರಹಗಳು, ಕಾದಂಬರಿ, ಕತೆಗಳು, ಚಲನಚಿತ್ರ, ಪತ್ರಿಕೆ, ಪ್ರಕಾಶನಗಳು ಬಹಳ ಮಟ್ಟಿಗೆ ಕಾರಣಗಳಾಗಿರಬಹುದು. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಕನ್ನಡದ ಮುಗ್ಧ ಜನತೆಯ ಬಗೆಗಿನ ನೈಜ ಕಳಕಳಿ, ಪ್ರಾಮಾಣಿಕ ಪ್ರೀತಿ, ಎಲ್ಲ ದುಷ್ಟಶಕ್ತಿಗಳ, ಸಮಾಜ ವಿರೋಧಿ ಚಟುವಟಿಕೆಗಳನ್ನು ನಿರ್ಭಯವಾಗಿ ಮತ್ತು ನಿರ್ಭಿಡೆಯಾಗಿ ಖಂಡಿಸುವ ದಿಟ್ಟತನಗಳೇ ಕಾರಣಗಳಾಗಿವೆಯೆನ್ನಬಹುದು. ಕುತಂತ್ರ ಕುಟಿಲೋಪಾಯಗಳನ್ನು ಹದ್ದುಬಸ್ತಿನಲ್ಲಿಡುವ, ಸಜ್ಜನರ ಮೌಲ್ಯಗಳನ್ನು ರಕ್ಷಿಸುವ ಲಂಕೇಶರ ಸರಳತೆ, ಸ್ಪಷ್ಟತೆ ಮತ್ತು ಮನಸ್ಥೈರ್ಯಗಳೂ ಅಷ್ಟೇ ಕಾರಣಗಳಾಗಿವೆ. ಜನಪ್ರಿಯತೆಯ ತುತ್ತತುದಿಯಲ್ಲಿರುವುದು ಅಪಾಯಕರ ಎಂದು ಅವರೇ ಹೇಳುತ್ತಾರೆ!


ಇಷ್ಟೆಲ್ಲ ಇದ್ದರೂ ಲಂಕೇಶ್ ಭಾವನಾಜೀವಿ ಅಲ್ಲವೇನೋ ಎನಿಸುತ್ತದೆ. ಬೇರೆಯವರ ಭಾವನೆಗಳಿಗೆ ಇವರಲ್ಲಿ ಮೌಲ್ಯ ಕಡಿಮೆಯಿರಬಹುದೇ ಎಂಬ ಸಂಶಯವೂ ನನಗೆ ಬಂದಿದೆ. ಇವರ ಅತಿಸ್ಪಷ್ಟತೆ, ನಿರ್ದಾಕ್ಷಿಣ್ಯತೆಗಳು ಒಂದೊಂದು ಸಲ ಇನ್ನೊಬ್ಬರ ಅತ್ಯಂತ ಕೋಮಲವಾದ ಮೃದು ಮಧುರ ಭಾವನೆಗಳನ್ನು ನಿರ್ದಯವಾಗಿ ಘಾಸಿಗೊಳಿಸುವುದು ನನ್ನ ಅನುಭವಕ್ಕೆ ಬಂದ ಅಂಶವಾದರೂ ಪ್ರತ್ಯಕ್ಷವಾಗಿ ಅವರು ಅದಕ್ಕೆ ಹೊಣೆಗಾರರಲ್ಲ ಎನಿಸಿದ್ದೂ ಇದೆ. ಲಂಕೇಶ್ ನನಗೆ ಆತ್ಮೀಯರು. ನನ್ನಲ್ಲಿ ಆತ್ಮವಿಶ್ವಾಸ, ಧೈರ್ಯ ತುಂಬಿಸಿದ ಸಹೃದಯಿ. ಅವರು ಈಗಲೂ ನನಗೆ ಮಾನಸಿಕ 'ಆಸರೆ.' ನೂರಾರು ಮೈಲಿ ಅಂತರದಲ್ಲಿದ್ದರೂ ದುಷ್ಟಶಕ್ತಿಗಳ ವಿರುದ್ಧ ಹೋರಾಡಲು ಧೈರ್ಯ ನೀಡಿ ಹುರಿದುಂಬಿಸುವ ಅತಿ ಹತ್ತಿರದ ವ್ಯಕ್ತಿ!

"ನೀ ಯಾರೋ ಏನೋ ಸಖಾ ನನಗಾಸರೇ...." ಎಂದು ಬರೆದರೆ ಅವರಿಗೆ ಕೋಪ ಬಂದೀತು! ತಮಗರಿಯದಂತೆಯೇ ತಮ್ಮ ಸುತ್ತಮುತ್ತಲಿನವರ ಮೆದುಳು, ಮನಸ್ಸು, ಹೃದಯಗಳಲ್ಲಿ ಬೇರು ಬಿಡುವ ಆಯಸ್ಕಾಂತ ವ್ಯಕ್ತಿತ್ವ ಲಂಕೇಶರದು. ತಾವು ಜನರಿಗಿಷ್ಟು ಹತ್ತಿರವಾಗಿರೋದು ಸ್ವತಃ ಲಂಕೇಶರಿಗೇ ಗೊತ್ತಿರಲಿಕ್ಕಿಲ್ಲ, ಆತ್ಮೀಯತೆ, ಸಹೃದಯತೆಗಳೊಂದಿಗೆ ನಿರ್ದಯತೆಯೂ ಅವರಲ್ಲಿದೆ, ಹೀಗಾಗಿ ಅವರು ನನಗೆ ಆತ್ಮೀಯ ನಿರ್ದಯಿ ಸ್ನೇಹಿತ!


● ಜೆ. ಗೀತಾ ನಾಗಭೂಷಣ

(ಲಂಕೇಶರಿಗೆ ಐವತ್ತು ವರ್ಷಗಳು ತುಂಬಿದಾಗ ಬರೆದ ಲೇಖನ)

ಪ್ರಭಾಕರ್.ಎ.ಎಸ್



ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆಯಷ್ಟು ಸಂಶೋಧನೆಗೆ ಬೇಕಾದ ಪ್ರೇರಣೆ ಕೊಡುವ ಪ್ರದೇಶ ಮತ್ತೊಂದಿಲ್ಲ ಅನಿಸುತ್ತದೆ. ಲಕ್ಷಾಂತರ ಜನ ಸೇರುವ ಮೈಲಾರ, ಕೊಟ್ಟೂರು, ಹಂಪಿಯ ಜಾತ್ರೆಗಳು, ಗತಕಾಲದ ಇತಿಹಾಸದ ಭಾರವನ್ನು ಹೊತ್ತಿರುವ ಹಂಪಿ, ಆಳವಿನಂಚಿನಲ್ಲಿರುವ ದೊಡ್ಡಾಟಗಳು, ತೆಲುಗು ಸಂಕರದ ಕನ್ನಡ ಭಾಷೆ, ಬಾಲಬಸವದಂತಹ ಜನಪದ ಅನುಭಾವಿ ಪರಂಪರೆಗಳು, ಸಂಗನಕಲ್ಲು ಇತ್ಯಾದಿ ಪ್ರಾಗೈತಿಹಾಸಿಕ ಜಾಗಗಳು, ಅಗಸನೂರಿನ ಪ್ರಸಿದ್ಧ ಮೊಹರಂ ಆಚರಣೆ, ಕೋಗಳಿ ಬಾಗಳಿ, ಹಲವಾಗಿಲುಗಳ ಪ್ರಾಚೀನ ಗುಡಿಗಳು, ಉಜ್ಜನಿಯ ಮರುಳಸಿದ್ಧ ಮಠ, ದರೋಜಿ ಈರಮ್ಮನಂತಹ ಜನಪದ ಗಾಯಕರು, ಡಿ.ದುರ್ಗಾದಾಸ್, ಸುಭದ್ರಮ್ಮ ಮನಸೂರರಂತಹ ನಟರು ಮತ್ತು ಗಾಯಕರು, ಕುಂವೀಯಂತಹ ಕತೆಗಾರರು, ಅತಿಯಾಗಿರುವಷ್ಟು ಕೈಗಾರಿಕೀಕರಣ, ಗಣಿಮಾಫಿಯಾ ರಾಜಕೀಯ ಸಂಸ್ಕೃತಿ -ಹೀಗೆ ಇವೆಲ್ಲವೂ ಬೇರೆಬೇರೆ ಕ್ಷೇತ್ರದ ಸಂಶೋಧಕರಿಗೆ ಆಹ್ವಾನ ನೀಡುವ ಸಂಗತಿಗಳಾಗಿವೆ. ಇಂತಹ ಪರಿಸರವಿರುವುದರಿಂದಲೊ ಏನೊ, ಅಧ್ಯಾಪನ ಕೆಲಸದಲ್ಲೇನೂ ಇರದ ಶ್ರೀ ಮುದೇನೂರ ಸಂಗಣ್ಣ, ಗುರುಮೂರ್ತಿ ಪೆಂಡಕೂರು ಮುಂತಾದವರು ಸಹ ಸಂಶೋಧನೆಯ ಕೆಲಸ ಮಾಡಿದರು. ವಿಶೇಷವೆಂದರೆ, ಈ ಭಾಗದ ಹೊಸ ತಲೆಮಾರಿನವರಿಗೆ ಸಂಶೋಧನೆಯಲ್ಲಿ ತೊಡಗಲು ಪ್ರೇರಣೆ ಸಿಕ್ಕಿದ್ದು ಇದೇ ಜಿಲ್ಲೆಗೆ ಸೇರಿದ ಪ್ರಸಿದ್ಧ ಇತಿಹಾಸ ಸಂಶೋಧಕರಾದ ಎಸ್.ಶೆಟ್ಟರ್ ಅವರಿಂದಲ್ಲ; ಬದಲಿಗೆ ಬೇರೆ ಜಿಲ್ಲೆಯಿಂದ ಅಧ್ಯಾಪಕ ವೃತ್ತಿಗಾಗಿ ಇಲ್ಲಿಗೆ ವಲಸೆ ಬಂದಂತಹ ಬಸವರಾಜ ಮಲಶೆಟ್ಟಿ ಮತ್ತು ಎಸ್.ಎಸ್. ಹಿರೇಮಠ ಅವರಿಂದ. ಇವರಿಬ್ಬರೂ ಆಕಸ್ಮಿಕವೆಂಬಂತೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನವರು. ಪ್ರೊ. ಹಿರೇಮಠ ಅವರು ಇಲ್ಲಿನ ಜಾನಪದ ಜಾತ್ರೆ ಶಾಸನಗಳ ಮೇಲೆ ಸಂಶೋಧನೆಗೆ ಸ್ವತಃ ತೊಡಗಿದರು ಮಾತ್ರವಲ್ಲ, ತಮ್ಮ ಸಂಶೋಧನೆಯ ಹುಚ್ಚನ್ನು ಶಿಷ್ಯರಿಗೂ ಹತ್ತಿಸಿದರು. ಪಾಂಡಿತ್ಯವೂ ಜನಪರ ಹೋರಾಟಗಳೂ ಒಟ್ಟಿಗೆ ಬೆಸೆದುಕೊಳ್ಳುವ ಆಕ್ಟಿವಿಸ್ಟ್ ಮಾದರಿಯೊಂದನ್ನು ಅವರು ರೂಪಿಸಿದರು. ಈ ಮಾದರಿಯನ್ನು ಅವರ ಶಿಷ್ಯರಲ್ಲಿ ಕೆಲವರಷ್ಟೇ ಮುಂದುವರೆಸಿದರು. ಅವರಲ್ಲಿ ತರುಣ ವಿದ್ವಾಂಸರಲ್ಲಿ ಒಬ್ಬರಾಗಿರುವ ಎ.ಎಸ್. ಪ್ರಭಾಕರ್ ಒಬ್ಬರು.



ಹರಪನಹಳ್ಳಿ ತಾಲೂಕಿನ ಒಂದು ಪುಟ್ಟಗ್ರಾಮದಿಂದ ಪ್ರಭಾಕರ್, ತಮ್ಮ ಗುರುವಿನ ತರಹ ಕನ್ನಡ ಸಾಹಿತ್ಯದ ವಿದ್ಯಾರ್ಥಿಯಾಗಿದ್ದುಕೊಂಡೇ, ಸಮಾಜವಿಜ್ಞಾನದ ಕ್ಷೇತ್ರದಲ್ಲಿ ಸಂಶೋಧನೆ ಮಾಡಲು ಹೊರಳಿಕೊಂಡವರು. ಕರ್ನಾಟಕ ಇತಿಹಾಸ ಸಂಶೋಧನೆಗಳಲ್ಲಿ ಮೊದಲಿನಿಂದಲೂ ಸಾಹಿತ್ಯದ ಹಿನ್ನೆಲೆಯವರು ಮುಂಚೂಣಿಯಲ್ಲಿ ಇರುವುದು ಸರ್ವವಿದಿತ. ಈಚೆಗೆ ಕನ್ನಡ ಸಾಹಿತ್ಯದ ಹಿನ್ನೆಲೆಯವರು ಮಾನವಶಾಸ್ತ್ರ ಜಾನಪದ, ಸಮಾಜವಿಜ್ಞಾನ ಹಾಗೂ ಬುಡಕಟ್ಟು ಅಧ್ಯಯನಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪ್ರವೇಶಿಸುತ್ತಿದ್ದಾರೆ. ಮಾತ್ರವಲ್ಲ, ಈ ಶಿಸ್ತುಗಳನ್ನು ಶಾಸ್ತ್ರಬದ್ಧವಾಗಿ ಕಲಿತವರಿಗಿಂತ ಭಿನ್ನಬಗೆಯಲ್ಲಿ ಕೆಲಸವನ್ನೂ ಮಾಡುತ್ತಿದ್ದಾರೆ. ಪ್ರಭಾಕರ್ ಈ ಸಾಲಿನಲ್ಲಿ ಸೇರುವಂಥವರು.

ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ವಿಭಾಗದಲ್ಲಿ ಅಧ್ಯಾಪಕರಾಗಿರುವ ಪ್ರಭಾಕರ್, ತಮ್ಮನ್ನು ಬುಡಕಟ್ಟು ಸಂಶೋಧನೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಅವರು 'ಬುಡಕಟ್ಟು ಅಧ್ಯಯನ' ಪತ್ರಿಕೆಯನ್ನು ಚೆನ್ನಾಗಿ ಸಂಪಾದನೆ ಮಾಡಿದ್ದಾರೆ; ಮೂರು ಕೃತಿಗಳನ್ನು ಪ್ರಕಟಿಸಿದ್ದಾರೆ. ಅವೆಂದರೆ- 1. 'ಮ್ಯಾಸಬೇಡರ ಕಥನಗಳು' (1999). ಇದು ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರು ಹಾಡುವ ಹಾಡುಗಳ ಸಂಗ್ರಹ; 2. 'ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು' (2000). ಇದು ಅವರ ಬುಡಕಟ್ಟು ಅಧ್ಯಯನ ಕುರಿತ ಲೇಖನಗಳ ಸಂಗ್ರಹ; 3.ಆದಿವಾಸಿ ಆಖ್ಯಾನ (2006). ಇದು ಬುಡಕಟ್ಟು ಅಧ್ಯಯನಗಳಿಗೆ ಸಂಬಂಧಿಸಿದಂತೆ ಬೇರೆಬೇರೆಯವರು ಬರೆದ ಲೇಖನಗಳುಳ್ಳ ಒಂದು ಆಕರಗ್ರಂಥ. ಇದಲ್ಲದೆ ಪ್ರಭಾಕರ್ ಅವರು ಮಹತ್ವದ ಲೇಖನಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಆದಿವಾಸಿಗಳ ಮೇಲೆ ಅಂಬೇಡ್ಕರ್ ಮಾಡಿರುವ ಚಿಂತನೆ, ಕರ್ನಾಟಕದ ಅಲೆಮಾರಿ ಸಮುದಾಯಗಳ ಶಾಪಗ್ರಸ್ತ ಪಯಣ, ಬಂಗಾಳದ ಲೇಖಕಿ ಮಹಾಶ್ವೇತಾ ದೇವಿಯವರ ಆದಿವಾಸಿಪರ ಹೋರಾಟಗಳು, ಚಿಂತನೆ, ಭಾರತ ಸರ್ಕಾರದ ಆದಿವಾಸಿ ನೀತಿ ಹಾಗೂ ಕರ್ನಾಟಕದ ಆದಿವಾಸಿ ರೈತಹೋರಾಟಗಳ ಸ್ವರೂಪ ಕುರಿತ ಲೇಖನಗಳು ಸೇರಿವೆ. ಇವುಗಳಲ್ಲೆಲ್ಲ ಸಮುದಾಯ ಅಧ್ಯಯನಗಳಲ್ಲಿ ಒಳಗಿನವರಾಗಿ ಪ್ರವೇಶಿಸುವುದು ಹೇಗೆ ಎಂಬ ವಿಷಯ ಕುರಿತು ಚರ್ಚೆ ಮಾಡಿರುವ ಲೇಖನ ಮುಖ್ಯವಾಗಿದೆ. ಈ ಎಲ್ಲ ಲೇಖನಗಳು ಸಂಕಲನಗೊಂಡು ಪುಸ್ತಕರೂಪದಲ್ಲಿ ಬಂದರೆ, ಅವು ಪ್ರಭಾಕರ್ ಎಂತಹ ಗಂಭೀರ ಮತ್ತು ಪ್ರಾಮಾಣಿಕ ವಿದ್ವಾಂಸ ಎಂಬುದು ಮತ್ತಷ್ಟು ರುಜುವಾತಾಗುತ್ತದೆ.

ಕನ್ನಡದಲ್ಲಿ ತಮ್ಮನ್ನು ನಿರ್ದಿಷ್ಟ ಕ್ಷೇತ್ರಕ್ಕೆ ಸೀಮಿತಗೊಳಿಸಿಕೊಂಡು ಫೋಕಸ್ಡಾದ ಅಧ್ಯಯನಗಳನ್ನು ಮಾಡುವ ಪ್ರವೃತ್ತಿ ಕಡಿಮೆಯಾಗುತ್ತಿರುವ ಹೊತ್ತಲ್ಲಿ, ಪ್ರಭಾಕರ್. ಬುಡಕಟ್ಟು ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು, ಅದಕ್ಕೆ ತಮ್ಮನ್ನು ಮೀಸಲಿರಿಸಿಕೊಂಡಿದ್ದಾರೆ. ಬುಡಕಟ್ಟು ಅಧ್ಯಯನವು ಮೇಜಿನ ಮುಂದೆ ಕುಳಿತು ಮಾಡುವಂತಹದ್ದಲ್ಲ, ಅದು ಆಕರ್ಷಕವಾಗಿರುವಷ್ಟೇ ಕಠಿಣವಾಗಿದೆ. ಅದು ಸಮುದಾಯಗಳ ಜತೆ ನೇರ ಒಡನಾಟವನ್ನು ಅಪೇಕ್ಷಿಸುತ್ತದೆ. ತಿರುಗಾಟವನ್ನು ಬೇಡುತ್ತದೆ. ಈ ತೊಡಕಿನ ಹಾದಿಯನ್ನು ಬೇಕೆಂದೇ ಆರಿಸಿಕೊಂಡಿರುವ ಪ್ರಭಾಕರ್ ಕರ್ನಾಟಕದ ಬುಡಕಟ್ಟು ಹಾಡಿಗಳನ್ನೆಲ್ಲ ತಿರುಗಾಡಿದ್ದಾರೆ. ಹಾಲಕ್ಕಿಗಳು, ಹಕ್ಕಿಪಿಕ್ಕಿಯರು, ಜೇನುಕುರುಬರು, ಕಾಡುಕುರುಬರು, ಗೌಡ್ಲುಗಳು, ಹಸಲರು ಮುಂತಾದ ಸಮುದಾಯಗಳ ಜತೆ ಒಡನಾಟ ಇಟ್ಟುಕೊಂಡಿದ್ದಾರೆ.

ಪ್ರಭಾಕರ್ ಬರೆಹಗಳಲ್ಲಿ ವ್ಯಾಪಕ ಓದಿನಿಂದ ಒದಗಿಬಂದಿರುವ ವಿದ್ವತ್ತು ಎದ್ದುಕಾಣುತ್ತದೆ. ಆದರೆ ಇಲ್ಲಿನ ವಿದ್ವತ್ತಿಗಿಂತ ಮುಖ್ಯವಾಗಿರುವುದು ಬುಡಕಟ್ಟು ಸಮುದಾಯಗಳ ವರ್ತಮಾನದ ತಲ್ಲಣಗಳನ್ನು ಕುರಿತು ಅವರಿಗಿರುವ ಕಾಳಜಿ; ಜನರ ಭವಿಷ್ಯತ್ತನ್ನು ಕಟ್ಟುವ ಕುರಿತು ಅವರಿಗಿರುವ ಕನಸುಗಳು. ಈ ಹಿನ್ನೆಲೆಯಲ್ಲಿ ಪ್ರಭಾಕರ್ ಸಂಶೋಧನೆಯು ವೃತ್ತಿ ಅಥವಾ ಹವ್ಯಾಸದ ಸಂಗತಿಯಲ್ಲ, ಅದು ಸಾಮಾಜಿಕ ಬದ್ಧತೆಯ ವಿಷಯವಾಗಿದೆ. ಈ ಮಾತನ್ನು ಕೊಂಚ ವಿವರಿಸಬೇಕು.

ಕರ್ನಾಟಕ ಬುಡಕಟ್ಟು ಅಧ್ಯಯನ ಕ್ಷೇತ್ರದಲ್ಲಿ ಇರುವ ಮುಖ್ಯ ಸಮಸ್ಯೆಯೆಂದರೆ, ಅಲ್ಲಿ ಬಳಕೆಯಲ್ಲಿರುವ ಸಾಂಪ್ರದಾಯಕ ಅಧ್ಯಯನ ವಿಧಾನದ್ದು. ಈ ವಿಧಾನದಲ್ಲಿ ಬ್ರಿಟಿಷರು ರೂಪಿಸಿದ ಜನರನ್ನು ಅಪರಿಚಿತ ವಸ್ತುಗಳಂತೆ ನೋಡುವ ಮಾಹತುಶಾಹಿ ಜನಾಂಗಿಕ ಗರ್ವದ ದೃಷ್ಟಿಕೋನವೂ; ಜನರನ್ನು ಅನಾಗರಿಕರು ಎಂಬಂತೆ ನೋಡುವ ಉಚ್ಚಜಾತಿಗಳ ದೃಷ್ಟಿಕೋನವೂ, ಜನರ ಅಭಿಪ್ರಾಯವನ್ನೇ ಕೇಳದೆ ಅವರ ಮೇಲೆ ಅಭಿವೃದ್ಧಿಯ ಮಾದರಿಗಳನ್ನು ಹೇರುವ ಆಧುನಿಕ ಪ್ರಭುತ್ವಗಳ ಏಕಪಕ್ಷೀಯ ನಿಲುವೂ ಸೇರಿವೆ. ಪ್ರಭಾಕರ್ ತಮ್ಮ ಅಧ್ಯಯನಗಳ ಉದ್ದಕ್ಕೂ, ಈ ಮೂರು ವಿಧಾನಗಳಲ್ಲಿರುವ ದೃಷ್ಟಿಕೋನದ ಜತೆ ಜಗಳ ಮಾಡುತ್ತಾರೆ. ಇವುಗಳ ಒಳಗಿರುವ ಅಮಾನುಷ ದೃಷ್ಟಿಕೋನವನ್ನು ಹೊರಗೆಳೆಯುತ್ತಾರೆ. ಇವುಗಳಿಗೆ ಪರ್ಯಾಯವಾದ ಅಧ್ಯಯನ ವಿಧಾನವನ್ನು ರೂಪಿಸಲು ಸಹ ಯತ್ನಿಸುತ್ತಾರೆ. ಅಧ್ಯಯನಗಳಲ್ಲಿ ಪರ್ಯಾಯ ಅಧ್ಯಯನ ವಿಧಾನ ಹುಡುಕುವುದು ಕೇವಲ ಅಕಡಮಿಕ್ ಚಟುವಟಿಕೆಯಲ್ಲ, ಅದು ಮನುಷ್ಯರ ನೋವುನಲಿವುಗಳನ್ನು ಸಂಗಾತಿಯಾಗಿ ಅನುಭವಿಸುವ ಹೊಸತತ್ವದ ಹುಡುಕಾಟ ಕೂಡ.

ಇದರ ಜತೆಗೆ ಪ್ರಭಾಕರ್, 'ನಮ್ಮ ಪರಂಪರೆ ಸಂಸ್ಕೃತಿಯ ವೈವಿಧ್ಯತೆ ಉಳಿಯಬೇಕು' ಎಂದು ಪ್ರತಿಪಾದಿಸುವ ಪ್ರಗತಿಪರ ಸಂಸ್ಕೃತಿ ಚಿಂತಕರನ್ನು ವಿಮರ್ಶೆಗೆ ಒಳಪಡಿಸುತ್ತಾರೆ. ತಮ್ಮ ಕುಲಕಸುಬಿನ ಕಾರಣಕ್ಕಾಗಿಯೇ ಹೀನಾಯವಾದ ಸಾಮಾಜಿಕ ಅವಮಾನ ಅನುಭವಿಸುತ್ತಿರುವ ಸಮುದಾಯಗಳು ತಮ್ಮ ಪಾರಂಪರಿಕ ವೃತ್ತಿಗಳ ಕುರಿತು ಏನೆಂದು ಭಾವಿಸಿವೆ ಎಂಬ ಪ್ರಾಥಮಿಕ ಪ್ರಶ್ನೆಯನ್ನು ಕೇಳಿಕೊಳ್ಳದೆ, ತಮ್ಮ ಫರಮಾನುಗಳನ್ನು ಹೇರುವ ಚಿಂತಕರ ಬಗ್ಗೆ ಅವರು ಆಕ್ರೋಶ ವ್ಯಕ್ತಪಡಿಸುತ್ತಾರೆ. ಇದನ್ನು ಬುದ್ಧಿಜೀವಿಗಳ ಮೂಲಭೂತವಾದ ಎಂದು ಕರೆಯುತ್ತಾರೆ. ಹೀಗೆ ಮೂಲಭೂತ ಪ್ರಶ್ನೆಗಳನ್ನು ಎತ್ತಲು ಮತ್ತು ಆಕ್ರೋಶ ವ್ಯಕ್ತಮಾಡಲು ಕಾರಣ, ಪ್ರಭಾಕರ್ ಅವರಿಗೆ ಸಮುದಾಯಗಳ ಸಂಸ್ಕೃತಿಯ ಅನನ್ಯತೆಗಿಂತ ಅವುಗಳ ಅಸ್ತಿತ್ವ ಮತ್ತು ಸ್ವಾಭಿಮಾನದ ಪ್ರಶ್ನೆ ಮುಖ್ಯವಾಗಿರುವುದು; ಸಮುದಾಯಗಳ ಬದುಕಿನಲ್ಲಿ ಅರ್ಥಪೂರ್ಣವಾದ ಸಾಮಾಜಿಕ ಆರ್ಥಿಕ ಬದಲಾವಣೆಗಳು ಸಂಭವಿಸಬೇಕು ಎಂಬ ಒತ್ತಾಸೆ ಇರುವುದು; ಸ್ವತಃ ಅವರು ಕರ್ನಾಟಕದ ಮೈಕ್ರೋಸ್ಕೋಪಿಕ್ ಗಾತ್ರವುಳ್ಳ ದಮನಿತ ಸಮುದಾಯದಿಂದ ಬಂದಿರುವುದು ಕೂಡ.

ಸಮಾಜವಿಜ್ಞಾನದ ಅನೇಕ ವಿದ್ವಾಂಸರು ಇವತ್ತು ಕನ್ನಡದಲ್ಲಿ ಬರೆಯಲು ಯತ್ನಿಸುತ್ತಿದ್ದಾರೆ. ಅವರ ಚಿಂತನೆಗಳು ಆರೋಗ್ಯಕರವಾಗಿವೆ. ಆದರೆ ಅವರಲ್ಲಿ ಅನೇಕರಿಗೆ ಸರಳವಾಗಿ ಅರ್ಥವಾಗುವ ಮತ್ತು ಓದುಗರ ಜತೆ ಸಂವಾದ ಮಾಡಬಲ್ಲ ಭಾಷೆಯನ್ನು ರೂಪಿಸಿಕೊಳ್ಳಲು ಆಗಿಲ್ಲ. ಈ ಹಿನ್ನೆಲೆಯಲ್ಲಿ ಪ್ರಭಾಕರ್ ತಮ್ಮ ಬರೆಹದಲ್ಲಿ ರೂಢಿಸಿಕೊಂಡಿರುವ ಭಾಷೆಯು ಸ್ಪಷ್ಟತೆ ಮತ್ತು ಸರಳತೆಯಿಂದ ಕೂಡಿದ್ದು ಪರಿಣಾಮಕಾರಿಯಾಗಿದೆ.

ಆದರೆ ಅತಿದೀರ್ಘತೆ ಅವರ ಲೇಖನಗಳ ಮುಖ್ಯ ಲಕ್ಷಣವಾಗಿದೆ. ಇದು ಅಧ್ಯಯನದ ಬಲವನ್ನು ಸೂಚಿಸುವ ಅಂಶವಾಗಿದೆ. ಆದರೂ ತಮ್ಮ ದೀರ್ಘತೆಯ ಕಾರಣದಿಂದಲೇ ಈ ಲೇಖನಗಳು ಗಂಭೀರ ಓದುಗರ ಸೊತ್ತಾಗಿ ಉಳಿದುಬಿಡುವ ಸಾಧ್ಯತೆಯಿದೆ. ಜೀವಂತ ಸಮುದಾಯಗಳ ಬಾಳಿಗೆ ನೇರವಾಗಿ ಸಂಬಂಧಿಸಿದ ಉರಿಯುವ ಸಮಸ್ಯೆಗಳನ್ನು ಚರ್ಚಿಸುವ ಎಲ್ಲರೂ, ತಮ್ಮ ವಿದ್ವತ್‌ವಿಶ್ಲೇಷಣೆಗಳ ಜತೆಯಲ್ಲಿ, ತಮ್ಮ ಚಿಂತನೆಯನ್ನು ಪುಟ್ಟ ಬರೆಹಗಳ ರೂಪದಲ್ಲಿ ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟಿಸುವ ಅಗತ್ಯವೂ ಇದೆ. ಈ ಪುಟ್ಟಲೇಖನಗಳು ಸಕಾಲಿಕವಾಗಿರುತ್ತವೆ ಮತ್ತು ಜನಾಭಿಪ್ರಾಯ ರೂಪಿಸುತ್ತವೆ.

ಕರ್ನಾಟಕದಲ್ಲಿ ಬಹಳ ಕೆಲಸ ಆಗಬೇಕಿರುವ ಕ್ಷೇತ್ರಗಳಲ್ಲಿ ಬುಡಕಟ್ಟು ಅಧ್ಯಯನವೂ ಒಂದು. ಬುಡಕಟ್ಟುಗಳು ಸೀಮಿತ ಪ್ರದೇಶಕ್ಕೆ ಬದ್ಧವಾಗಿ ವಾಸಿಸುವ ಸಮುದಾಯಗಳಾದರೆ, ಅವರನ್ನು ಕುರಿತ ಅಧ್ಯಯನಗಳು ಜಾಗತಿಕ ನೆಲೆಯಾಗಿವೆ. ಇದೊಂದು ಬಗೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತಿಳಿವಳಿಕೆ ಹಂಚಿಕೊಳ್ಳುವ ಕ್ಷೇತ್ರ. ಈ ಹಿನ್ನೆಲೆಯಿಂದ ಜಗತ್ತಿನ ಅನೇಕ ವಿದ್ವಾಂಸರ ಚಿಂತನೆಯ ಜತೆಗೆ ಸಂಶೋಧಕರು ಒಡನಾಡಲು ಮಾಡಿರುವ ಯತ್ನವನ್ನು ಗಮನಿಸಬಹುದು. ಆದರೆ ಪ್ರಭಾಕರ್ ಚರ್ಚಿಸುವ ಚಿಂತಕರಲ್ಲಿ ಇಷ್ಟಪಟ್ಟು ಒಪ್ಪುವ ಮತ್ತು ಇಷ್ಟಪಡದೆ ನಿರಾಕರಿಸುವ ಎರಡು ವಿಭಾಗಗಳಿವೆ. ಅವರು ತಮಗೆ ಪ್ರಿಯವಾದ ಚಿಂತಕರನ್ನು ಮನಸಾ ಅಪ್ಪಿಕೊಂಡು ಅವರ ಆಲೋಚನೆಗಳನ್ನು ಪರಿಚಯಿಸುತ್ತಾರೆ ಮತ್ತು ವಿಸ್ತರಿಸುತ್ತಾರೆ. ಅವರ ಜತೆ ಭಿನ್ನಮತವಿಟ್ಟುಕೊಂಡು ಜಗಳಕ್ಕೆ ತೊಡಗುವುದಿಲ್ಲ. ಆದರೆ ತಮ್ಮ ಪ್ರಿಯ ಚಿಂತಕರಲ್ಲೂ ಇರುವ ಸಮಸ್ಯೆಗಳನ್ನು ಗುರುತಿಸುವ ಮತ್ತು ವಿಮರ್ಶಿಸುವ ಎಚ್ಚರವನ್ನು ಪಡೆದುಕೊಳ್ಳುವುದು ಕೂಡ ಸಂಶೋಧನೆಯಲ್ಲಿ ಮುಖ್ಯವಾದುದು. ಪ್ರಭಾಕರ್ ಬರೆಹದಲ್ಲಿ ಸ್ಥಾಪಿತ ಸಂಪ್ರದಾಯವಾದಿ ಚಿಂತನೆಗಳ ವಿರುದ್ಧ ಮಾಡಿರುವ ಕಟುಟೀಕೆ ಸಾಕಷ್ಟಿವೆ. ಇದು ಹೊಸದನ್ನು ಹುಟ್ಟಿಸುವ ಎಲ್ಲರೂ ಮಾಡಬೇಕಾದ ಕೆಲಸ. ಆದರೆ ನಿರಾಕರಿಸುವ ಕೆಲಸದಷ್ಟೇ ಪ್ರಮಾಣದಲ್ಲಿ ಪರ್ಯಾಯ ಚಿಂತನೆಗಳನ್ನು ಮುಂದಿಡುವ ಕೆಲಸ ನಡೆಯದೆ ಹೋದರೆ, ಅದೊಂದು ನೇತ್ಯಾತ್ಮಕ ಬರೆಹವಾಗಿಬಿಡುತ್ತದೆ. ದಂಗೆಗಳಿಗೆ ಅರ್ಥ ಬರುವುದು ಬದಲಿಗಳನ್ನು ಮಂಡಿಸುವುದರ ಮೂಲಕವೇ ಹೊರತು ಕೇವಲ ಪ್ರತಿರೋಧದಿಂದಲ್ಲ.


ಈ ಹೊತ್ತು ಭಾರತದ ನಾಗರಿಕ ಸಮಾಜದ ಅತಿಹೆಚ್ಚು ದೌರ್ಜನ್ಯಕ್ಕೆ ಒಳಗಾಗಿರುವುದು ಕಾಡು, ನದಿ ಮತ್ತು ಆದಿವಾಸಿಗಳು. ಉಳ್ಳವರಿಗೆ ತನ್ನದನ್ನು ಬಿಟ್ಟುಕೊಡುವ ಉದ್ಯಮನೀತಿ, ಪ್ರವಾಸನೀತಿ, ಗಣಿನೀತಿ, ಅರಣ್ಯನೀತಿಗಳು ಆದಿವಾಸಿಗಳ ಬಾಳನ್ನು ಕಂಗೆಡಿಸಿಬಿಟ್ಟಿವೆ. ಕರ್ನಾಟಕದಲ್ಲಿಯೇ ಉತ್ತರಕನ್ನಡ ಮಲೆನಾಡುಗಳ ಆದಿವಾಸಿ ಬದುಕು ಅತಂತ್ರವಾಗಿದೆ. ಅವರು ಹೋರಾಟವನ್ನೂ ಮಾಡುತ್ತಿದ್ದಾರೆ. ಅವರ ಹೋರಾಟಗಳನ್ನು ಪ್ರಭುತ್ವ ಹತ್ತಿಕ್ಕುತ್ತಿದೆ. ಇಂತಹ ವಿಷಮ ಸನ್ನಿವೇಶದಲ್ಲಿ ಬುಡಕಟ್ಟು ಅಧ್ಯಯನಕಾರರ ಮುಂದೆ ಇರುವುದು ಅಧ್ಯಯನ ಮಾಡುವ ವಸ್ತುಗಳಲ್ಲ, ಬದುಕಲು ಹೋರಾಡುತ್ತಿರುವ ಜೀವಂತ ಜನರು. ಈ ವಾಸ್ತವವೇ ಈ ಕ್ಷೇತ್ರದಲ್ಲಿ ಕೆಲಸ ಮಾಡುವವರ ಮುಂದೆ ಇರುವ ವಿಪುಲ ಅವಕಾಶ ಮತ್ತು ಸವಾಲು. ಪ್ರಭುತ್ವ ಮತ್ತು ಅದರ ಅಭಿವೃದ್ಧಿ ನೀತಿಗಳ ವಿಮರ್ಶಕರೂ ರಾಜಕೀಯ ಪ್ರಜ್ಞೆಯುಳ್ಳವರೂ ಆದ ಪ್ರಭಾಕರ್ ತರಹದ ಚಿಂತಕರು ಈ ಸವಾಲನ್ನು ಕೈಗೆತ್ತಿಕೊಳ್ಳುತ್ತಿರುವುದು ಉಚಿತವಾಗಿದೆ. ●

ಗಾಯಗೊಳಬಾರದು ಪಾರಿವಾಳ

ಶಾಂತಿ ಸಾರುವ ಪಾರಿವಾಳದ
ಮೈಯ ತುಂಬಾ ಗಾಯಗಳು
ಹಾರಲಾಗದು ಎಲ್ಲೂ
ಕುಳಿತಲ್ಲೆ ದೊಡ್ಡ ಮಾತು
ಖಾಲಿಯಾಗಿದೆ ಬಲು ಜತನದಿ
ತೆಗೆದಿರಿಸಿದ್ದ ಮುಲಾಮು ಡಬ್ಬ
ಸವರಲಾಗದೆ ಬಂದೂಕು,
ರೈಫಲ್ಲುಗಳ ಟ್ರಿಗರ್ ಸರಾಗ ಚಲನೆಗೆ

ಎಂದೊ ಕಲಿತ ಶಾಂತಿ ಮಂತ್ರ
ಮರೆತುಹೋಗಿದೆ ಪಾರಿವಾಳಕ್ಕೆ
ಆದರದೇನು ತಪ್ಪಿಲ್ಲ ಪಾಪ!
ನೂರು ಕ್ರಾಂತಿಗಳ ಇತಿಹಾಸ
ಪುಟಪುಟ ತಿರುವಿದರೂ
ಮತ್ತೊಂದು ಹೊಸಕ್ರಾಂತಿ, ಹೊಸ ಪಾಠ
ಹೊಸ ಪುಟ ತೆರೆಯುವಾಸೆ
ಸೋತಿಲ್ಲ ಕೈಗಳು; ದಣಿದಿಲ್ಲ ಕಣ್ಣುಗಳು

ಕಪ್ಪು ಕ್ರಾಂತಿಯ ಫಲವಾಗಿ
ಓದಲು, ಬರೆಯಲು
ಕಣ್ಣೆರಡು ಸಂಧಿಸುವ ಜಾಗೆಯಲಿ
ಇದೀ ಜಗವ ಕ್ಲಿಕ್ಕಿಸುವುದ ಕಲಿತ
ಹುಡುಗನಿಗೆ ಪಾರಿವಾಳವೆಂದರೆ
ಡವ್; ಡವ್ ಎಂದರೆ ಸೋಪು, ಶಾಂಪೂ
ಹೊದಿಕೆ, ಹಾಸಿಗೆ, ಮತ್ತೇರಿಸುವ ಮದಿರೆ,
ಟೋಪಿ ಹಾಕುವ ಶೇರು ಕಂಪೆನಿ,
ಮಂದ ಬೆಳಕಿನ ಮೋಜಿನಾಟಕೆ
ಕಟ್ಟಿಕೊಂಡ ದುಷ್ಟ ಕಂಪೆನಿ...



ಇತ್ಯಾದಿ... ಇತ್ಯಾದಿ...

'ಇತಿಹಾಸ ಮರುಕಳಿಸುತ್ತೆ'
ಒಂದು ಮಾರ್ಕಿನ ಪ್ರಶ್ನೋತ್ತರಕೆ
ತಲೆ ಕೆಡಿಸಿಕೊಂಡವರಿಲ್ಲ ಇಲ್ಲಿ
'ಯುದ್ಧ'ವೆಂದರೆ ಕೆಲವರ ಪಾಲಿಗೆ
ಮೂರು ತಾಸಿನ ಸಿನಿಮಾ ನೋಡಿ
ಬಿಟ್ಟ ಒಂಟಿ ನಿಟ್ಟುಸಿರು,
ಹಿತವಾದ ಮೈಮುರಿತ

ಯುದ್ಧ ಹೆದ್ದೊರೆಯ ನಾಡಲ್ಲಿ
ಬಾಂಬು ತಯಾರಿಕೆ ಗುಡಿಕೆಲಸ
ದೊರೆಯ ಕನಸಲ್ಲಿ ಯುದ್ಧ ಕನವರಿಕೆ
ಕತ್ತಲು ಚೆಲ್ಲಿದಂತೆ ರಕ್ತ

ಸೂರ್ಯಕಿರಣಗಳ ಹೊಳಪಿಗೆ
ಜಗದ ಜನರ ಎಲುಬುಗಳ ಬಿಳುಪು

ತುಕ್ಕು ಹಿಡಿಯಬಾರದೆ ಬಂದೂಕು,
ಬಾಂಬು ಉಗುಳುವ ಕಾರ್ಖಾನೆಗಳ ಬಾಯಿಗೆ
ಪುಸ್ತಕ, ಕಟ್ಟಿಗೆ ತಿನ್ನುವುದ ಸಾಕು
ಹೋಗಿರೆ ಗೆದ್ದಿಲ ಗೆಳೆಯರೆ
ಅವನು ಬರೆಯಲಿರುವ ಹೊಸ ಪಾಠ
ಹೊಸ ಪುಟವನು ಬಿಡದೆ ತಿಂದು ತೇಗಿರೇ


ಗಾಯಗೊಳಬಾರದು ನಮ್ಮ
ಎದೆಗೂಡಲಿರುವ ಪಾರಿವಾಳ

● ಕಲಿಗಣನಾಥ ಗುಡದೂರು

ಮುತಾಲಿಕ್ಕನ ಮುಸುಡಿಗೆ ಮಸಿ ಬಳುದೋರ್‍ಯಾರ್ಲ

ದೇವೇಗೌಡರು ರೈತ ಹೋರಾಟವನ್ನು ಕೇಂದ್ರೀಕರಿಸಿ ಎಡೂರಪ್ಪನ ...ಲೆ ಯುದ್ಧ ಸಾರುತ್ತಿರುವ ಸುದ್ದಿ ಕೇಳಿದ ಕಾಳಮಾವ ತೀರಾ ಅಭಿಮಾನದಿಂದ, "ಈ ಟೇಮಲ್ಲಿ ದ್ಯಾವೇಗೌಡನೆ ಇಲ್ದೆಯಿದ್ರೆ ರೈತರ ಎರುಬಡಕಂಡು ...ದಾಕೋರು ಕಂಡ್ಯ" ಎಂದ.

"ಅಂಗೆ ನೋಡಿದ್ರೆ ಎಡೂರಪ್ಪನೂ ರೈತರ ಪರ ಹೋರಾಟ ಮಾಡ್ತವುನೆ ...ೂ ಮಾವ. ರೈತರ ಸಮಾವೇಶ ಮಾಡ್ತವುನೆ, ಹಲ್ಲುಜ್ವಾಳ ಖರೀದಿ ...ಡಿ ಅಂತ ಧರಣಿ ಮಾಡ್ತವುನೆ, ಅದ್ಕಲ್ಲ ಯಾಕಪ್ಪ ಈ ರಾಜ್ಯದಲ್ಲಿ ...ುರು ಶಾಲೊದ್ಕಂಡು ರೈತರ ಹೆಸರಲ್ಲಿ ಪ್ರಮಾಣ ಮಾಡಿರೋನು ಅವುನೆಯ" ...ದ ಉಗ್ರಿ.



"ಅದೇ ಕಂಡ್ಯ ತೆಪ್ಪಾಗಿದ್ದು, ಬೈಸಿಗಳಕ್ಕೆ ಒಂದು ದಾರಿ ಮಾಡಿಕಂಡ ...ಗ" ಎಂದ ಸೀರ.

"ಅಂಗೆ ನೋಡಿದ್ರೆ ಎಡೂರಪ್ಪನ ಕ್ಯಲಸಗಳ್ಯಲ್ಲ ಬೈಸಿಗಳೋ ತರನೇ ಅವೆ ...ಾ. ನೋಡಾಗ್ಲೆ ಅದ್ಯಾವುದೊ ಲಿಂಗಾಯಿತರ ಮಠಕೆ ಒಂದು ಕೋಟಿ ...ತ್ತಿನಿ ಅಂದವುನೆ."

"ಒಂದು ಕೋಟಿ ಎಲ್ಲಿಂದ ತಂದನಂತೆ?"

"ಅವುರಪ್ಪನ ಮನಿಂದ ತರದಿಲ್ಲ, ಸರಕಾರದಿಂದ್ಲೆ ಕೊಡ್ತನೆ."

"ಅವುರಪ್ಪನ ಮನಿಂದ ಕೊಡದಾಗಿದ್ರೆ ಸಿಕಾರಿಪುರಕ್ಯಾಕೊಯ್ತಿದ್ದಾ."

"ಅದೆಯಪ್ಪ ನಾನೇಳದು. ಯಾವ ಮಠನೂ ಇವುನತ್ರಕೆ ಬಂದು ಕೈಚಾಚಿಲ್ಲ, ...ದ್ರಲ್ಲಿ ಏಕದಂ ಕೋಟಿ ಕೋಟಿ ಅಂತ ಕೊಡತ ಹೋದ್ರೆ ಇವುನಿಗೇನೊ ...ದದೆ ಅಂತರೆ. ಇಲ್ಲ ಬ್ಯಾರೆ ಮಠದೋರು ಕರದು ಸನುಮಾನ ಮಾಡಿ ...ಗೂ ಏನಾರ ಕೊಡಪ್ಪ ಅಂತರೆ."

"ಅಲ್ಲಾ, ಮಠಗಳಿಗೆ ದುಡ್ಡು ಕೊಡದು ಯಾವ ಲೆಕ್ಕದಲ್ಲಿ ಅಂತ" ...ೆ ಕಾಳಮಾವ.

"ಯಾವ ಲ್ಯಕ್ಕ ಪತ್ರ ಏನೂಯಿಲ್ಲ ಕಣಮಾವ. ಸಬೆಲಿ ಹೇಳಿಬುಡ್ತನೆ, ...ಬಡು ಕೊಡ್ತನೆ. ಯಾವತ್ತು ಮಠಕ್ಕೆ ಸರಕಾರ ದುಡ್ಡು ಕೊಡಬಾರ್ದು. ...ದ್ರೆ ಯಾವುದಾದ್ರು ಕ್ಯಲಸ ಮಾಡಿಸಿ ಕೊಡಬೇಕು."

"ಈಸಗಳೋರು ತಾನೆ ಯಂಥೋರು?" ಎಂದು ಸೀರ ಅಣಕಿಸಿದ.

"ಏ ಅವುರಿರದೆ ಈಸಗಳಕ್ಕಲವೇನೊ. ಅಂತ ಶ್ರೀಮಂತ ಮಠಗಳೇ ... ಸರ್ಕಾರದ ದುಡ್ಡುಬ್ಯಾಡ ಅಂದಿಲ್ಲ, ಪಾಪ ಬಡ ಮಠಗಳಿಗಂತೂ ...ರಪ್ಪ ಒಂದು ರೂಪಾಯಿನೂ ಕೊಟ್ಟಿಲ್ಲ, ಇವುನ ಕಣ್ಣಿಗೆ ಬರೀ ...ಠಮಠನೇ ಕಾಣ್ತವೆ."

"ಸರಕಾರದುಡ್ಡಲ್ಲಿ ಮಳೆಗೆ ಮನೆ ಮಠ ಕಳಕಂಡೋರಿಗೆ ಮನೆ ಮಠ ...ಕೊಡದದ ಬುಟ್ಟು ಮಠಕ್ಕೆ ಕೊಡ್ತನೆ ಅಂದ್ರೆ ಇವುನ್ನ ದ್ಯಾವೇಗೌಡ ...ಡು ಸರಿಕಂಡ್ಯ" ಎಂದ ಕಾಳಮಾವ.

"ಅಯ್ಯೋ ಆ ದ್ಯಾವೇಗೌಡ ನೈಸೋರಾಟ ಸುರುಮಾಡಿಕೊಂಡು ಹಿಂದಕೋ ...ಲ್ಲ ಮುಂದಕೆ ಬರಂಗಿಲ್ಲ ಅಂಗಾಗ್ಯದೆ ಅವುನ ಫಜೀತಿ."

"ಅಂಗರೆ ಫಜೀತಿ ಮಾಡಿಕಂಡಿದ್ದನೆ?"

...ಊ. ಆ ಎಡೂರಪ್ಪ ಈ ಕೇಣಿ ತಂದೋನು ಎಡೂರಪ್ಪಲ್ಲಾ, ದ್ಯಾವೇಗೌಡ್ರೆ ಕರಕಂಡು ಬಂದು ರಸ್ತೆ ಮಾಡಕ್ಕೆ ಬುಟ್ಟೊರು. ಅವುರು ಮಾಡ್ತಯಿದ್ರೆ ಈಗ ಅಡ್ಡಿ ಮಾಡ್ತಯಿರೋರು ಅವುರೆಯಾ ಅಂತ ಅವುನೆ. ಅದೊಂದಾ, ಇನ್ನು ಬೆಂಗಳೂರು ಸುತ್ತಮುತ್ತ ರೈತರು ಯಾರಿಗೆ ಬೇಕಾದ್ರವುರಿಗೆ ಜಮೀನು ಮಾರೋ ಕಾನೂನು ತಂದು ಇವತ್ತು ರೈತರ್ಯಲ್ಲ ಭಿಕಾರಿಗಳಾಗಂಗೆ ಮಾಡಿದೋರು ಇದೇ ದ್ಯಾವೇಗೌಡ ಅಂತ ಪುಟ್ಟಣ್ಣಯ್ಯ ಪುತಾರನೆ ಕ್ವರಿತ ಕುಂತವುನೆ."

"ಅಂಗರೆ ಬೆಂಗಳೂರು ಸುತ್ತಮುತ್ತ ಇರೋ ರೈತರು ಭೂಮಿ ಮಾರಂಗೆ ಕಾನೂನು ಮಾಡಿದೋನು ದ್ಯಾವೇಗೌಡ್ನೆ?"

"ಊ ಕಣ ಮಾವ. ದೇವರಾಜ ಅರಸು ಉಳುವವನೇ ಹೊಲದೊಡೆಯ ಅಂತ ಹೇಳಿದ್ರೆ, ಈ ದ್ಯಾವೇಗೌಡ ಕೊಂಡವನೇ ನೆಲದೊಡೆಯ ಅನ್ನಂಗೆ ಮಾಡಿ ಮಡಿಗಿದ. ಅದ್ಕೆ ಇವತ್ತು ತಾನು ಮಾಡಿದ್ಕೆ ತಾನೇ ಹೋರಾಟ ಮಾಡೋ ಕಾಲ ಬಂದದೆ."


"ಅವುನು ಯಾವತ್ತೂ ಅಂಗೆ ಅಲ್ಲವೇನ್ಲ?" ಎಂದ ಸೀರ.

"ನೋಡಪ್ಪ ನಿನ್ನಂಥೋನಿಗೇ ದ್ಯಾವೇಗೌಡನ ಬಣ್ಣ ಏನೂ ಅಂತ ಗೊತ್ತಾಗ್ಯದೆ ಅಂದ್ರೆ ಅವುನಿನ್ನೆಷ್ಟರ ಮಟ್ಟಿಗೆ ರಾಜಕಾರಣ ಮಾಡ್ತಯಿದ್ದನು."

"ಮಾಡ್ತನೆ ಕಂಡ್ಯ. ಕಾಳಣ್ಣ ಕೈಲಾಗದೆಯಿದ್ರು ರೈತಾಪಿ ಕ್ಯಲಸ ಮಾಡದಿಲವೆ ಅಂಗೆ ಅವುನು ರಾಜಕಾರಣ ಮಾಡ್ತನೆ. ಅವುನಿಗೆ ಹೋಲಿಸಿದ್ರೆ ಈ ಕಾಂಗ್ರೆಸಿನವು ಯಾತಕ್ಕೆ ಬಂದವ್ರೂ."

"ಅದೂ ನಿಜವೆ ಬುಡು. ಕಾಂಗ್ರೆಸಿನವು ಸುಮ್ಮನೆ ಮನೆಲಿ ಕುಂತವ್ರೆ. ದ್ಯಾವೇಗೌಡ ರಣಬಿಸಲಲ್ಲಿ ನೈಸ್ ರಸ್ತೆ ಮ್ಯಾಲೆ ಕುಂತವುನೆ. ಅದ್ಕೆ ಬಿಸಿಲಿಗೆ ಅವುನ ಬಣ್ಣ ಕಪ್ಪು ತಿರುಗ್ತಾ ಅದೆ."

"ಅದ್ಯಾಂಗ್ಲ ಉಗ್ರಿ ಕರಿಮಸಿಯ ಮಕ್ಕೆ ಬಳದರಂತಲ್ಲಾ?" ಎಂದಳು ಜುಮ್ಮಿ.



"ಮುತಾಲಿಕ್ಕ ಅನ್ನೋನ ಮುಸುಡಿಗೆ ಮಸಿ ಬಳದ್ರು ಕಣೆ. ಅದನೋಡಿ ಮನಸಿಗೆ ಏನೊ ಒಂಥರಾ ಸಮಾಧಾನ ಆಯ್ತು."

"ಅವುನ ಮುಸುಡಿಗೆ ಮಸಿ ಬಳದ್ರೆ ನಿನ್ನ ಮನಸಿಗ್ಯಾಕೆ ಸಮಾಧಾನಾಯ್ತು?"

"ಅವುನು ಶ್ರೀರಾಮಸೇನೆ ಅಂತ ಪೋಲಿವುಡ್ರ ಕಟಿಗಂಡು ಯಲ್ಲಾರಮ್ಯಾಲೂ ಹೋಯ್ತಿದ್ದ. ಅದ್ಕೆ ಹಿಡಕಂಡು ಮಸಿ ಬಳದ್ರು."

"ಮಸಿ ಬಳದ ಕಾರಣನೆ ಬ್ಯಾರೆ ಕಣೊ" ಎಂದುಕೊಂಡು ವಾಟಿಸ್ಸೆ ಬಂದ.

"ನೀನೆ ಹೇಳ್ಳ ಅದೇನು ಅಂತವ" ಎಂದಳು ಜುಮ್ಮಿ.

"ನೋಡಕ್ಕ, ಪ್ರತೀವರ್ಷ ಪ್ರೇಮಿಗಳ ದಿನ ಅಂತ ಮಾಡ್ತರೆ."

"ಯಾರೂ?"

"ಪ್ರೇಮಿಗಳು. ಯಾರ‍್ಯಾರು ಲವ್ವು ಮಾಡ್ತಯಿರತರೊ ಅವುರ್ಯಲ್ಲ ಪಾರ್ಕು, ಹೋಲ್ಟು ರೆಸಾರ್ಟಲ್ಲಿ ಕುತಗಂಡು ಮಾತಾಡಿ ಕಡಿಗೆ ಕಿಸ್ಸು ಗಿಸ್ಸು ಕೊಟಗಂಡು ಮನೆಕಡಿಕೋಯ್ತವೆ. ಈ ಮುತಾಲಿಕ್ಕ ಅನ್ನೊನು ಅದ್ಯಲ್ಲ ಕೂಡದು, ಅದು ನಮ್ಮ ಸಂಸ್ಕೃತಿಯಲ್ಲ, ಅಂಗೆ ಮಾಡೋರ್ನ ಹಿಡುದು ಮದುವೆ ಮಾಡ್ತಿನಿ ಅಂತ ಗುಟುರಾಕ್ತಿದ್ದ."

"ಅವುನ್ಯಾರ್ನು ಪಿರೀತಿ ಮಾಡಿಲ್ವೆ?"

"ಅಂಥೋರ್ನ ಯಾರೂ ಪಿರೀತಿ ಮಾಡಲ್ಲ ಕಣಕ್ಕ, ಪ್ರೀತಿ ಯಲ್ಲಾರು ಮಾಡೋ ಅಂತದ್ದಲ್ಲ, ಯಾರ ಮನಸಲ್ಲಿ ಪ್ರೀತಿ ಸ್ಯಲೆ ಇರತದೊ ಅಂಥೋರು ಮಾಡ್ತರೆ. ಪರೆಗ್‌ಜಾಂಪಲ್ ಇದೇ ನಮ್ಮ ಕಾಳ ದೊಡಪ್ಪ, ಸೀರ ಚಿಗಪ್ಪ ಇಂಥೋರಿಗೆ ಪ್ರೀತಿ ಅನ್ನದು ಕಡಮೆ. ಇಲ್ಲವೇಯಿಲ್ಲ ಅಂತ್ಲೂ ಹೇಳಬವುದು" ಎಂದು ವಾಟಿಸ್ಸೆ ನಕ್ಕ.

"ಅಯ್ಯ ನಿಮ್ಮವುನ್ ಯಾಸನಾ ಬಡಿಯಾ. ನಮ್ಮಣ್ಣನಿಗೆ ಪಿರೀತಿನೆಯಿಲ್ಲ ಅಂತಿಯಲ್ಲಾ, ನಿನಿಗೇನು ಗೊತ್ತ ಅದು" ಎಂದು ಸೀರ ರೇಗಿದ.

"ಸಿಟ್ಟು ಮಾಡಿಕಬ್ಯಾಡ ಚಿಗಪ್ಪ, ನಾನು ಮಾತಾಡ್ತಯಿರದು ಈಗಿನ ಪ್ರೀತಿ ಬಗ್ಗೆ. ಹಳೆ ಪ್ರೀತಿ ಬಗ್ಗೆ ಅಲ್ಲ. ನೀವ್ಯಲ್ಲ ಮದಿವಾದ ಮ್ಯಾಲೆ ಪ್ರೀತಿ ಮಾಡಿದ್ದಿರಿ. ಅದ ಪ್ರೀತಿ ಅನ್ನಕ್ಕೂ ಬರದಿಲ್ಲ. ಏನೂ ಬ್ಯಾಡಪ್ಪ ಮದುವಿಗಿಂತ ಮದ್ಲು ನೀನು ನಮ್ಮ ಚಿಗವ್ವನ್ನ ಮಾತಾಡಿಸಿದ್ದ? ಸೀರೆ ತಂದು ಕೊಟ್ಟಿದ್ದಾ? ರವಿಕೆ ಕೊಟ್ಟಿದ್ದಾ? ಹೋಗ್ಲಿ ನಿನ್ನ ಕಂಡ್ರೆ ನನಿಗೆ ತುಂಬಾ ಇಷ್ಟಾ ಅಂತ ಹೇಳಿದ್ದಾ?"

" !?"

"ಹೇಳಿಲ್ಲ, ಯಾಕಂದ್ರೆ ಆಗಿನ ಕಾಲದಲ್ಲಿ ಮದಿವಾಗಿ ಮಾತಾಡಸಕ್ಕೆ ಮೂರು ತಿಂಗಳು ಬೇಕಾಗಿತ್ತು, ಅಂತ ಜನಾಂಗದ ಪ್ರತಿನಿಧಿಯಾದ ಮುತಾಲಿಕ್ಕ ಮದುವಿಗಿಂತ ಮದ್ಲು ಮಾತಾಡದು ತಪ್ಪು, ಮುತ್ತು ಕೊಡದು ತಪ್ಪು, ಅಂಗ್ಯಾರಾರ ಮಾಡಿದ್ರೆ ಅವುರ ಅಲ್ಲೇ ಹಿಡದು ಮದುವೆ ಮಾಡ್ತಿನಿ ಅಂದಿದ್ದ."

"ಎಷ್ಟೇ ಆಗ್ಲಿ ಅದು ಪುರೋಹಿತರ ಪಿಂಡಲವೇನೊ, ಮದುವೆ ಮಾಡುಸ್ತಿನಿ ಅಂದವುನೆ."

"ಅದಲ್ಲ ಕಣೊ ಉಗ್ರಿ, ಒಂದುಡುಗ ಹುಡುಗಿ ಪ್ರೀತಿ ಮಾಡ್ತಯಿದ್ರೆ ಅದ ನೋಡಿ ಸಯಿಸಗಳಕ್ಯಾಗದಿಲ್ಲ, ಈ ಸಯಿಸಿಗಳಕ್ಯಾಗದೇ ಯಿದ್ದೋರ್‍ಯಲ್ಲ ಶ್ರೀರಾಮ ಸೇನೆ ಸೇರಿ ಈತರ ಗಲಾಟೆ ಮಾಡ್ತರೆ, ಗೊತ್ತಾ."

"ಅಂತೂ ಟಿವಿ ಚಾನಲ್‌ನೋರು ಸರಿಯಾದ್ದ ಮಾಡಿದ್ರು ಅವುನಿಗೆ."

"ಮಿಸ್ಟರ್ ಉಗ್ರಿ, ಚಾನಲ್‌ನೋರ ಮ್ಯಾಲೆ ಹಾಕಬ್ಯಾಡ ಕಣೊ. ಪಾಪ ಅವುರು ಒಂದು ಬಹಿರಂಗ ಚರ್ಚೆ ಮಡಗಿದ್ರು. ಅದು ಕೈಮೀರ್‍ತು, ಮುತಾಲಿಕ್ಕ ಮಸಿ ಬಳಸಿಗಂಡ."

"ಸರಿಯಪ್ಪ, ನೀನೇಳೊ ಮಾತಿಗೆ ಬತ್ತಿನಿ. ಟಿವಿ ಚಾನಲ್ನೋರು ಸಂಚು ಮಾಡಿಲ್ಲ ಅನ್ನದಾದ್ರೆ ಅದೇ ಕಾರ್ಯಕ್ರಮಕ್ಕೆ ಮ್ಯೂಜಿಕ್ ಹಾಕಿ ಯರಡು ಮೂರು ದಿನ ಹಾಕಿದ್ಯಾಕೇ?"

"ಅದು ಜಸ್ಟ ಎಂಟರ್‌ಟೈನ್‌ಮೆಂಟಿಗೆ. ಮಸಿ ಬಳಸಿಗಂಡು ಮುತಾಲಿಕ್ಕ ಯಂಗೆ ಕಾಣತಿದ್ದ ಅಂದ್ರೆ ಅಂಗೆ ಯಕ್ಕಡದಲ್ಲಿ ವಡಿಸಿಗಂಡೋನಂಗೆ ಕಾಣತಿದ್ದ. ಅವುನಲ್ಲು, ಅವುನ ಸಿಟ್ಟು, ಇವ್ಯಲ್ಲ ಟೋಟಲ್ಲಿ ಪದೇಪದೇ ನೋಡಂಗಿತ್ತು, ಅದ್ಕೆ ಟೀವಿಯೋರು ವಳ್ಳೆ ಅಡವಿಟೇಜ್ ತಗಂಡು ರಿಪೀಟ್ ಮಾಡ್ಯವುರೆ."

"ಮಸಿ ಬಳದೋರ್‍ಯಾರ್ಲ?"


"ನಿಮ್ಮ ಪಾರ್ಟಿಯೋರಂತೆ ಕಣಕ್ಕ. ಡಿ.ಕೆ. ಶಿವಕುಮಾರ ವಳ್ಳೆ ಕೆಲಸ ಮಾಡ್ಯವುರೆ ಅಂದವುನೆ. ದೇಶಪಾಂಡೆ ನಮ್ಮೊರಲ್ಲ, ನಮ್ಮೊರೆ ಆಗಿದ್ರೆ ಅದುಕೊಂದು ಕಾರಣ ಇದೆ ಅಂದವುನೆ. ಇತ್ತ ಖರ್ಗೆ ಮಾತ್ರ ಅವುರ್ಯಲ್ಲ ಅವುರ ಕಡಿಯೋರು ಅಂದವುನೆ. ಅಂತೂ ಈ ಕಾಂಗ್ರೆಸ್ ಒಡ್ಡೆತ್ತವುಕೆ ಒಂದು ಮಾತಾಡದು ಇನ್ನು ಗೊತ್ತಿಲ್ಲ ಅನ್ನದ ತೋರಿಸಿಗಂಡೊ ಕಣಕ್ಕ." ●

...ಹಜ ಮತ್ತು ವಿಕೃತ



...ಮರುಭೂಮಿಯಲ್ಲಿ ತಿಂಗಳುಗಟ್ಟಲೇ ಪ್ರಯಾಣ ಮಾಡುವವರು, ...ಕ್ಕೊಮ್ಮೆಯೂ ಹೆಂಡತಿಯನ್ನು ನೋಡಲಿಕ್ಕಾಗದ ಸೈನಿಕರು, ದೂರದ ...ಗೆ ಹೋಗಿ ನಾಟಕ ಕಲಿಸುವ ಹಾರ್ಮೋನಿಯಂ ಮಾಸ್ತರು... ಅವರಲ್ಲಿ ...ವಾದದು ಏನು? ಅವರಲ್ಲಿ ಕೆಲವರು ಸಲಿಂಗರತಿಯವರು, Ho-...xuals ಆಗಿರುತ್ತಾರೆ. ನಾನು ಚಿಕ್ಕವನಾಗಿದ್ದಾಗ (ನನಗಾಗ ಆರೇಳು ... ಇರಬಹುದು) ಒಂದು ಬೇಸಿಗೆಯಲ್ಲಿ ನಮ್ಮೂರಲ್ಲಿ ದೊಡ್ಡ ಗುಸುಗುಸು ... ಊರಲ್ಲಿ ನಾಟಕ ಕಲಿಸುತ್ತಿದ್ದ ಮಾಸ್ತರು ನಾಟಕ ಕಲಿಯುತ್ತಿದ್ದ ...ಗರೊಂದಿಗೆ ಮಲಗಲು ಪ್ರಯತ್ನಿಸಿದ್ದ. ತೀರಾ ಚಿಕ್ಕವರಿದ್ದ ನಮಗೆಲ್ಲ ...ವಿಚಿತ್ರ. ಆಮೇಲೆ ಆ ಬಗ್ಗೆ ಓದಿದ್ದೆವು. ಇಂಗ್ಲೆಂಡ್‌ನಲ್ಲಿ ಸಲಿಂಗರತಿಗಾಗಿ ... ವೈಲ್ಡ್ ಅರೆಸ್ಟ್ ಆದ; ಅವನ ವಿಚಾರಣೆಯಾಗಿ ಅವರಿಗೆ ಜೈಲು ಶಿಕ್ಷೆ ...ತು. ಆಮೇಲೆ ವಿಜ್ಞಾನ ತಿಳಿಸಿದ ಪ್ರಕಾರ ಈ ಸಲಿಂಗರತಿ ಅಷ್ಟೇನೂ ...ದಲ್ಲ; ದೇಹದಲ್ಲಿ ಆದ ಕೆಲವು ಬದಲಾವಣೆಯಿಂದ, ಕಡ್ಡಾಯದ ...ದಿಂದ, ಏಕಾಂಗಿತನದಿಂದ ಅದು ಬರಬಹುದು. ಸಲಿಂಗರತಿಯ ವಿರುದ್ಧದ ಕಾನೂನು ರದ್ದಾಯಿತು. ಅದು ... ಖಾಸಗಿ ವಿಷಯವೆಂದು ಪರಿಗಣಿತವಾಗತೊಡಗಿತು. ಇದರ ಮೇಲೆ ಒಂದು ಜೋಕ್ ಇದೆ. ಒಬ್ಬ ...ನ್ನಾನೆ, "ಈಗ ಇಲ್ಲಿ ಸಲಿಂಗರತಿ ಶಿಕ್ಷಾರ್ಹವಲ್ಲವಂತೆ ಹೌದೇ?" "ಈಗ ಆಪ್ಷನಲ್-ಅದು ಕಡ್ಡಾಯವಾಗುವ ... ನಾನು ಈ ದೇಶ ಬಿಟ್ಟು ಹೋಗುತ್ತೇನೆ!"

...ಮೆರಿಕಾದಲ್ಲಿ ಯಾವುದನ್ನೇ ಆಗಲಿ ಅತೀ ಮಾಡುವುದು ವಾಡಿಕೆ. ಸಲಿಂಗರತಿ ಖಾಸಗಿ ವಿಷಯ; ಆದರೆ ...ರತಿಯುವವರನ್ನು ತಾತ್ಸಾರದಿಂದ ನೋಡಲಾಗುತ್ತದೆ, ಸೈನ್ಯದಲ್ಲಿ ಸೇರಿಸಿಕೊಳ್ಳುವುದಿಲ್ಲ, ಉದ್ಯೋಗದಲ್ಲಿ ತಾರತಮ್ಯ ... ಹತ್ತು ವರ್ಷದ ಹಿಂದೆ ಈ ಸಲಿಂಗರತಿಯ ಪುರುಷರು ಶೇಕಡ ಹತ್ತು ಹನ್ನೊಂದು ಭಾಗ ಇರುವುದಾಗಿ ತಿಳಿದಿದ್ದರು. ಇವರೆಲ್ಲ ಸಂಘ ಕಟ್ಟಿದರು; ತಮ್ಮ ಹಕ್ಕುಗಳಿಗಾಗಿ ಬೀದಿಗಿಳಿದು ಹೋರಾಡತೊಡಗಿದರು. ಬಿಲ್ ಕ್ಲಿಂಟನ್ ಚುನಾವಣಾ ಪ್ರಚಾರದಲ್ಲಿ ಇವರ ಪರವಾಗಿ ಮಾತಾಡಿ ಇವರ ಎಲ್ಲ ಬೇಡಿಕೆ ಈಡೇರಿಸುವುದಾಗಿ ಹೇಳಿದ. ಅಧ್ಯಕ್ಷನಾಗಿ ಚುನಾಯಿತನಾದ ಮೇಲೆ ಕಷ್ಟವಾಯಿತು; ಸೈನ್ಯದಲ್ಲಿ 'ಗೇ'ಗಳಿಗೆ (ಅಂದರೆ ಸಲಿಂಗರತಿಯವರಿಗೆ) ಸ್ಥಾನವಿಲ್ಲ ಎಂದು ಸೇನಾನಿಗಳೆಲ್ಲ ದಂಗೆ ಎದ್ದರು.



ಜುಲೈ14, 1993

ಆದರೆ 'ಗೇ'ಗಳು ಬಾವುಟ ಹಿಡಿದು ಮೆರವಣಿಗೆ ನಡೆಸಿದರು; ಹೋರಾಡುವ ನಿರ್ಣಯ ತೆಗೆದುಕೊಂಡರು. ಅಷ್ಟರಲ್ಲಿ ಎರಡು ಸರ್ವೇಗಳು 'ಗೇ'ಗಳ ಶೇಕಡಾವಾರು ಸಂಖ್ಯೆ ಕೇವಲ ಎರಡು ಎಂದು ಹೇಳಿದವು.

ಇದರಲ್ಲಿ ಇನ್ನೂ ಕೆಲವು ಮೋಜಿನ ಸಂಗತಿಗಳಿವೆ. ಮೊನ್ನೆ ಒಂದು ಲೇಖನ ಬರೆದ ಬಾರ್ಬರಾ ಹೆನ್ರಿಚ್ ಎಂಬ ಮಹಿಳೆ ಈ 'ಗೇ'ಗಳನ್ನು ಗೇಲಿ ಮಾಡಿ ಕೆಲವು ಮುಖ್ಯ ವಿಷಯ ಹೇಳಿದಳು. 'ಮನುಷ್ಯನ ಲೈಂಗಿಕ ಸಹಜತೆ ಅಥವಾ ಅಸಹಜತೆಯೆಲ್ಲ ಖಾಸಗಿಯಾದವು; ಅವೆಲ್ಲ ವೈಯಕ್ತಿಕ ವಲಯದಲ್ಲಿದ್ದರೇ ಚೆಂದ. ಅಲ್ಲದೆ ಹುಟ್ಟಿದಂದಿನಿಂದ 'ಗೇ' ಅಲ್ಲದ ಒಬ್ಬ ಕಾರಣಾಂತರದಿಂದ ಗೇ ಆಗಬಹುದು; ಗೇ ಆಗಿದ್ದವನು ಸಹಜ ಲೈಂಗಿಕತೆಯವನಾಗಬಹುದು. ಎರಡೂ ಬಗೆಯ ಲೈಂಗಿಕತೆ-ಸಹಜ ಮತ್ತು 'ಗೇ'-ಉಳ್ಳವರೂ ಇದ್ದಾರೆ. ಹೀಗಿರುವಾಗ ಬಾವುಟ, ಪ್ಲೆಕಾರ್ಡ್ ಹಿಡಿದು ಲೈಂಗಿಕತೆಯ ಬಗ್ಗೆ ಕೂಗಾಡುವುದು ನಾಚಿಕೆಗೇಡು' ಎಂದು ಬಾರ್ಬರಾ ವಾದಿಸಿದಳು.

ಗಂಡಸರಲ್ಲಿ 'ಗೇ'ಗಳಿರುವಂತೆಯೇ ಹೆಂಗಸರಲ್ಲಿ ಇದ್ದಾರೆ; ಇವರು ಹೆಂಗುಸರನ್ನು ಮಾತ್ರ ಪ್ರೀತಿಸುವ ಹೆಂಗುಸರು. ಲೆಸ್ಬಿಯನ್ಸ್ ಎಂದು ಕರೆಸಿಕೊಳ್ಳುವ ಇವರ ಸಂಖ್ಯೆಯೇನೂ ಕಡಿಮೆಯಿಲ್ಲ.

ಒಂದು ತಮಾಷೆ ಅಂದರೆ, ಹಿಂದೊಮ್ಮೆ 'ಗೇ' (GAY) ಪದಕ್ಕೆ ಖುಷಿ, ಉಲ್ಲಾಸ ಎಂಬ ಅರ್ಥವಿತ್ತು; ಹಳೇ ಇಂಗ್ಲಿಷ್ ಕಾದಂಬರಿಗಳಲ್ಲಿ ಬರುವ ಈ ಪದದ ಅರ್ಥ ಅದೇ. ಈ ಸಲಿಂಗರತಿಯುವರಿಂದಾಗಿ ಆ ಪದ ಕೆಟ್ಟುಹೋಯಿತು. ಈಗ 'ಗೇ'ಗೆ ಹಳೇ ಅರ್ಥವೇ ಇಲ್ಲ.

'ಅವಳನ್ನು ಎಲ್ಲಿಗೆ ಕರೆಯುತ್ತಿದ್ದೀರಿ?'

'ಈಗ ಸುಜಾತ ಅವರು ಬರಬೇಕು'

-ಹಾಗೆಂದು ವೇದಿಕೆಯ ಮೇಲಿದ್ದ ಒಬ್ಬಾತ ಅನೌನ್ಸ್ ಮಾಡಿದ ಮೇಲೆ, ಕುಳಿತಿದ್ದ ಜನರ ನಡುವಿನಿಂದ ಒಬ್ಬ ಹುಡುಗಿ ಎದ್ದು ಸ್ಟೇಜಿನ ಕಡೆ ನಡೆಯತೊಡಗಿದಳು.

-ಈಗೊಂದೆರಡು ತಿಂಗಳ ಹಿಂದೆ ದುರ್ಗದ ಮುರುಘ ರಾಜೇಂದ್ರ ಶರಣರನ್ನು ಭೇಟಿಯಾಗಲು ಬೆಂಗಳೂರಿನ ಬಸವ ಕೇಂದ್ರಕ್ಕೆ ಹೋಗಿದ್ದಾಗ ಅಲ್ಲಿನ ಸಮುದಾಯಭವನ ದಲ್ಲಿ ಭಾರೀ ಜನ ಸೇರಿದ್ದು ಕಾಣಿಸಿತು. ಶರಣರೊಂದಿಗಿನ ಭೇಟಿಗೆ ಇನ್ನೂ ಸಮಯ ವಿತ್ತಾದ್ದರಿಂದ ಕುತೂಹಲದಿಂದ ನಾನು ಕಾರ್ಯಕ್ರಮಕ್ಕೆ ಹೋಗಿ ನಿಂತು ನೋಡ ತೊಡಗಿದೆ.

ಆಗಲೇ 'ಸುಜಾತ'ಳಿಗೆ ಕರೆಬಂದದ್ದು. ಆ ಯುವತಿ ವೇದಿಕೆಯತ್ತ ಸಾಗುತ್ತಿರು ವಾಗಲೇ ಮೈಕ್ ಹಿಡಿದಿದ್ದ ವ್ಯಕ್ತಿ 'ಇವರು ನಮ್ಮ ಕಮ್ಯುನಿಟಿಯ ಫೇಮಸ್ ಲಾಯರ್ ರಾಮಚಂದ್ರಪ್ಪನವರ 3ನೇ ಮಗಳು, ಬಿಕಾಂ ಮಾಡಿದ್ದಾರೆ, ಹೈಟು 5.2, ವೆಯ್ಟ್ 59, ಬಾಡಿ ಕಲರ್ ವೈಟ್....' ಎಂದು ಆಕೆಯ ಬಯೋಡೇಟಾ ಅನೌನ್ಸ್ ಮಾಡುತ್ತಿದ್ದ. ಅಲ್ಲಿ ನೂರಿನ್ನೂರು ಜನ ಕುಳಿತಿದ್ದರು. ವೇದಿಕೆಯ ಮೇಲೆ ಗಂಗಾಮತಸ್ಥರ ಸಂಘಟನೆಯ ಬ್ಯಾನರ್ ಕಾಣುತ್ತಿತ್ತು.


ಆ ಹುಡುಗಿ ವೇದಿಕೆ ಏರಿ ಮೈಕ್ ಹಿಡಿದು ಮತ್ತೊಮ್ಮೆ ಜನ್ಮದಿನ, ಜಾತಕ ಸಹಿತ ತನ್ನ ಬಯೋಡೇಟಾ ಹೇಳಿ ಕೊಂಡಳು. ನಂತರ ಅನೌನ್ಸರ್‌ನ ಪ್ರವರ ಮುಂದುವರೆಯಿತು.

'ಇವರಿಗೆ ಇಬ್ಬರು ಅಕ್ಕಂದಿರಿದ್ದಾರೆ. ಮದುವೆಯಾಗಿದೆ. ಒಬ್ಬರು ಸಾಫ್ಟ್‌ವೇರ್ ಇಂಜಿನಿಯರ್‌ನ ಇನ್ನೊಬ್ಬರು ಡಾಕ್ಟರ್‌ನ ಮದುವೆಯಾಗಿ ಅಮೆರಿಕಾ ದಲ್ಲಿದ್ದಾರೆ. ಸುಜಾತಾಗೂ ಫಾರಿನ್‌ನಲ್ಲಿರುವ ಹುಡುಗನ್ನ ನೋಡುತ್ತಿದ್ದಾರೆ. ಆಸಕ್ತರು ಅವರ ಫ್ಯಾಮಿಲಿಯವರನ್ನು ಇಲ್ಲೇ ಮಾತಾಡಿಸಬಹುದು... ಫೋನ್ ನಂಬರ್ ಬೇಕಾದರೆ ಬರೆದುಕೊಳ್ಳಿ...........' ಹೀಗೆ

ನಿಮಗೆ ಈಗಾಗಲೇ ಅರ್ಥವಾಗಿರಬೇಕು. ಅದೊಂದು **matrimonial meet** ಅರ್ಥಾತ್ ಮದುವೆ ಸಮಾವೇಶ. ಒಂದು ಜಾತಿಯ ವಿವಾಹಾಕಾಂಕ್ಷಿ ಹುಡುಗ-ಹುಡುಗಿಯರು ಮತ್ತವರ ಕುಟುಂಬ ಸಮೇತ



ಇಂತಹ ಸಮಾವೇಶಗಳಲ್ಲಿ ಗುಂಪುಗೂಡಿ ಸೂಕ್ತವಾದ ಜೋಡಿಗಳನ್ನು ಹುಡುಕುವ ಪುಟ್ಟ ಅರ್ಬನ್ ಮ್ಯಾರೇಜ್ ಸಂತೆಗಳಿವು. ಅವತ್ತು ನಾನು ಸಭೆಯಲ್ಲಿದ್ದ ಹೆಂಗಸರು, ಗಂಡಸರು, ಹಿರಿಯರು-ಕಿರಿಯರ ಮುಖಭಾವಗಳನ್ನು ಗಮನಿಸುತ್ತಿದ್ದೆ. ಊಹುಂ... ನನಗೆ ಯಾರಲ್ಲೂ ಹಿಂಜರಿಕೆ, ಸಂಕೋಚ ಕಾಣಲಿಲ್ಲ. ಸಂತೆಯಲ್ಲಿ ಹಸುವೊಂದನ್ನು ನಿಲ್ಲಿಸಿ ವರ್ಣಿಸುವಂತೆ ಇಲ್ಲಿ ನೂರಾರು ಜನರೆದುರು ಒಬ್ಬ ಹುಡುಗಿಯನ್ನು ನಿಲ್ಲಿಸಿ ಮದುವೆಗೆ ಸಿದ್ಧವಿರುವ ಆಕೆಯನ್ನು, ಆಕೆಯ ಬೇಕು, ಬೇಡಗಳನ್ನು ಪ್ರಕಟಿಸಿ 'ವರ'ಗಳಿಗೆ ಬಹಿರಂಗ ಆಹ್ವಾನ ನೀಡುವ ಈ ಪರಿ ಶಾಕ್ ನೀಡುವಂತಿತ್ತು. ಅದೇರೀತಿ ನೀಟಾಗಿ ಟಕ್‌ಇನ್ ಮಾಡಿಕೊಂಡು ಬಂದಿದ್ದ ಅನೇಕ ವರಮಹಾಶಯರೂ ವೇದಿಕೆ ಹತ್ತಿ ತಮಗೆ ಬೇಕಾಗಿರುವ 'ಪತ್ನಿ'ಯರ ಬಗ್ಗೆ ಪ್ರಕಟಣೆ ನೀಡುತ್ತಿದ್ದರು.



ಈ ವಧೂ-ವರಾನ್ವೇಷಣೆಯೇ ಒಂದು ಶಾಪವೆನಿಸಿಬಿಟ್ಟಿತು ನನಗೆ. ಕಿಂಚಿತ್ತು ಘನತೆ, ಆತ್ಮಗೌರವ, ಸಂಕೋಚ-ಸೂಕ್ಷ್ಮತೆಗಳಿರುವ ಯಾರಿಗೇ ಆಗಲಿ ಈ ವಿಧಾನವು 'ನಿಜಕ್ಕೂ ಕಷ್ಟವಾದ ಪರೀಕ್ಷೆಯೇ ಹೌದು.

'ಮದುವೆಗಳು ಸ್ವರ್ಗದಲ್ಲಿ ನಡೆಯುತ್ತವೆ' ಎಂಬ ಸುಂದರ ಕಲ್ಪನೆಯ ಮಾತು ಕೇಳಲಿಕ್ಕೇನೋ ಚೆನ್ನ, ಆದರೆ ನಮ್ಮಲ್ಲಿ ಮದುವೆಗಳು ಛತ್ರಗಳಲ್ಲಿ ನಡೆಯುವುದೇ ಜಾಸ್ತಿ, ಕೆಲವರು ದೇವಸ್ಥಾನಗಳಲ್ಲಿ ಮದುವೆಯಾಗುತ್ತಾರೆ.

ಪ್ರಗತಿಪರ ವಲಯಗಳಲ್ಲಿರುವ ಹುಡುಗ-ಹುಡುಗಿಯರು ಈ ಕಿರಿಕಿರಿಗಳಿಂದ ತಪ್ಪಿಸಿಕೊಳ್ಳ ಬಲ್ಲರಾದರೂ ಅಂತಹವರ ಸಂಖ್ಯೆ ಕಡಿಮೆ ಇದೆ. ಇವರಿಗೆ ಸರಳ ಮದುವೆ, ರಿಜಿಸ್ಟರ್ ಮದುವೆ, ಕುವೆಂಪು ಮಂತ್ರಮಾಂಗಲ್ಯ ರೀತಿಯ ಅನೇಕ ಪರ್ಯಾಯ ಆಯ್ಕೆಗಳಾದರೂ ಇವೆ. ಆದರೆ ಸಮಾಜದ ಮುಖ್ಯವಾಹಿನಿ ಯಲ್ಲಿರುವವರ 'ಮದುವೆ' ಎಂಬ ವಿಧಿವಿಧಾನ ಪೂರೈಸಿಕೊಂಡು ಬದುಕು ಮುಂದುವರೆಸಬೇಕಿರುವ ಇನ್ನುಳಿದ ಲಕ್ಷಾಂತರ ಜನರಿಗೆ ಯಾವ ಆಯ್ಕೆ ಇದೆ?

ಮ್ಯಾರೇಜ್ ಬ್ಯೂರೋಗಳು... ಮದುವೆ ಬ್ರೋಕರ್‌ಗಳು... ಈಗ ಇದೆಲ್ಲದರ ತಾರ್ಕಿಕ ಅಂತ್ಯವೆಂಬಂತೆ ಮದುವೆ ಸಮಾವೇಶಗಳೇ ಏರ್ಪಾಡಾಗುತ್ತಿವೆ. ಅಂತಲ್ಲಿ ಒಂದು ಸಾರಿ ಹೋಗಿ ಏನೇನು ನಡೆಯುತ್ತದೆಂದು ಗಮನಿಸಿ ನೋಡಿದರೆ ಮನಸ್ಸು ಮುದುಡಿಹೋಗುತ್ತದೆ. ಇಂತಹ ಸಮಾವೇಶಗಳಲ್ಲಿ ಹುಡುಗರು ಇರುತ್ತಾರಾದರೂ ಅವರಲ್ಲಿ ಬಹುತೇಕರು ವೇದಿಕೆ ಹತ್ತುವುದಿಲ್ಲ, **Ego** ಕಾರಣಕ್ಕೆ. ಆದರೆ ಹುಡುಗಿಯರ ಮೇಲೆ ಕುಟುಂಬದವರಿಂದ ಅದೆಷ್ಟು ಒತ್ತಡವಿರುತ್ತದೆಂದರೆ ಅವರು ವೇದಿಕೆ ಏರಿ ತಮ್ಮನ್ನು ಪ್ರದರ್ಶಿಸಿಕೊಳ್ಳಲೇಬೇಕಾಗುತ್ತದೆ. ಕಷ್ಟವೋ ಕಿರಿಕಿರಿಯೋ ಅದೇನೇ ಆಗಲಿ, ಹೇಗೋ ಇದೊಂದು ಪ್ರೊಸೆಸ್ ಮುಗಿಸಿಕೊಂಡು ಬಿಟ್ಟರೆ ಆಮೇಲೆ ಮದುವೆಯಾಗಿ ಆರಾಮಾಗಿದ್ದುಬಿಡಬಹುದೆಂಬ ಯೋಚನೆಯೂ ಕೆಲವ ರಿಗಿರುತ್ತದೆ. ಆದರೆ ಆತ್ಮಗೌರವ, ಘನತೆ ಬೆಳೆಸಿಕೊಂಡಿರು ವವರಿಗೆ, ಸೂಕ್ಷ್ಮ ಮನಸ್ಸಿನವರಿಗೆ ಇದೆಲ್ಲಾ ಕೆಟ್ಟ ಅನುಭವಗಳಾಗಿ ಘಾಸಿಗೊಳಿಸಿರುತ್ತವೆ.

ಮದುವೆ ಎಂಬುದು ಹುಡುಗಿಯರ ಬದುಕಿನ ಸುಭದ್ರ ದಂಡೆ ಎಂಬ ನಂಬಿಕೆ ನಮ್ಮಲ್ಲಿ ಬಹಳ ಗಟ್ಟಿಯಾಗಿ ಇದೆ. ಆದರೆ ಅಂತಹ ದಡ ಸೇರಿಸಲು ಇಷ್ಟೊಂದು ಮುಳುಗು ನೀರು ಕುಡಿಸಬೇಕೇ?

ಇನ್ನೊಂದಿಷ್ಟು ನಾಗರಿಕವಾಗಿರುವ, ಡೀಸೆಂಟ್ ಆದ, ಸ್ನೇಹಮಯ ವಾತಾವರಣದಲ್ಲಿ ಮದುವೆಯ ಪ್ರಸ್ತಾಪಗಳು -ಮಾತುಕತೆಗಳು ಜರುಗುವಂತಹ ವಿಧಾನಗಳನ್ನು ನಮ್ಮ ಹಿರಿಯರು ರೂಪಿಸಬಾರದ?

'ದಿವ್ಯ ಸಾನ್ನಿಧ್ಯ': ಪ್ರಜಾಸತ್ತಾತ್ಮಕ ಸಮ್ಮೇಳನಕ್ಕೆ ಯೋಗ್ಯವೇ?

76ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆ ನೋಡಿದೆ. ಅದರಲ್ಲಿ ಒಂದು ವಿಚಾರ ಎಂದಿನ ಸಂಪ್ರದಾಯವನ್ನು ಮುಂದುವರೆಸಿದೆ. ಅದು ಕೆಲವು ಸಮಾರಂಭ ಮತ್ತು ಗೋಷ್ಠಿಗಳಿಗೆ ಕೆಲವು ಮಠಾಧೀಶರ 'ದಿವ್ಯ ಸಾನ್ನಿಧ್ಯ'ವನ್ನು ಏರ್ಪಡಿಸಿರುವುದು.

ನಮ್ಮ ಹಿಂದಿನ ಊಳಿಗಮಾನ್ಯ ಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ 'ದಿವ್ಯ ಸಾನ್ನಿಧ್ಯ'ಗಳ 'ಕರ್ಮ' ನಮಗೆ ಇತ್ತು, ಆ ರಾಜ್ಯ ವ್ಯವಸ್ಥೆಯಲ್ಲಿ ನಮ್ಮದು ಒಂದು ವಿಶಿಷ್ಟ ಬಗೆಯ ಗುಲಾಮಗಿರಿಯಾಗಿದ್ದರಿಂದ ಅದು ಸಹಜವೂ ಆಗಿತ್ತು. ಆದರೆ ಇಂದು ಪ್ರಜೆಗಳೇ ಪ್ರಭುಗಳಾಗಿರುವ ವ್ಯವಸ್ಥೆಯಲ್ಲಿ ಇಂತಹ ಸಾನ್ನಿಧ್ಯಗಳ ಉಸಾಬರಿ ಏಕೆ? ಅಥವಾ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಾವಿನ್ನೂ ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೇ? (ಅರ್ಥಮಾಡಿಕೊಂಡಿಲ್ಲದಿರುವುದು ಕೃಷ್ಣದೇವರಾಯನ 500ನೇ ವರ್ಷದ ಪಟ್ಟಾಭಿಷೇಕದ ಸಂದರ್ಭದಲ್ಲಿ ಕೂಡಾ ಸಾಬೀತಾಗಿದೆ)

ಇಂತಹ ದಿವ್ಯ ಸಾನ್ನಿಧ್ಯ ಅಗತ್ಯ ಎಂದಾದರೆ ಅದನ್ನು ಉಪಸ್ಥಿತಿ ಎಂದು ಕರೆದರೆ ಯಾರಾದರೂ ಮಠಾಧೀಶರು ಕೋಪಿಸಿಕೊಳ್ಳುವರೇ? ಅಥವಾ ಕನ್ನಡ ಸಾಹಿತ್ಯ ಪರಿಷತ್ತು ಒಂದು ಮಠವಲ್ಲ; ಎಲ್ಲಾ ಸಾಮಾಜಿಕ ಮೂಲದ ಸಾವಿರಾರು ಸದಸ್ಯರ ಒಂದು ಜಾತ್ಯತೀತ ಸಂಸ್ಥೆ ಎಂಬುದನ್ನು ನಾವು ಮರೆತಿರುವೆವೆ? ಅಥವಾ ಇಲ್ಲಿಯ ಒಂದು ಸದಸ್ಯ ವರ್ಗದ ಪ್ರಾಚೀನ ಕಾಲದ ಮತೀಯ ಮೂಲದ ಒತ್ತಡವೇನಾದರೂ ಇದೆಯೇ? ಅಥವಾ ಈ ಎಲ್ಲವನ್ನು ಮೀರಿ ಪ್ರಜಾತಾಂತ್ರಿಕ ನೆಲೆಯಲ್ಲಿ ಮಠಾಧೀಶರನ್ನು ಒಬ್ಬ ಪ್ರಜೆಯನ್ನಾಗಿ ಗುರುತಿಸಿ, ಆಹ್ವಾನಿತ ವಿದ್ವಾಂಸರಂತೆ ಅಥವಾ ಮಂತ್ರಿಗಳಂತೆ ಉಪಚರಿಸುವುದು ಸವಾಲಿನ ವಿಚಾರವೇನಾದರೂ ಆಗಿದೆಯೇ?

ಬಸವಣ್ಣನವರ ಕಾಯಕ ನೆಲೆಯಲ್ಲಿ ಹಾಗೂ ನಮ್ಮ ಸಂವಿಧಾನದ ಚೌಕಟ್ಟಿನಲ್ಲಿ ಯಾವುದೇ ಕಸುಬು ಪೌರ ಕಾರ್ಮಿಕರ ಕಸುಬಿಗಿಂತ ಮೇಲಲ್ಲ. ಅಂತೆಯೇ ಯಾವುದೇ ವ್ಯಕ್ತಿ ಸಾಮಾಜಿಕವಾಗಿ ಯಾರಿಗೂ ಮೇಲಲ್ಲ ಅಥವಾ ಕೀಳಲ್ಲ, ಪರಿಷತ್ತಿನ ಸದಸ್ಯನಾಗಿ ಮಾತ್ರ ಎತ್ತುತ್ತಿರುವ ಪ್ರಶ್ನೆ ಇದಲ್ಲ; ಬದಲಿಗೆ ಭಾರತೀಯ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಗಮನದಲ್ಲಿರಿಸಿಕೊಂಡು ಎತ್ತುತ್ತಿರುವ ಪ್ರಶ್ನೆ ಇದಾಗಿದೆ. ಇಂತಹ ಮುಜುಗರದಿಂದ ಹೊರಬರಲು ಪರಿಷತ್ತು; ಅದಕ್ಕೂ ಮೊದಲು ಮಠಾಧೀಶರು ಸ್ವಾಗತಾರ್ಹ ಪ್ರಯತ್ನಕ್ಕೆ ಮುಂದಾಗಿ ನಮ್ಮ ವ್ಯವಸ್ಥೆಗೆ ಘನತೆ ತರುತ್ತಾರೆಂದು ಆಶಿಸೋಣವೇ?

-ಡಾ.ಕಾ.ವೆ.ಶ್ರೀನಿವಾಸಮೂರ್ತಿ, ಕೋಲಾರ



ಜನವರಿ 27, 2010ರ ಸಂಚಿಕೆಯಲ್ಲಿ 'ರತ್ನ'ಕ್ಕೆ ಕಳಂಕ ಎಂಬ ವರದಿ ನೀಡಿ ಜನತೆಗೆ, ಪ್ರಶಸ್ತಿ ಪಡೆಯುವವರ ಇನ್ನೊಂದು ಮುಖವನ್ನು ಪರಿಚಯಿಸಿದ್ದೀರಿ. ದೇಜಗೌರು ವಿದ್ವಾಂಸರೆಂದು, ಕನ್ನಡ ನಾಡಿನ ಬಗ್ಗೆ ಅಪಾರ ಕಾಳಜಿ ಇಟ್ಟುಕೊಂಡವರೆಂಬ ಗೌರವ ಭಾವನೆಯಿತ್ತು, ಆದರೆ ಈ ಪರಿಯ ಜಾತಿ ಕೋಪದಲ್ಲಿ ಮಿಂದವರೆಂದರಿತಿರಲಿಲ್ಲ, ವಿಶ್ವಮಾನವ ಕುವೆಂಪುರವರನ್ನು ಮತ್ತು ಅವರ ವಿಚಾರಗಳನ್ನು ಜಾತಿಯ ನೆಲೆಯಲ್ಲಿ ನೋಡುವಂತಾದರೆ ಅದು ಕನ್ನಡಿಗರ ದುರಾದೃಷ್ಟ.

ಕರ್ನಾಟಕದ ಇನ್ನೊಂದು ರತ್ನ ನಡೆದಾಡುವ ಮಂಜುನಾಥ. ಅಬ್ಬಾ! ಎಂಥಾ ಹೋಲಿಕೆ. ಸ್ಮಶಾನದ ಬೂದಿ ಬಳಿದುಕೊಳ್ಳುವ, ಬೀದಿ ಬದಿಯ ಜಾಡಮಾಲಿಯು ಆಗುವ, ಬಡವರ ಮನೆಗೆ ಭಿಕ್ಷೆಗೆ ಬರುವ ಶಿವನೆಲ್ಲಿ? ಬಡವರ ಉಸಿರು, ಬೆವರು ತಾಗದಂತೆ ಬದುಕುವ ಹೆಗ್ಗಡೆಯೆಲ್ಲಿ?

ಹಿಂದೂ ಭಕ್ತರ ದುಡ್ಡಿಗೆ ಲೆಕ್ಕ ಇಡದ, ಕೊಡದ, ಹಿಂದೂಗಳ ದುಡ್ಡಲ್ಲಿ ಸ್ವಜಾತಿ ಬಸದಿಗಳ ಉದ್ಧಾರ ಮಾಡಿಕೊಂಡಿರುವ, ಸನಾತನ ಮೌಲ್ಯಗಳನ್ನು ಜನರ ತಲೆಯಲ್ಲಿ ತುಂಬುತ್ತಾ 'ಜಾತಿ ವ್ಯವಸ್ಥೆ' ಮತ್ತಷ್ಟು ಗಟ್ಟಿಗೊಳಿಸುವ ಇವರಿಗೆ, ಜಾತಿವಾರು 'ಪಂಕ್ತಿ ಭೋಜನ' ಹಾಕುವವರಿಗೆ ಕರ್ನಾಟಕ ರತ್ನ.

ಶಾಲೆಯಲ್ಲಿ ಓದುವ ಮಕ್ಕಳಿಗೆ ತಿನ್ನಲು ಬೇಯಿಸಿದ ಮೊಟ್ಟೆ ಕೊಡಬೇಕೆಂದಾಗ ಅದು 'ತಾಮಸ ಆಹಾರ'ವೆಂದು ಕೊಳೆತು ಹೋಗುವ ಆಹಾರ ಪದಾರ್ಥ ಕೊಡಬಾರದೆಂದು ವಿರೋಧಿಸಿದವರಿಗೆ, ಗ್ರಾಮೀಣಾಭಿವೃದ್ಧಿಯಲ್ಲಿ ಸ್ವಅಭಿವೃದ್ಧಿ ಕಂಡುಕೊಂಡವರಿಗೆ, ಧರ್ಮಸ್ಥಳ ಸ್ವಸಹಾಯ ಸಂಘಗಳ ಮೂಲಕ ಬಡ್ಡಿ ವ್ಯವಹಾರಕ್ಕಿಳಿದು ಪಕ್ಕಾ ಮಾರ್ವಾಡಿಯಂತೆ ವರ್ತಿಸುವವರಿಗೆ, ಜನರಲ್ಲಿ ಸತ್ಯನಾರಾಯಣ ಪೂಜೆ, ತೀರ್ಥ ಕ್ಷೇತ್ರಗಳ ಯಾತ್ರೆ ಮಾಡಬೇಕೆಂದು ಪರೋಕ್ಷ ಮಾಹಿತಿ ರವಾನಿಸುವುದಲ್ಲದೇ ಚುನಾವಣೆಯನ್ನು ಮುಂದಿಟ್ಟುಕೊಂಡು ಆಯಾ ಕಟ್ಟಿನ ಜಾಗಗಳಲ್ಲಿ ಲಕ್ಷಗಟ್ಟಲೇ ಜನರನ್ನ ಸೇರಿಸಿ ಪರೋಕ್ಷವಾಗಿ ಬಿಜೆಪಿಗೆ ಮತ ಹಾಕುವಂತೆ ಸಂದೇಶ ರವಾನಿಸುವ ಪ್ರಜಾಪ್ರಭುತ್ವ ವಿರೋಧಿಗಳಿಗೆ ಕರ್ನಾಟಕದ ಅತ್ಯುನ್ನತ ಪ್ರಶಸ್ತಿ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರೂ ದೇವರಲ್ಲ, ಎಲ್ಲರೂ ಮನುಷ್ಯರೇ, ಎಲ್ಲರೂ ಸಮಾನರು. ಆದರೆ ಇದಕ್ಕೆ ವಿರುದ್ಧವಾದ ವ್ಯವಸ್ಥೆ ಧರ್ಮಸ್ಥಳದಲ್ಲಿದೆ. ಪೂಜೆ ಮಾಡುವವರು, ಆಡಳಿತ ನಡೆಸುವವರು, ಹಣಕಾಸು ವ್ಯವಹಾರ ನೋಡಿಕೊಳ್ಳುವವರೆಲ್ಲ ಮೇಲ್ವರ್ಗದವರು. ಜನರನ್ನು ನಿಯಂತ್ರಿಸುವವರು, ಬೀದಿ ಗುಡಿಸುವವರು, ಟಾಯ್ಲೆಟ್ ತೊಳೆಯುವವರು ಮಾತ್ರ ದಲಿತರು, ಹಿಂದುಳಿದ ವರ್ಗದವರು. ಹೇಗಿದೆ ನಡೆದಾಡುವ ಮಂಜುನಾಥನ ಸನ್ನಿಧಿಯಲ್ಲಿ ಭಾರತದ ಸನಾತನ ಸಂಸ್ಕೃತಿ?

ಚಂದ್ರಗುತ್ತಿಯಲ್ಲಿ ಬೆತ್ತಲೆ ಸೇವೆ ನಿಷೇಧಿಸಿದ ಸರ್ಕಾರ ಜೈನರ ಕಾರ್ಯಕ್ರಮಗಳಿಗೆ ಕೋಟಿಗಟ್ಟಲೇ ಅನುದಾನ ನೀಡಿ 'ದಿಗಂಬರತ್ವ'ಕ್ಕೆ ಪ್ರೋತ್ಸಾಹ ನೀಡುವುದು ಸರ್ಕಾರದ ಇಬ್ಬಂದಿತನ ತೋರಿದಂತಾಗುತ್ತದೆ. ಶೂದ್ರರು, ದಲಿತರು ಬೆತ್ತಲಾದರೆ ಮೌಢ್ಯ, ಮೇಲ್ಜಾತಿಯವರು ಬೆತ್ತಲಾದರೆ 'ವೈರಾಗ್ಯಮೂರ್ತಿ'. ಹೇಗಿದೆ ಸಮಾಜದ ಧೋರಣೆ?

ಪ್ರಶಸ್ತಿ ನೀಡುವುದರ ಹಿಂದಿನ ರಾಜಕೀಯ ಲಾಭದ ಲೆಕ್ಕಾಚಾರ ಕುರಿತು ವಿವರ ನೀಡಿದ ಪತ್ರಿಕೆಗೆ ಧನ್ಯವಾದಗಳು.

-ಮಂಜಣ್ಣ, ಸೊರಬ


ತನಗೆ ಶಾಸಕ ಸ್ಥಾನ, ಸಚಿವ ಸ್ಥಾನ ಗೌರವ ನೀಡಿ ತನ್ನ ರಾಜಕೀಯ ಅಭ್ಯುದಯಕ್ಕೆ ಕಾರಣವಾದ ಪಕ್ಷವನ್ನೇ ತಿರಸ್ಕರಿಸಿ, ಬಿಜೆಪಿ ಸೇರಿ ಏನೇನೋ ಕನಸು ಕಂಡ ಸೋಮಣ್ಣ ಈಗ ಎಲ್ಲಿಯೂ ಸಲ್ಲದ ದಾಸಯ್ಯನಂತಾಗಿದ್ದಾರೆ. ರಾಜ್ಯಪಾಲರು ಅವರ ನಾಮಕರಣವನ್ನು ಸಾರಾಸಗಟಾಗಿ ತಿರಸ್ಕರಿಸಿದ್ದು ಸರಿಯಾಗಿಯೇ ಇದೆ. ತನಗೆ ಮತ ನೀಡಿದ ಜನರನ್ನೇ ಮರೆತ ಸೋಮಣ್ಣರಿಗೆ ತಕ್ಕಶಾಸ್ತಿಯಾಗಿದೆ. ರಾ.ಸೋಮನಾಥರವರು ಲೇಖನದಲ್ಲಿ ಸೋಮಣ್ಣ ದಾರಿತಪ್ಪಿದ್ದನ್ನು ಸರಿಯಾಗಿ ವಿಶ್ಲೇಷಿಸಿದ್ದಾರೆ. ಎಲ್ಲಾ ಬಿಟ್ಟ ಮಗ ಭಂಗಿ ನೆಟ್ಟ ಎಂಬಂತೆ ಬಿಜೆಪಿ ಸೇರಿ ಎಡವಟ್ಟು ಮಾಡಿಕೊಂಡ ಸೋಮಣ್ಣನ ಪರ ಕನಿಕರ ಪಡುವವರ್‍ಯಾರೂ ಇಲ್ಲ.

-ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

ವಾತ್ಸಾಯನನ ಕಾಮಸೂತ್ರದ ನಾಡಿನಲ್ಲಿ,
ವಾಲೆಂಟೈನ್‌ನ ಪ್ರೇಮ ಸೂತ್ರಕೆ ಎಡೆಯಿಲ್ಲ,
ಸಂಸ್ಕೃತಿಯ ಠೇಕೆದಾರರಿಗೆ,
ಭಾವನೆಗಳ ಬೆಲೆ ಗೊತ್ತಿಲ್ಲ.
ಖಜೂರಾಹೊ ಮಿಥುನ ಶಿಲ್ಪಗಳು,
ನಗ್ನ ಶಿಲಾ ಬಾಲಿಕೆಗಳು,
ನಮ್ಮ ಹೆಮ್ಮೆಯ ಪ್ರತೀಕಗಳು.
ರಾಸಲೀಲೆ, ಲಿಂಗಾರಾಧನೆ,
ದೇವರ ಹಲವು ಕಲ್ಯಾಣಗಳು,
ದೇವತೆಗಳ ವ್ಯಭಿಚಾರಗಳು,
ನಮ್ಮ ಪವಿತ್ರ ಪುರಾಣಗಳು,
ರಸಿಕತೆಯ ಗುಧಾಣಗಳು.
ಸರ್ವ ಸಂಗ ಪರಿತ್ಯಾಗಿಗಳಾದರೂ,
ಋಷಿಗಳಿಗೆ ಹಲವು ಪತ್ನಿಯರು.
ವಾತ್ಸಾಯನನೂ ಮುನಿಯಾಗಿದ್ದ,
ಪ್ರತ್ಯಕ್ಷ ಅನುಭವದಿಂದ
ಸೂತ್ರ ರಚಿಸಿದನಾತ.
ಶನಿಕಾಟ ಹುಲು ಮನುಜರಿಗೆ,
ಮನ್ಮಥನ ಕಾಟ ದೇವರಿಗೆ,
ಸೇನೆಗಳ ಕಾಟ ಪ್ರೇಮಿಗಳಿಗೆ
ಕಾಮನ ಹಬ್ಬ ಸ್ವದೇಶದ್ದು!
ಪ್ರೇಮದ ಹಬ್ಬ ವಿದೇಶದ್ದು?

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ **lankesh70@rediffmail.com**ಗೆ ಕಳಿಸಬಹುದು)



ಶ್ರೀನಿವಾಸ ಮೂರ್ತಿ, ರಾಜ್ 'ವಿಚಿತ್ರ' ಸಂಬಂಧ

ಇದು ಸಿನಿಮಾ ನಟನೊಬ್ಬನ 'ಅಭಿಮಾನ'ದ ಕಥೆ. ಕಥೆಯನ್ನು ಓದಿದ ನಂತರ ನಿಮಗೆ 'ಪ್ರಪಂಚ ...ೂ ಉಂಟೇ?' ಎಂದೆನಿಸದೇ ಇರಲಾರದು. ನಾವು ...ತ್ತಿರುವ ಈ ಕಥೆಯ ಕಥಾನಾಯಕ ಬೇರಾರು ... ಕನ್ನಡ ಚಿತ್ರರಂಗದಲ್ಲಿ ಕಳೆದ ಮೂರೂವರೆ ...ಗಳಿಂದ ಅನೇಕಾನೇಕ ಪಾತ್ರಗಳಲ್ಲಿ ನಟಿಸಿ ಪ್ರೇಕ್ಷಕರ ...ದ್ದ ಪೋಷಕನಟ ಶ್ರೀನಿವಾಸಮೂರ್ತಿ.


ಶ್ರೀನಿವಾಸಮೂರ್ತಿ ತಮ್ಮ ನೇರ ಮತ್ತು ನಿಷ್ಠುರ ...ಮತ್ತು ನುಡಿಗಳಿಂದ ಆಗಾಗ್ಗೆ ಸುದ್ದಿ ಮಾಡುವವರು.

ಬೆಳ್ಳಿ ಬದುಕಿನ ವೃತ್ತಿಜೀವನ ಆರಂಭಿಸುವ ...ಕ್ಕ ರಂಗಭೂಮಿಯಲ್ಲೂ ಸಾಕಷ್ಟು ಹೆಸರು ಮತ್ತು ...ಯನ್ನು ಗಳಿಸಿದ ಶ್ರೀನಿವಾಸಮೂರ್ತಿ ಈಗ ...ಣುತ್ತಿರುವ 'ಆಪ್ತರಕ್ಷಕ' ಚಿತ್ರದಲ್ಲೂ ಪ್ರಮುಖ ...ದಲ್ಲಿ ಕಾಣಿಸಿಕೊಂಡಿದ್ದಾರೆ.

'ಆಪ್ತರಕ್ಷಕ'ದಲ್ಲಿ ನಟಿಸುತ್ತಿರುವಾಗ ವಿಷ್ಣು ಅವರ ...ಷಿ ಮತ್ತು ಕುಂದಿಹೋದ ಜೀವನೋತ್ಸಾಹವನ್ನು ... ವಿಷ್ಣು ಅವರನ್ನು ಮೂರ್ತಿಯವರು ತರಾಟೆಗೆ ...ಕೊಂಡಿದ್ದರು. ಅಷ್ಟೇ ಅಲ್ಲ; 'ನಾಗವಲ್ಲಿ' 'ಪ್ರೇತ'ದ 'ಆಪ್ತರಕ್ಷಕ'ದ ಎಲ್ಲಾ ನಟನಟಿಯರು ಟಿವಿ ಚಾನೆಲ್ ... ಹೇಳಿಕೆ ನೀಡಿದಾಗ, ಅದರಲ್ಲಿ ಭಾಗವಹಿಸದ ...ವಾಸಮೂರ್ತಿ "ನಾಗವಲ್ಲಿ ನನಗೇನೂ ಮಾಡಿಲ್ಲ; ...ಗಿ ನಾನು ಪರ ಅಥವಾ ವಿರೋಧ ಹೇಳಿಕೆ ...ವುದಿಲ್ಲ" ಎಂದು ಟಿವಿ ಮಾಧ್ಯಮದವರನ್ನು ... ತಳ್ಳಿದರು.

...ೂನ್ನೆ ಶ್ರೀನಿವಾಸಮೂರ್ತಿ ಲೋಕಾಭಿರಾಮವಾಗಿ ... ರಂಗಭೂಮಿಯ ಕಷ್ಟದ ದಿನಗಳು ಮತ್ತು ...ಗದಲ್ಲಿನ ಏರಿಳಿತದ ಕ್ಷಣಗಳನ್ನು ನೆನಪಿಸಿಕೊಳ್ಳುತ್ತಾ ... ಕುತೂಹಲಕಾರಿ ಅಂಶಗಳನ್ನು ಬಿಚ್ಚಿಟ್ಟರು.

...ದರಲ್ಲಿ ಅತ್ಯಂತ ಕುತೂಹಲಕಾರಿಯಾದದ್ದು ... ಬೆಳಗ್ಗೆ ದೇವರಿಗೆ ಪೂಜೆ ಮಾಡುವಾಗ ... ಕೋಣೆಯಲ್ಲಿರುವ ನಿರ್ದೇಶಕ ...ಗಯ್ಯನವರ ಫೋಟೋಗೂ ಆರತಿ ಬೆಳಗಿ ...ಡುತ್ತಾರಂತೆ! 'ನಿರ್ದೇಶಕ ಸಿದ್ದಲಿಂಗಯ್ಯನವರು ಇನ್ನೂ ಬದುಕುಳಿದಿದ್ದಾರಲ್ಲ? ಹೀಗೆ ಮಾಡುವುದು ಸರಿಯೇ?' ಎಂದು ಪ್ರಶ್ನಿಸಿದರೆ ಮೂರ್ತಿಯವರ ಬಳಿ ಉತ್ತರ ರೆಡಿಯಾಗಿರುತ್ತದೆ. "ನನ್ನನ್ನು ಸಿನಿಮಾರಂಗಕ್ಕೆ ಕರೆದು ಅವಕಾಶ ಕೊಟ್ಟವರು ನಿರ್ದೇಶಕ ಸಿದ್ದಲಿಂಗಯ್ಯನವರು. ಅನಂತರ ಅವರು ತಮ್ಮ ಬಹುತೇಕ ಚಿತ್ರಗಳಲ್ಲೂ ನನಗೆ ಅವಕಾಶ ನೀಡುತ್ತಾ ಬಂದರು. ಹೀಗಾಗಿ ನನ್ನ ಪಾಲಿಗೆ ಅವರು ದೇವರ ಸಮಾನ. ಇವತ್ತು ನಾನೇನಾದರೂ ಪ್ರಸಿದ್ಧಿ-ಖ್ಯಾತಿ-ಐಶ್ವರ್ಯಗಳನ್ನೆಲ್ಲಾ ಸಂಪಾದಿಸಿದ್ದರೆ ಅದರ ಕೀರ್ತಿ ಸಿದ್ದಲಿಂಗಯ್ಯನವರಿಗೇ ಸಲ್ಲಬೇಕು. ಹೀಗಾಗಿ ನಾನು ದೇವರ ಕೋಣೆಯಲ್ಲಿ ಅವರ ಫೋಟೋವನ್ನಿಟ್ಟು ಪೂಜೆ ಸಲ್ಲಿಸುತ್ತಿದ್ದೇನೆ" ಎಂದು ಮೂರ್ತಿ ಹೆಮ್ಮೆಯಿಂದ ಹೇಳಿದರು.



ಅವರ ಅಭಿಮಾನದ ಮಾತು ಸಿದ್ದಲಿಂಗಯ್ಯನವರಿಗಷ್ಟೇ ಸೀಮಿತವಾಗಿರಲಿಲ್ಲ, "ದೇವರ ಕೋಣೆಯಲ್ಲಿ ನನ್ನ ಅಪ್ಪ-ಅಮ್ಮನ ಫೋಟೋ ನಡುವೆ ಡಾ.ರಾಜ್‌ರವರ ಫೋಟೋ ಕೂಡಾ ಇಟ್ಟು ಪೂಜೆ ಮಾಡುತ್ತೇನೆ" ಎಂದು ಭಾವುಕರಾಗಿ ನುಡಿದರು.

ಹಾಗಂತ ಶ್ರೀನಿವಾಸಮೂರ್ತಿ ರಾಜ್‌ಕುಮಾರ್ ಅವರ ಅಪ್ಪಟ ಅಭಿಮಾನಿ ಎಂದು ನೀವು ಭಾವಿಸಿದರೆ ನಿಮ್ಮ ನಿರೀಕ್ಷೆ ತಪ್ಪು! ರಾಜ್, ಅವರ ಪರಿವಾರ ಹಾಗೂ ಅವರ ಸುತ್ತಮುತ್ತಲಿನ ಮಂದಿಮಾಗಧರನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸುವವರಲ್ಲಿ ಶ್ರೀನಿವಾಸಮೂರ್ತಿ ಮೊದಲಿಗರು.

1982ರಲ್ಲಿ ತೆರೆಕಂಡ 'ಕವಿರತ್ನ ಕಾಳಿದಾಸ' ಚಿತ್ರದಲ್ಲಿ ಭೋಜರಾಜನ ಪಾತ್ರದಲ್ಲಿ ಶ್ರೀನಿವಾಸಮೂರ್ತಿ ಕಾಣಿಸಿಕೊಂಡು ರಾಜ್ ಅವರಿಗೆ ನಟನೆಯಲ್ಲಿ ತೀವ್ರತರ ಪೈಪೋಟಿಯನ್ನು ನೀಡಿದ್ದರು. ಅಂದು ಶ್ರೀನಿವಾಸ ಮೂರ್ತಿಯವರ ನಟನೆಯನ್ನು ಮೆಚ್ಚಿ ಪತ್ರಿಕೆಯವರು ಕೂಡಾ ಸಿಕ್ಕಾಪಟ್ಟೆ ಹೊಗಳಿದ್ದರು. ಆದರೆ ರಾಜ್ ಅವರನ್ನು ಸುತ್ತುವರೆದಿದ್ದ ಭಟ್ಟಂಗಿಗಳ ಕೃಪೆಯಿಂದಾಗಿ ಮುಂದಿನ 20 ವರ್ಷಗಳ ಕಾಲ ಶ್ರೀನಿವಾಸಮೂರ್ತಿಗೆ ರಾಜ್ ಜತೆಗೆ ನಟಿಸಲು ಅವಕಾಶವೇ ಸಿಗಲಿಲ್ಲ! ಅಷ್ಟೇ ಅಲ್ಲ, ಅದಾದನಂತರ ರಾಜ್ ಮತ್ತು ಮೂರ್ತಿಯವರ ಮುಖಾಮುಖಿಯೂ ಯಾವುದೇ ಸಭೆ ಸಮಾರಂಭಗಳಲ್ಲಿ ಆಗಲಿಲ್ಲ. ಆಗಿನ ಕಾಲದಲ್ಲಿ ಇದು ಗಾಂಧಿನಗರದಲ್ಲಿ ಭಾರೀ ದೊಡ್ಡ ಚರ್ಚೆಯ ವಿಷಯವಾಗಿತ್ತು. ರಾಜ್ ಸಂಸ್ಥೆಯಲ್ಲಿ ಶ್ರೀನಿವಾಸಮೂರ್ತಿಯವರಿಗೆ ಅವಕಾಶವಿಲ್ಲವೆಂದು ಗೊತ್ತಾದ ತಕ್ಷಣ ಬೇರೆ ನಿರ್ಮಾಪಕರೂ ಎಚ್ಚರಗೊಂಡು ಅವರಿಗೆ ಅವಕಾಶವನ್ನು ನೀಡುತ್ತಿರಲಿಲ್ಲ.

ಅಂತಹ ಸಂದರ್ಭದಲ್ಲಿ ಒಂದೊತ್ತಿನ ಹೊಟ್ಟೆಪಾಡಿಗಾಗಿ ಶ್ರೀನಿವಾಸಮೂರ್ತಿ ನಾಟಕಗಳಲ್ಲಿ ನಟಿಸಲು ಆರಂಭಿಸಿದರು. ಆ ಪ್ರಕರಣವನ್ನು ನೆನಪಿಸಿಕೊಂಡರೆ ಶ್ರೀನಿವಾಸಮೂರ್ತಿ ಇಂದಿಗೂ ಕೆಂಡಾಮಂಡಲವಾಗುತ್ತಾರೆ. "ಅದು ನನ್ನ ವೃತ್ತಿಜೀವನದ ಕರಾಳ ಅಧ್ಯಾಯ. ನನ್ನ ಬದುಕಿನ ಮತ್ತು ನನ್ನ ಯೌವನದ ಪರಾಕಾಷ್ಠೆಯ ಎರಡು ದಶಕಗಳನ್ನು ಹೀಗೆ ಯಾವುದೇ ತಪ್ಪು ಮಾಡದ ಕಾರಣಕ್ಕಾಗಿ ಹತಾಶನಾಗಿ ಕಳೆಯಬೇಕಾಯಿತು. ಆ ಘಟನೆ ಮತ್ತು ನನಗೆ ಅವಕಾಶವನ್ನು ತಪ್ಪಿಸಿದ ಮಂದಿಮಾಗಧರನ್ನು ನಾನು ಮರೆಯುವುದೂ ಇಲ್ಲ, ಕ್ಷಮಿಸುವುದೂ ಇಲ್ಲ" ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ.

ರಾಜ್ ಪುತ್ರ ಪುನೀತ್ ನಾಯಕನಾಗಿ ಉದ್ಯಮಕ್ಕೆ ಕಾಲಿಟ್ಟಾಗಲೇ ಅವರಿಗೆ ರಾಜ್ ಸಂಸ್ಥೆಯಿಂದ ಮತ್ತೆ ಬುಲಾವ್ ಬಂದದ್ದು. ರಾಜ್ ಕುಟುಂಬ ಮತ್ತು ಮೂರ್ತಿ ಕುಟುಂಬದ ನಡುವಿನ ಬಾಂಧವ್ಯ ಅಲ್ಲಿಂದೀಚೆಗೆ ಗಟ್ಟಿಯಾಗುತ್ತಾ ಬಂತು.

ಇಷ್ಟೆಲ್ಲ ಆಗಿದ್ದರೂ ಶ್ರೀನಿವಾಸಮೂರ್ತಿ ಅಪ್ಪಿತಪ್ಪಿಯೂ ರಾಜ್ ಬಗ್ಗೆ ಕೆಟ್ಟದಾಗಿ ಮಾತನಾಡಿದವರಲ್ಲ. ಬದಲಾಗಿ "ಕನ್ನಡ ಚಿತ್ರರಂಗದಲ್ಲಿ ಡಾ. ರಾಜ್ ತರಹದ ಮತ್ತೊಬ್ಬ ಪರಿಪೂರ್ಣ ಕಲಾವಿದ ಹುಟ್ಟಿ ಬರಲು ಸಾಧ್ಯವೇ ಇಲ್ಲ. ಆ ಮನುಷ್ಯ ಕಲಾವಿದನಾಗಿ ನಮಗೆಲ್ಲರಿಗೂ ಸ್ಫೂರ್ತಿಯ ಚಿಲುಮೆಯಾಗಿದ್ದವರು. ಕರ್ನಾಟಕದಲ್ಲಷ್ಟೇ ಅಲ್ಲ ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಪ್ರಬುದ್ಧವಾದ ಮತ್ತೊಬ್ಬ ಕಲಾವಿದನನ್ನು ನಾನು ಕಂಡಿಲ್ಲ, ಆ ಕಾರಣಕ್ಕಾಗೇ ನಾನು ಡಾ.ರಾಜ್ ಫೋಟೋವನ್ನಿಟ್ಟು ಅದಕ್ಕೆ ಪೂಜೆ ಸಲ್ಲಿಸುತ್ತೇನೆ" ಎನ್ನುತ್ತಾರೆ.

ವಿಶೇಷವೆಂದರೆ ಇದೇ ಶ್ರೀನಿವಾಸಮೂರ್ತಿ ಈಟಿವಿಯಲ್ಲಿ 'ಅಣ್ಣ ಬಸವಣ್ಣ' ಎಂಬ ಧಾರಾವಾಹಿಯಲ್ಲಿ ಬಸವಣ್ಣನಾಗಿ ಕಾಣಿಸಿಕೊಂಡಾಗ ಉತ್ತರ ಕರ್ನಾಟಕದಲ್ಲಿ ಜನರೆಲ್ಲಾ ಇವರ ಕಾಲಿಗೆ ಅಡ್ಡಬಿದ್ದು ಆರತಿ ಮಾಡುತ್ತಿದ್ದರು!

ಹೀಗೆ ಚಿತ್ರರಂಗದಲ್ಲಿ ಅಭಿಮಾನ ಎಂಬುದು ಯಾರ್‍ಯಾರಿಗೋ, ಎಲ್ಲೆಲ್ಲೋ, ಏನೇನೋ ಕಾರಣಗಳಿಗೆ ಉಂಟಾಗುತ್ತದೆ ಎಂಬುದಕ್ಕೆ ಶ್ರೀನಿವಾಸಮೂರ್ತಿ ಒಂದು ತಾಜಾ ಉದಾಹರಣೆ.

● ಶೆಣೈ

'ಭೂತ'ಲಿಂಗಯ್ಯನವರ ಮಾತು-ಮಂಥನ!




ನಾಗಾಭರಣ ಅಧ್ಯಕ್ಷತೆಯ ಸಿನಿಮಾ ಅಕಾಡೆಮಿ 'ಮಾತು-ಮಂಥನ' ಎಂಬ ಕಾರ್ಯಕ್ರಮವನ್ನು ಇತ್ತೀಚೆಗೆ ಆರಂಭಿಸಿದೆ. ಅದು ಕನ್ನಡ ಚಿತ್ರರಂಗದಲ್ಲಿ ಅನೇಕ ಸಾಧನೆ, ಸಾಹಸಗಳನ್ನು ಮಾಡಿದ ಹಿರಿಯ ಕಲಾವಿದ ಮತ್ತು ತಂತ್ರಜ್ಞರನ್ನು ಗೌರವಿಸಿ, ಪರಿಚಯಿಸಿ ಅವರೊಂದಿಗೆ ಸಂವಾದ ನಡೆಸುವ ಕಾರ್ಯಕ್ರಮ. ಒಂದು ರೀತಿಯಲ್ಲಿ ಈ ಕಾರ್ಯಕ್ರಮದ ಸ್ವರೂಪ ನಿಜಕ್ಕೂ ಸ್ವಾಗತಾರ್ಹ. ಹಿಂದಿನ ಕಾಲದಲ್ಲಿ ಸಿನಿಮಾ ಉದ್ಯಮ ಹೇಗಿತ್ತು, ಆ ಸಂದರ್ಭದಲ್ಲಿ ಪರಿಸ್ಥಿತಿ ಎಂತಹದ್ದಾಗಿತ್ತು, ತಾಂತ್ರಿಕ ಸೌಲಭ್ಯ, ನಾಯಕ-ನಾಯಕಿಯರ ದರ್ಬಾರು ಇವೆಲ್ಲವೂ ಹೇಗಿತ್ತು ಎಂದು ಅರಿಯಲು ಇದೊಂದು ಉತ್ತಮವಾದ ವೇದಿಕೆಯಾಗಿದೆ.

ಆದರೆ ದುರದೃಷ್ಟವಶಾತ್ ಈ ವೇದಿಕೆಯಲ್ಲಿ ಮಾತನಾಡುವ ಹಿರಿಯರೆಲ್ಲಾ 'ನಮ್ಮ ಕಾಲದಲ್ಲಿ ಎಲ್ಲವೂ ಚೆನ್ನಾಗಿತ್ತು; ಈಗಿನ ಕಾಲ ಸಂಪೂರ್ಣ ಕೆಟ್ಟುಹೋಗಿದೆ' ಎಂಬರ್ಥ ಬರುವ ಮಾದರಿಯಲ್ಲಿ ಮಾತನಾಡುತ್ತಿದ್ದಾರೆ. ವಾಸ್ತವವಾಗಿ ಅಂದಿನ ಸಿನಿಮಾ ಜಗತ್ತಿನ ಸಂದರ್ಭವನ್ನು ಪರಿಚಯಿಸುವ ಬದಲು ಬಹುತೇಕ ಮಾತುಗಾರರು ತಮ್ಮನ್ನು ತಾವೇ ಹೊಗಳಿಕೊಳ್ಳಲು ಈ ವೇದಿಕೆಯನ್ನು ಬಳಸಿಕೊಳ್ಳುತ್ತಿದ್ದಾರೆ. ಮೊನ್ನೆ ಈ ಕಾರ್ಯಕ್ರಮಕ್ಕೆ ಅತಿಥಿಯಾಗಿ ಬಂದಿದ್ದ ನಿರ್ದೇಶಕ ಸಿದ್ದಲಿಂಗಯ್ಯನವರ 'ಅಹಂ' ನೋಡಿ ಎಲ್ಲರೂ ಬೇಸರ ಪಟ್ಟುಕೊಂಡರು. "ನಾನು ಯಾರನ್ನೂ, ಯಾವುದೇ ನಾಯಕ-ನಾಯಕಿಯರನ್ನು ಕೇರ್ ಮಾಡುತ್ತಿರಲಿಲ್ಲ. ಸ್ವತಃ ಡಾ.ರಾಜ್‌ಕುಮಾರ್ ನನ್ನ ಮುಂದೆ ಸಿಗರೇಟ್ ಸೇದುತ್ತಿರಲಿಲ್ಲ..." ಎಂಬಿತ್ಯಾದಿಯಾಗಿ ಅವರು ಹೇಳಿದ್ದು ತೀರಾ ಅಸಂಬದ್ಧವಾಗಿತ್ತು.

ಕನಿಷ್ಠ 'ಬಂಗಾರದ ಮನುಷ್ಯ', 'ಭೂತಯ್ಯನ ಮಗ ಅಯ್ಯು' ಮೊದಲಾದ ಮಾಸ್ಟರ್‌ಪೀಸ್ ಚಿತ್ರಗಳ ಬಗ್ಗೆ ಇವರು ಮಾತನಾಡಬಹುದು ಎಂದು ನಿರೀಕ್ಷಿಸಿ ಹೋದವರಿಗೆ ಇವರ ಗಾಸಿಪ್ ಮತ್ತು ಸಣ್ಣತನದ ಮಾತುಗಳು ಅರಗಿಸಿಕೊಳ್ಳಲು ಕಷ್ಟವಾಯಿತು. ಇನ್ನು ಮುಂದಾದರೂ ಸಿನಿಮಾ ಅಕಾಡೆಮಿ ಇಂತಹ ಆಭಾಸಗಳನ್ನು ತಪ್ಪಿಸಿಕೊಳ್ಳುವತ್ತ ಹೆಚ್ಚು ಗಮನಹರಿಸಲಿ.

ಮೂರ್ತಿ ಮರೆತ ಚೇಂಬರ್...

ಕಳೆದ ವರ್ಷ ಉಮಾಶ್ರೀ ಮತ್ತು ಪ್ರಕಾಶ್ ರೈ ಅವರಿಗೆ ರಾಷ್ಟ್ರ ಪ್ರಶಸ್ತಿ ದೊರೆತಾಗ ಜಯಮಾಲ ಅವರು ಅತ್ಯಂತ ಮುತುವರ್ಜಿ ವಹಿಸಿ ಚೇಂಬರ್‌ಗೆ ಅವರಿಬ್ಬರನ್ನು ಕರೆಸಿ ಸನ್ಮಾನ ಮಾಡಿದ್ದರು.



ಆದರೆ ಇಂದು ಅದೇ ಜಯಮಾಲ ನೇತೃತ್ವದ ಚೇಂಬರ್‌ನವರಿಗೆ ಈ ರಾಷ್ಟ್ರದ ಅತ್ಯುನ್ನತ ಪ್ರಶಸ್ತಿಯಾದ ದಾದಾ ಸಾಹೇಬ್ ಫಾಲ್ಕೆ ಪಡೆದ ಕನ್ನಡಿಗ ಛಾಯಾಗ್ರಹಕ ವಿ.ಕೆ. ಮೂರ್ತಿಯನ್ನು ಸನ್ಮಾನಿಸಬೇಕೆಂಬುದು ಯಾಕೆ ನೆನಪಾಗುತ್ತಿಲ್ಲ? ನಾಡಿನ ಅನೇಕ ಸಂಘಸಂಸ್ಥೆಗಳು ಈಗಾಗಲೇ ಮೂರ್ತಿಯವರನ್ನು ಕರೆಸಿ ಸನ್ಮಾನ ಮಾಡುತ್ತಿವೆ. ಆದರೂ ಕನ್ನಡ ಚಿತ್ರರಂಗದವರು ಮಾತ್ರ ತಮಗೂ ಅದಕ್ಕೂ ಸಂಬಂಧವೇ ಇಲ್ಲ ಎಂಬಂತೆ ಸುಮ್ಮನಿದ್ದಾರೆ.

ಕಲಾವಿದರನ್ನು, ತಂತ್ರಜ್ಞರನ್ನೂ ಕನ್ನಡ ಚಿತ್ರರಂಗದ ನೋಡಿಕೊಳ್ಳುವ ಪರಿ ಇದು.

ದಯಾಳ್ 'ಹರಿಕಥೆ' ಹೇಳಿ 'ಗೋವಿಂದಾ' ಅಂದ



ಗಾಂಧಿನಗರದ ಸಹವಾಸದಿಂದ ಮೈತುಂಬ ಸಾಲ ಮಾಡಿಕೊಂಡವರು, ಮನೆಮಠ ಮಾರಿಕೊಂಡು ಬೀದಿಗೆ ಬದ್ದವರು, ಎಲ್ಲವೂ ಮಣ್ಣುಪಾಲಾಗಿ ಕಡೆಗೊಂದು ದಿನ ಆತ್ಮಹತ್ಯೆಗೆ ಶರಣಾದವರು ... ಚಿತ್ರರಂಗಕ್ಕೆ ಇವ್ಯಾವೂ ಹೊಸದೇನಲ್ಲ.

ಮೊನ್ನೆ ನಡೆದ ಸಾಯಿಪ್ರಕಾಶ್ ಎಪಿಸೋಡು ಇದಕ್ಕೆ ಲೇಟೆಸ್ಟ್ ಉದಾಹರಣೆಯಷ್ಟೇ. ಈಗ ಅದೇ ಹಾದಿಯಲ್ಲಿ ಸಾಗಿರುವವರು ಮತ್ತೊಬ್ಬ ನಿರ್ದೇಶಕ ಕಂ ನಿರ್ಮಾಪಕ ದಯಾಳ್!

ಈ ದಯಾಳ್ ಇತ್ತೀಚೆಗೆ 'ಹರಿಕಥೆ' ಮಾಡಲು ಹೋಗಿ ಹರಹರಾ ಎನ್ನುತ್ತಿದ್ದಾರೆ. ಎನ್. ಕುಮಾರ್, ಚನ್ನೇಗೌಡರೊಂದಿಗೆ ಈ ಚಿತ್ರದ ಪಾಲುದಾರರಾಗಿ ಒಟ್ಟು 70 ಲಕ್ಷ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದರು. ಈಗಾಗಲೇ 'ಹರಿಕಥೆ'ಯ ಟೀವಿ ರೈಟ್ಸ್ 60 ಲಕ್ಷಕ್ಕೆ ಮಾರಾಟವಾಗಿರುವುದರಿಂದ ಅಗ್ರಿಮೆಂಟ್ ಪ್ರಕಾರ ಆ ಮೊತ್ತ ಕುಮಾರ್ ಮತ್ತು ಚನ್ನೇಗೌಡರ ಪಾಲಾಗಿದೆ. ಆದರೆ ಈಗ ಸಿನಿಮಾ ಪ್ರಿಂಟು, ಪಬ್ಲಿಸಿಟಿಗೆ ಖರ್ಚು ಎಲ್ಲದಕ್ಕೂ ಹಣ ಬೇಕಿದ್ದು ದಯಾಳ್ ಕಂಗಾಲಾಗಿದ್ದಾರೆ. ಯಾಕೆಂದರೆ ಅವರ ಬಳಿ ನಯಾ ಪೈಸೆಯಿಲ್ಲ. ಹೀಗಾಗಿ ಚಿನ್ನಪ್ಪ ಗಾರ್ಡನ್ ಟಿವಿ ಟವರ್ ಬಳಿ ಇರುವ ತನ್ನ ಮನೆಯನ್ನೇ ಅಡ ಇಟ್ಟು 'ಹರಿಕಥೆ'ಯನ್ನು ರಿಲೀಸ್ ಮಾಡಲು ಹೊರಟಿದ್ದಾನೆ ದಯಾಳ್.



ಹಿಂದೆ 'ಗಾಳಿಪಟ' ಚಿತ್ರದ ಕಾರ್ಯಕಾರಿ ನಿರ್ಮಾಪಕನಾಗಿದ್ದಾಗ ದಯಾಳ್ ಅನಾಮತ್ತಾಗಿ ಹೊಡೆದಿಟ್ಟಿದ್ದ ದುಡ್ಡೆಲ್ಲಾ 'ಸರ್ಕಸ್'ನಲ್ಲಿ ಕಳೆದುಕೊಂಡಿದ್ದ. ಗಣೇಶನನ್ನು ಹಾಕಿಕೊಂಡರೆ ಕೈತುಂಬ ಹಣ ಬಾಚಬಹುದು ಎಂಬ ದಯಾಳನ ತಂತ್ರವೆಲ್ಲಾ ಮಣ್ಣುಮುಕ್ಕಿ ಚೊಂಬಿನ ಜೊತೆಗೆ ನೀರೂ ಹೋದಂತೆ 'ಸರ್ಕಸ್'ಗಾಗಿ ವ್ಯಯಿಸಿದ್ದ ಅಷ್ಟೂ ಹಣ ಕೊಚ್ಚಿಹೋಗಿತ್ತು.

ಈ ಬಾರಿ ಪೂಜಾ ಮತ್ತು ರಾಧಿಕಾ ಎಂಬ ಗಾಂಧಿ ಸಹೋದರಿಯರನ್ನು ಹಾಕಿಕೊಂಡು 'ಹರಿಕಥೆ' ಮಾಡಲು ಹೋಗಿ ಈ ಅಕ್ಕ-ತಂಗಿಯರೊಂದಿಗೆ ಹೆಜ್ಜೆಹೆಜ್ಜೆಗೂ ದಯಾಳ್ ಕಿರಿಕ್ಕು ಮಾಡಿಕೊಂಡಿದ್ದ. ರಾಧಿಕಾ ಗಾಂಧಿಯೊಂದಿಗೆ ಅನುಚಿತವಾಗಿ ವರ್ತಿಸಿ ರಾದ್ಧಾಂತ ಮಾಡಿಕೊಂಡಿದ್ದ. ಪೂಜಾ ಗಾಂಧಿ ಕೂಡಾ 'ನನ್ನಿಂದ ದಯಾಳ್ ಸಿಕ್ಕಾಪಟ್ಟೆ ಎಕ್ಸ್‌ಪೋಸ್ ಮಾಡಿಸಿಬಿಟ್ಟಿದ್ದಾರೆ' ಎಂದು ಮೆತ್ತಗೆ ರೊಳ್ಳೆ ತೆಗೆದಿದ್ದಳು.

ಇನ್ನು ಚಿತ್ರದಲ್ಲಿ ದುಡಿದಿರುವ ಯಾವ ತಂತ್ರಜ್ಞರಿಗೂ ಪೂರ್ತಿ ಪೇಮೆಂಟ್ ಸಂದಾಯವಾಗಿಲ್ಲ. ಪೂಜಾ ಗಾಂಧಿಗೆ ಕೂಡಾ ಆಕೆಯ ಪಾಲಿನ ಸಂಭಾವನೆ ತಲುಪಿಲ್ಲವಾದ್ದರಿಂದ ಚಿತ್ರದ ಪ್ರಮೋಷನ್‌ಗಳಲ್ಲೂ ಆಕೆ ಪಾಲ್ಗೊಳ್ಳುವುದು ಡೌಟು. ಇನ್ನು ಚಿತ್ರದ ನಾಯಕ್ ಮುರುಳಿಗೆ ಬಂದಿದ್ದೆಷ್ಟು ಗೊತ್ತಿಲ್ಲವಾದರೂ ಮತ್ತೊಬ್ಬ ನಾಯಕ ನವೀನ್‌ಕೃಷ್ಣನಿಗೆ ನಾಲ್ಕಾಣೆಯ ಸಂಭಾವನೆ ನೀಡದೆ ದಯಾಳ್ ಯಾಮಾರಿಸಿದ್ದಾನೆ.

ಈ ಎಲ್ಲ ಗೋಳುಗಳ ಮಧ್ಯೆ 'ಹರಿಕಥೆ'ಯನ್ನು ಖರೀದಿಸಲು ಯಾರೂ ಮುಂದೆ ಬರುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ 'ಹರಿಕಥೆ' ಬಿಡುಗಡೆಯಾದರೂ ದಯಾಳ್‌ಗೆ ಸಾಲಗಳಿಂದ ಬಿಡುಗಡೆ ಸಿಗುವುದು ಕಷ್ಟ ಸಾಧ್ಯ ಎನ್ನುತ್ತಿದೆ ಗಾಂಧಿನಗರ.



ರಕ್ಷಿತಾ ಪೌರೋಹಿತ್ಯ!



ಮಾಜಿ ಹೀರೋಯಿನ್ ರಕ್ಷಿತಾ ಈಗ ಸ್ವಯಂವರ ನಡೆಸಲು ಮುಂದಾಗಿದ್ದಾಳೆ.

ಇದೇನಪ್ಪ ಇದು, ನಿರ್ದೇಶಕ ಪ್ರೇಮ್‌ನನ್ನು ಲವ್ ಮಾಡಿ, ಮದುವೆಯಾಗಿ, ಈಗಷ್ಟೇ 'ಸೂರ್ಯ'ನನ್ನು ಹಡೆದಿರುವ ರಕ್ಷಿತಾಗೆ ಮತ್ತೊಂದು ವರ ಬೇಕೇ? ಎಂದು ಆಶ್ಚರ್ಯಗೊಳ್ಳಬೇಡಿ.

ರಕ್ಷಿತಾ ಸ್ವಯಂವರ ನಡೆಸುತ್ತಿರುವುದು ಕಿರುತೆರೆಯ ಕಾರ್ಯಕ್ರಮವೊಂದಕ್ಕೆ. ಸುವರ್ಣ ವಾಹಿನಿಯಲ್ಲಿ ಮಾರ್ಚ್ ತಿಂಗಳಿನಿಂದ ಪ್ರಸಾರವಾಗಲಿರುವ ಈ ಕಾರ್ಯಕ್ರಮದಲ್ಲಿ ರಕ್ಷಿತಾ ಸ್ವಯಂವರದ ಸೂತ್ರವನ್ನು ಹಿಡಿಯುತ್ತಾಳಂತೆ. ಈ ಕಾರ್ಯಕ್ರಮದ ಮೂಲಕ ಅಂಗವಿಕಲ ವಧೂ-ವರರನ್ನು, ಅಂತರ್ಜಾತಿಯ ಪ್ರೇಮಿಗಳನ್ನು ಒಟ್ಟಿಗೇ ಸೇರಿಸಿ ಅವರಿಗೆ ಮದುವೆ ಮಾಡಿಸುವುದು ರಕ್ಷಿತಾಳ ಜವಾಬ್ದಾರಿಯಂತೆ.

ಮದುವೆ, ಮನೆ, ಮಗು ಎಂದಿದ್ದ ರಕ್ಷಿತಾ ಈಗ ಈ ರೀತಿಯ ಪೌರೋಹಿತ್ಯಕ್ಕೂ ಇಳಿದಿರುವುದೇ ಸದ್ಯದ ವಿಶೇಷ.



ಕೂಸೇ ಇಲ್ಲ: ಕುಲಾವಿ ಹೊಲಿದ ಉಪ್ಪಿ!

ಉಪ್ಪಿಗೆ ಏನಾಗಿದೆಯೆಂದೇ ಅರ್ಥವಾಗುತ್ತಿಲ್ಲ.

ಮೊನ್ನೆ ಸಿನಿಮಾ ಪತ್ರಕರ್ತರ ಮನೆಗಳಿಗೆ ಬೆಳಗ್ಗಿನ ಜಾವ ಉಪ್ಪಿ ದಿನಪತ್ರಿಕೆಗಳನ್ನು ಹಾಕಿಸಿದ್ದಾರೆ. ಟೈಮ್ಸ್ ಆಫ್ ಇಂಡಿಯಾ, ಉದಯವಾಣಿ, ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್, ಸಂಯುಕ್ತ ಕರ್ನಾಟಕ, ಕನ್ನಡಪ್ರಭ, ವಿಜಯ ಕರ್ನಾಟಕ.... ಈ ಎಲ್ಲಾ ದಿನಪತ್ರಿಕೆಗಳ ಮಾಸ್ಟರ್ ಹೆಡ್ ಅನ್ನು ಬಳಸಿ 16 ಪುಟಗಳ ಪತ್ರಿಕೆಯೊಂದನ್ನು ಸಿದ್ಧಪಡಿಸಿರುವ ಉಪ್ಪಿ ಅದನ್ನು ವರದಿಗಾರರ ಮನೆಬಾಗಿಲಿಗೆ ತಲುಪಿಸಿದ್ದಾರೆ.

ಬೆಳಗ್ಗೆ ಎದ್ದಾಕ್ಷಣ ನೋಡಿದವರಿಗೆ ಉಪ್ಪಿಯ ಫೋಟೋ ಮತ್ತು ಅವರ ಹೊಸ ಚಿತ್ರದ ಸುದ್ದಿ ಎಲ್ಲಾ ದಿನಪತ್ರಿಕೆಗಳ ಮುಖಪುಟದಲ್ಲಿ ಪ್ರಕಟವಾಗಿರುವಂತೆ ಭಾಸವಾಗುತ್ತದೆ. ಆದರೆ ಕೂಡಲೆ ಇದೊಂದು ಪಬ್ಲಿಸಿಟಿ ಗಿಮಿಕ್ ಎಂದು ಅರ್ಥವಾಗುತ್ತದೆ.



ಈ ಪಬ್ಲಿಸಿಟಿ ಗಿಮ್ಮಿಕ್ಕನ್ನು ಈಗ ಬೇರೆ ಬೇರೆ ರೀತಿಯಲ್ಲಿ ಅರ್ಥೈಸಲಾಗುತ್ತಿದೆ. ಕೆಲವರ ಪ್ರಕಾರ ಇದು ದಿನಪತ್ರಿಕೆಯ ವರದಿಗಾರರನ್ನು ಲೇವಡಿ ಮಾಡಿದಂತಿದೆ. ಇನ್ನು ಕೆಲವರ ಪ್ರಕಾರ ಇದು ಉಪ್ಪಿ ಪ್ರಚಾರದ ಹುಚ್ಚು. ಹಾಗೆಯೇ ಕೆಲವರು ಇದನ್ನು ಮೆಚ್ಚಿ ಒಳ್ಳೆಯ ಐಡಿಯಾ ಎನ್ನುತ್ತಿದ್ದಾರೆ.

ಆದರೆ ನಿಜವಾಗಲೂ ಇದೊಂದು ಕೀಳು ಅಭಿರುಚಿಯ ಗಿಮಿಕ್ ಎಂದೇ ಹೇಳಬೇಕಾಗುತ್ತದೆ. ಈ ನಕಲಿ ಪತ್ರಿಕೆಗಳಲ್ಲಿ ಉಪ್ಪಿಯ ಸಿನಿಮಾಗಳನ್ನು, ವ್ಯಕ್ತಿತ್ವವನ್ನು ಯದ್ವಾತದ್ವಾ ಹೊಗಳಲಾಗಿದೆ. ಆತನ ಹೊಸ ಚಿತ್ರ 'ಸೂಪರ್' ಕನ್ನಡ ಚಿತ್ರರಂಗದ ಮಾರುಕಟ್ಟೆಯಲ್ಲಿ ಹೊಸ ಅಧ್ಯಾಯವನ್ನು ತೆರೆಯಲಿದೆ ಎಂದು ಬರೆಯಲಾಗಿದೆ. ರಾಕ್‌ಲೈನ್ ವೆಂಕಟೇಶ್ ಅವರ ನಿರ್ಮಾಣದ 25ನೇ ಚಿತ್ರವಾದ 'ಸೂಪರ್' ರಾಷ್ಟ್ರಮಟ್ಟದಲ್ಲಿ ಗಮನ ಸೆಳೆಯಲಿದೆ ಎಂದು ಪುಂಗಿ ಊದಲಾಗಿದೆ. ಇದೆಲ್ಲವೂ ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸಿದಂತೆ ಅಲ್ಲವೇ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44